ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಬೇಲಿಗಳನ್ನು ಮುರಿದ ಮಹಿಳಾ ಶಕ್ತಿ

ಸಂಪುಟ 10 | ಸಂಚಿಕೆ 27 | ಪುಟ 16 | ಜುಲೈ 3, 2016 | ರೂ. 10/-

web: www.janashakthi.co.in e-mail : js_weekly@yahoo.com



ಸಂಪುಟ ಪುನರ್ರಚನೆ: ಕ್ರಿಯಾಶೀಲತೆಗೋ, ಮತ್ತೆ ಕಿತ್ತಾಟಕ್ಕೋ?

ಕನಿಷ್ಟ ಕೂಲಿ 18,000 ರೂ. ಏಕಿಲ್ಲ?

ಉದಾರ FDI ಇನ್ನಷ್ಟು ಅನರ್ಥಕಾರಿ

ಜಿ.ಎಸ್.ಟಿ: ರಾಜ್ಯಗಳ ಅನುಮಾನ

ಜುಲೈ 11–17:

ಬೆಲೆಯೇರಿಕೆ, ನಿರುದ್ಯೋಗದ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ

ರಕ್ಷಣೆ, ಔಷಧಿ ಇತ್ಯಾದಿಗಳಲ್ಲಿ ಎಫ್‌ಡಿಐಗೆ ಮುಕ್ತಪ್ರವೇಶ- ಕಾರ್ಮಿಕ ಸಂಘಗಳ ತೀವ್ರ ವಿರೋಧ

ಮೋದಿ ಸರಕಾರ ಆರ್ಥಿಕದ ಒಂಭತ್ತು ಪ್ರಮುಖ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಯನ್ನು ಬಹಳ ಸುಲಭಗೊಳಿಸುವ ಬದಲಾವಣೆಗಳನ್ನು ಪ್ರಕಟಿಸಿದೆ. ಇದರಲ್ಲಿ ರಕ್ಷಣೆ, ಔಷಧಿ, ಆಹಾರ ಸಂಸ್ಕರಣೆ, ವಿಮಾನಯಾನವೂ ಸೇರಿವೆ. ಇದನ್ನು ಸಿಐಟಿಯು, ಎಐಟಿಯುಸಿ ಹಾಗೂ ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮಾತ್ರವೇ ಅಲ್ಲ, ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್ ಕೂಡ ವಿರೋಧಿಸಿದೆ.

ಪ್ರಧಾನ ಮಂತ್ರಿಗಳು ಭಾರತತವೀಗ ವಿದೇಶಿ ನೇರ ಹೂಡಿಕೆಗಳಿಗೆ ಜಗತ್ತಿನ ಅತ್ಯಂತ ಮುಕ್ತ ದೇಶವಾಗಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ ಎಂಬುದನ್ನು ಟೀಕಿಸಿರುವ ಸಿಐಟಿಯು ವಾಸ್ತವವಾಗಿ ಈ ಸರಕಾರ ನಮ್ಮ ದೇಶದ ಜನತೆಯ ಹಿತಗಳನ್ನು ಬಲಿಗೊಟ್ಟು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಶರಣಾಗಿರುವುದನ್ನು ಇದು ತೋರಿಸುತ್ತದೆ ಎಂದಿದೆ.

ಇದು ಉದ್ಯೋಗ ನಿರ್ಮಾಣಕ್ಕೆ ದೊಡ್ಡ ಒತ್ತು ಕೊಡುತ್ತದೆ ಎನ್ನುವುದು ಒಂದು ಸಂಪೂರ್ಣ ಹುಸಿ ವಾದ ಎಂದು ಅದು ಹೇಳಿದೆ.

ಎಫ್‌ಡಿಐಗೆ ಎಷ್ಟೇ ರಿಯಾಯ್ತಿ, ವಿನಾಯ್ತಿ, ಪ್ರೋತ್ಸಾಹಗಳನ್ನು ಕೊಟ್ಟರೂ ಭಾರತಕ್ಕೆ ಬಂದ ಎಫ್‌ಡಿಐ ನಾಮ ಮಾತ್ರದ್ದು, ಅದೂ ಹೆಚ್ಚಾಗಿ ಈಗಾಗಲೇ ಇರುವ ಕಂಪನಿಗಳ ಶೇರುಗಳ ಖರೀದಿಗೆಯೇ ಹೊರತು ಹೊಸ ಉದ್ಯೋಗಾವಕಾಶ ನಿರ್ಮಿಸುವ ಉದ್ದಿಮೆಗಳಲ್ಲಿ ಹೂಡಿಕೆಯಾಗಿ ಅಲ್ಲ ಎಂಬುದು ಇದುವರೆಗಿನ ಅನುಭವ. ಇನ್ನೊಂದೆಡೆಯಲ್ಲಿ ನಮ್ಮ ಮಾರುಕಟ್ಟೆಗಳನ್ನು ವಿದೇಶೀಯರಿಗೆ ತೆರೆದು ಕೊಟ್ಟಿರುವುದರಿಂದ ನಮ್ಮ ಉದ್ದಿಮೆಗಳು, ಅದರಲ್ಲೂ ಬಹಳಷ್ಟು ಉದ್ಯೋಗಾವಕಾಶಗಳನ್ನು ನಿರ್ಮಿಸಿರುವ ಸಣ್ಣ ಮತ್ತು ಮಧ್ಯಮಪ್ರಮಾಣದ ಉದ್ದಿಮೆಗಳು ವಿದೇಶಿ ಕಂಪನಿಗಳೊಂದಿಗೆ ಸ್ಪರ್ಧಿಸಲಾರದೆ ಮುಚ್ಚಿ ಹೋಗುತ್ತಿದ್ದು ಉದ್ಯೋಗಾವಕಾಶಗಳು ವಾಸ್ತವವಾಗಿ ಕಡಿತಗೊಳ್ಳುತ್ತಿವೆ.

ಈ ಕಾರಣಕ್ಕಾಗಿಯೇ ಕಾರ್ಮಿಕ ಸಂಘಟನೆಗಳು ಒಕ್ಕೊರಲಿನಿಂದ ಸರಕಾರದ ಎಫ್‌ಡಿಐ ಧೋರಣೆಯನ್ನು ವಿರೋಧಿಸುತ್ತಿವೆ. ಸಪ್ಟಂಬರ್ 2ರ ಮುಷ್ಕರದ 12 ಬೇಡಿಕೆಗಳಲ್ಲಿ ವಿಮೆ, ರಕ್ಷಣೆ, ರೈಲ್ವೆ ಇತ್ಯಾದಿಗಳಲ್ಲಿ ಎಫ್‌ಡಿಐಗೆ ಅವಕಾಶ ನಿಡುತ್ತಿರುವ ಧೋರಣೆಯನ್ನು ಹಿಂತೆಗೆದು ಕೊಳ್ಳಬೇಕು ಎಂಬುದು ಒಂದು. ಮೋದಿ ಸರಕಾರ ನಮ್ಮ ದೇಶದ ಹಿತಾಸಕ್ತಿಗಳನ್ನು ಬಲಿಗೊಟ್ಟು ಬಹುರಾಷ್ಟ್ರೀಯ ಕಂಪನಿಗಳನ್ನು ತೃಪ್ತಿಪಡಿಸುವ ಆತುರದಲ್ಲಿ ದೇಶದ ಕಾರ್ಮಿಕ ಆಂದೋಲನದ ಈ ಒಮ್ಮತದ ಬೇಡಿಕೆಗಳ ಬಗ್ಗೆ ತನ್ನ ಸಂಪೂರ್ಣ ನಿರ್ಲಕ್ಷ್ಯವನ್ನು ಪ್ರದರ್ಶಿಸಿದೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ. ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಸಂಘ ಪರಿವಾರಕ್ಕೆ ಸೇರಿರುವ, ಕಳೆದ ವರ್ಷದ ವರೆಗೆ ಇತರ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಜಂಟಿ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದ ಬಿಎಂಎಸ್ ಕಳೆದ ಸಪ್ಟಂಬರ್ 2 ಸಾರ್ವತ್ರಿಕ ಮುಷ್ಕರ ರಾಜಕೀಯ ಪ್ರೇರಿತ, ಏಕೆಂದರೆ ಸರಕಾರ ಕಾರ್ಮಿಕ ಸಂಘಗಳ ಬೇಡಿಕೆಗಳಲ್ಲಿ ಹಲವನ್ನು ಒಪ್ಪಿದೆ ಎನ್ನುತ್ತ ಹೊರಗುಳಿದಿತ್ತು. ಆದರೆ ಈಗ ಅದು ಕೂಡ ಮೋದಿ ಸರಕಾರದ ಈ ನಿರ್ಧಾರವನ್ನು ವಿರೋಧಿಸಬೇಕಾಗಿ ಬಂದಿದೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲರೊಡನೆಯೂ ಚರ್ಚೆ ನಡೆಸಬೇಕು ಎಂದು ಅದು ಆಗ್ರಹಿಸಿದೆ. ರಕ್ಷಣೆ, ನಾಗರಿಕ ವಿಮಾನಯಾನ ಮುಂತಾದ ಮಹತ್ವದ ವಲಯಗಳನ್ನು ಎಫ್‌ಡಿಐಗೆ ತೆರೆಯುವುದು ಸೂಕ್ತವಲ್ಲ ಎಂದಿದೆ. ದೇಶದಲ್ಲಿ ಎಫ್‌ಡಿಐಗೆ ಉತ್ತೇಜನೆ ನೀಡಲು ಬಹಳಷ್ಟು ಪ್ರಯತ್ನಗಳನ್ನು ನಡೆಸಿದ್ದರೂ ಹೂಡಿಕೆಗಳೂ ಹರಿದು ಬರಲಿಲ್ಲ, ಉದ್ಯೋಗವೂ ಹೆಚ್ಚಲಿಲ್ಲ ಎಂಬುದನ್ನು ಬಿಎಂಎಸ್ ಕೂಡ ಒಪ್ಪಿಕೊಂಡಿದೆ, ವಿದೇಶಿ ಕಂಪನಿಗಳು ದೇಶದ ಕಾರ್ಮಿಕ ಕಾನೂನುಗಳನ್ನು ಬೇಕಾಬಿಟ್ಟಿಯಾಗಿ ಉಲ್ಲಂಘಿಸುತ್ತವೆ ಎಂದೂ ಅದು ಹೇಳಿದೆ ಎಂಬುದು ಗಮನಾರ್ಹ.

ಗಾರ್ಮೆಂಟ್ ವಲಯಕ್ಕೆ ಉತ್ತೇಜನೆಯ ನೆಪದಲ್ಲಿ ಗಾರ್ಮೆಂಟ್ ಕಾರ್ಮಿಕರ ಮೇಲೆ ಗುಲಾಮಿಕೆ ಹೇರುವ 'ವಿಶೇಷ ಪ್ಯಾಕೇಜ್'

ಎಫ್‌ಡಿಐ ನಿಯಮಾವಳಿಗಳನ್ನು ವಿಪರೀತವಾಗಿ ಸಡಿಲಗೊಳಿಸಿದ ಬೆನ್ನ ಹಿಂದೆಯೇ ಕೇಂದ್ರ ಸರಕಾರ ಕಾರ್ಮಿಕ ಸಂಘಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸದೆಯೇ ಜವಳಿ ಮತ್ತು ಗಾರ್ಮೆಂಟ್ ವಲಯಕ್ಕೆ ವಿಶೇಷ ಪ್ಯಾಕೇಜ್‌ನ ಹೆಸರಲ್ಲಿ ಮತ್ತೊಂದು ಕಾರ್ಮಿಕ–ವಿರೋಧಿ ಕ್ರಮಕ್ಕೆ ಮುಂದಾಗಿದೆ.

ಕೇಂದ್ರ ಸಂಪುಟದ ಅನುಮೋದನೆಯನ್ನು ಪ್ರಕಟಿಸುತ್ತ **ಹಣಕಾಸು ಮಂತ್ರಿಗಳು 'ಚೀನಾದಲ್ಲಿ ಸಂಬಳಗಳು ಹೆಚ್ಚುತ್ತಿವೆ ನೋಡಿ' ಎಂದು ಹೇಳುತ್ತ ವಿದೇಶಿ ಹೂಡಿಕೆದಾರರನ್ನು ಭಾರತಕ್ಕೆ ಆಕರ್ಷಿಸಲು ಪ್ರಯತ್ನಿಸಿರುವುದು ಅತ್ಯಂಯ ಹೇಯ ಸಂಗತಿ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.** ಈ ಮೂಲಕ ಅವರು ಭಾರತದ ಅಗ್ಗದ ಶ್ರಮಶಕ್ತಿಯನ್ನು ಬಳಸಲು ಆಹ್ವಾನ ನೀಡುತ್ತಿದಾರೆ ಮಾತ್ರವಲ್ಲ, ಅದನ್ನು ಇನ್ನಷ್ಟು ಅಗ್ಗಗೊಳಿಸುವ ಸಂಕೇತವನ್ನೂ ನೀಡುತ್ತಾರೆ, ಈ ಮೂಲಕ ವಿದೇಶಿ ಹೂಡಿಕೆದಾರರು ಭಾರೀ ಲಾಭ ಗಿಟ್ಟಿಸಬಹುದು ಎಂದು ಸೂಚಿಸುತ್ತಿದ್ದಾರೆ.

ಈ ಕ್ರಮಗಳು ಮಹಿಳಾ ಸಬಲೀಕರಣದ ಮೂಲಕ ಸಾಮಾಜಿಕ ಪರಿವರ್ತನೆಗೆ ನೆರವಾಗುತ್ತದೆ ಎಂದು ಅವರು ಹೇಳಿರುವುದಂತೂ ಇನ್ನಷ್ಟು ಅಸಹ್ಯಕರ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ. ವಾಸ್ತವವಾಗಿ ಈ ಕ್ರಮಗಳು ಗಾರ್ಮೆಂಟ್ ವಲಯದಲ್ಲಿ ಕಾರ್ಮಿಕರನ್ನು ಗುಲಾಮರಾಗಿಸ ಹೊರಟಿವೆ. ಇದಕ್ಕಿಂತ ದೊಡ್ಡ ಗೋಸುಂಬೆತನ ಬೇರೆ ಇರಲು ಸಾಧ್ಯವೇ ಎಂದು ಸಿಐಟಿಯು ಖಾರವಾಗಿ ಪ್ರಶ್ನಿಸಿದೆ.

ಗಾರ್ಮೆಂಟ್ ಒಂದು 'ಸೀಝನಲ್' ಉದ್ದಿಮೆ, ಅಂದರೆ ವರ್ಷದ ಕೆಲವೇ ಅವಧಿ(ಸೀಝುನ್)ಗಳಲ್ಲಿ ಕೆಲಸ ಮಾಡುವ ಉದ್ದಿಮೆ ಎಂಬ ವಾದವನ್ನು ಸರಕಾರ ಮುಂದಿಟ್ಟಿದೆ. ಇದು ಅದನ್ನು **'ನಿಗದಿತ ಅವಧಿಯ ಉದ್ಯೋಗ' ಮತ್ತು ಮಾಲಕರು ಮನಬಂದಾಗ ಕಾರ್ಮಿಕರನ್ನು ಸೇರಿಸಿಕೊಳ್ಳುವ, ಇಲ್ಲವೇ ತೆಗೆದು ಹಾಕಲು ಅನುಕೂಲವಾಗುವಂತೆ ಮಾಡಲಿಕ್ಕಾಗಿಯೇ ಮುಂದಿಟ್ಟಿರುವ ಬೋಗಸ್ ವಾದ** ಎಂದು ಸಿಐಟಿಯು ವರ್ಣಿಸಿದೆ.

ಈ ಹಿಂದಿನ ಎನ್‌ಡಿಎ ಸರಕಾರ (ವಾಜಪೇಯಿ ನೇತೃತ್ವದ್ದು) ಈ 'ನಿಗದಿತ ಅವಧಿಯ ಉದ್ಯೋಗ' ಎಂಬ ನೋಟಿಫಿಕೇಶನ್ ಹೊರಡಿಸಿತ್ತು. ಆದರೆ ಸಮಸ್ತ ಕಾರ್ಮಿಕ ಆಂದೋಲನ ಅದನ್ನು ಬಲವಾಗಿ ವಿರೋಧಿಸಿದ್ದರಿಂದ ಅದು ಜಾರಿಗೆ ಬರಲಿಲ್ಲ. ಯುಪಿಎ–1 ಸರಕಾರದ ಅವಧಿಯಲ್ಲಿ 2004ರಲ್ಲಿ ಆ ನೋಟಿಫಿಕೇಶನ್ ರದ್ದಾಯಿತು ಎಂದು ನೆನಪಿಸಿರುವ ಸಿಐಟಿಯು ಈಗ ಮತ್ತೆ ಅದನ್ನು ತರುವ ಬಿಜೆಪಿ ಸರಕಾರದ ಪ್ರಯತ್ನವನ್ನು ಬಲವಾಗಿ ಖಂಡಿಸಿದೆ.

ಒಂದೆಡೆಯಲ್ಲಿ ಉದ್ಯೋಗಾವಕಾಶ ನಿರ್ಮಾಣದ ಬಗ್ಗೆ ಕಿರಿಚಿಕೊಳ್ಳುತ್ತಿರುವಾಗಲೇ, ಇನ್ನೊಂದೆಡೆಯಲ್ಲಿ ಗಾರ್ಮೆಂಟ್ ವಲಯದಲ್ಲಿ ಓವರ್‌ಟೈಮ್ ಮೇಲೆ ಈಗಿರುವ 50 ಗಂಟೆಗಳ ಮಿತಿಯನ್ನು 96 ಗಂಟೆಗಳಿಗೆ ಹೆಚ್ಚಿಸಬೇಕೆನ್ನುವುದು ಜನರಿಗೆ ಮತ್ತು ಕಾರ್ಮಿಕರಿಗೆ ಮಾಡುತ್ತಿರುವ ಮತ್ತೊಂದು ಮೋಸ, ವಂಚನೆ ಎಂದು ಸಿಐಟಿಯು ಖಂಡಿಸಿದೆ.

ಈ ವಿಶೇಷ ಪ್ಯಾಕೇಜ್ ಪ್ರಕಾರ 15,000 ರೂ. ಗಿಂತ ಕಡಿಮೆ ಸಂಬಳವಿರುವವರು ಭವಿಷ್ಯ ನಿಧಿಗೆ ಸೇರಬೇಕಾಗಿಲ್ಲ ಎಂಬ 'ಆಯ್ಕೆ' ಕೊಡಲಾಗುವುದು. ಇದು ಈ ಸಾಮಾಜಿಕ ಭದ್ರತಾ ಯೋಜನೆಯನ್ನು ಧ್ವಂಸ ಮಾಡುವ ಸರಕಾರದ ಸತತ ಪ್ರಯತ್ನಗಳನ್ನು ಸೂಚಿಸುತ್ತದೆ ಎಂದು ಸಿಯಟಿಯು ಟೀಕಿಸಿದೆ.

ಈ ಪ್ಯಾಕೇಜ್ ಮಾಲಕರಿಗೆ ಇತರ ರಿಯಾಯ್ತಿಗಳನ್ನು ಕೊಡಮಾಡುತ್ತಿದೆ. ಉದಾ: ಭವಿಷ್ಯ ನಿಧಿ ವಂತಿಗೆಯಲ್ಲಿ ಮಾಲಕರ ಪಾಲನ್ನು ಸರಕಾರ ರಾಷ್ಟ್ರೀಯ ಖಜಾನೆಯಿಂದ, ಅಂದರೆ ಜನಗಳ ದುಡ್ಡನ್ನು ಬಳಸಿ ಕೊಡುತ್ತದೆ, ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿಲ್ಲ, ಸುಂಕಗಳನ್ನು ಹಿಂದ–ಕ್ಕೆ ಪಡೆಯಬಹುದು ಇತ್ಯಾದಿ ಸವಲತ್ತುಗಳನ್ನು ಮಾಲಕರಿಗೆ ಕೊಡಲಾಗುವುದಂತೆ.


ಇವೆಲ್ಲ ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ಮಾಡಿ ದೊಡ್ಡ ಕಾರ್ಪೊರೇಟ್‌ಗಳ, ಬಹುರಾಷ್ಟ್ರೀಯ ಕಂಪನಿಗಳ ಹಿತಗಳನ್ನು ಪ್ರೋತ್ಸಾಹಿಸುವ ನವ–ಉದಾರವಾದಿ ಹುನ್ನಾರವಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಖಂಡಿಸಿದೆ.

ಸರಕಾರ ತಕ್ಷಣವೇ ಈ 'ವಿಶೇಷ ಪ್ಯಾಕೇಜಿ'ನ ಕಾರ್ಮಿಕ–ವಿರೋಧಿ ಅಂಶಗಳನ್ನು ಹಿಂತೆಗೆದು ಕೊಳ್ಳಬೇಕು ಎಂದು ಸಿಐಟಿಯು ಆಗ್ರಹಿಸಿದೆ. ಕಾರ್ಮಿಕರ ಮೇಲೆ ಈ ರೀಯಿ ಗುಲಾಮಿಕೆಯನ್ನು ಹೇರುವ ಈ ಕ್ರಮಗಳನ್ನು ವಿರೋಧಿಸಲು ಸಪ್ಟಂಬರ್ 2, 2016ರ ಜಂಟಿ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಬೇಕು ಎಂದು ಎಲ್ಲ ಕಾರ್ಮಿಕರಿಗೆ ಕರೆ ನೀಡಿದೆ.

aAiAvEAzAgEEzAA

ಜನತೆಯ ಆರ್ಥಿಕ ಸ್ವಾವಲಂಬನೆಯೇ ನಮ್ಮ ಗುರಿ ಮತ್ತು ಅದಕ್ಕಾಗಿಯೇ ನಾವು ರಾಜಕೀಯ ಅಧಿಕಾರ ಗಳಿಸಲು ಹೋರಾಡುತ್ತೇವೆ. ಮೊದಮೊದಲು ಸಣ್ಣ ಪುಟ್ಟ ಆರ್ಥಿಕ ಅಗತ್ಯಗಳಿಗೆ ಹೋರಾಡ ಬೇಕಾಗುತ್ತದೆ ಎಂಬುದೇನೋ ನಿಜ. ಆದರೆ ಈ ಹೋರಾಟಗಳು ರಾಜಕೀಯ ಸ್ವಾತಂತ್ರ್ಯದ ಅಂತಿಮ ಹೋರಾಟಕ್ಕೆ ಜನತೆಯನ್ನು ಜಾಗೃತಗೊಳಿಸುವ ದಾರಿಗಳು

–ಭಗತ್ ಸಿಂಗ್



ಹಿರಿಯ ಬೀಡಿ ಕಾರ್ಮಿಕರ ಮುಖಂಡ ಮಹಮ್ಮದ್ ನಿಜಾಮುದ್ದೀನ್ ನಿಧನ




ಅಖಿಲ ಭಾರತ ಬೀಡಿ ವರ್ಕರ್ಸ್ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಮತ್ತು ಪಶ್ಚಿಮ ಬಂಗಾಲದ ಹಿರಿಯ ಕಾರ್ಮಿಕ ಮುಖಂಡ ಮಹಮ್ಮದ್ ನಿಜಾಮುದ್ದೀನ್ ಜೂನ್ 21 ರಂದು ನಿಧನರಾಗಿದ್ದಾರೆ. ಅವರಿಗೆ 83 ವರ್ಷವಾಗಿತ್ತು.

ಅವರು ಸಿಐಟಿಯುನ ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು. ಪಶ್ಚಿಮ ಬಂಗಾಲ ವಿಧಾನ ಸಭೆಗೆ ಇವರು ನಾಲ್ಕು ಬಾರಿ ಆಯ್ಕೆಯಾಗಿದ್ದರು.

ಪಶ್ಚಿಮ ಬಂಗಾಲದಲ್ಲಿ ಬೀಡಿ ಕಾಮಿಕರು ಮತ್ತು ಇತರ ಅಸಂಘಟಿತ ಕಾರ್ಮಿಕರ ಸಂಘಟನೆಯಲ್ಲಿ ಆರು ದಶಕಗಳಿಂದ ತೊಡಗಿಸಿ ಕೊಂಡಿದ್ದ ಇವರು ಅಸಂಘಟಿತ ಕಾರ್ಮಿಕರ ಹಲವು ಹೋರಾಟಗಳಿಗೆ ನೇತೃತ್ವ ನೀಡಿದ್ದರು.

ಮಹಮ್ಮದ್ ನಿಜಾಮುದ್ದೀನ್ ಅವರ ನಿಧನ ಬೀಡಿಕಾರ್ಮಿಕರ ಆಂದೋಲನಕ್ಕೆ ಮತ್ತು ಇಡೀ ಕಾರ್ಮಿಕ ಆಂದೋಲನಕ್ಕೆ ಆಗಿರುವ ಒಂದು ನಷ್ಟ ಎಂದು ಸಿಐಟಿಯು ಇವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.



ಇಸ್ರೋದ ಇನ್ನೊಂದು ಮಹತ್ಸಾಧನೆ

ಜೂನ್ 22ರಂದು ಭಾರತೀಯ ಬಾಹ್ಯಾಕಾಶ ಸಂಘಟನೆ(ಇಸ್ರೋ) ಹೊಸದೊಂದು ದಾಖಲೆ ನಿರ್ಮಿಸಿದೆ. ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ 20 ಉಪಗ್ರಹಗಳನ್ನು ಹೊತ್ತ ರಾಕೆಟನ್ನು ಯಶಸ್ವಿಯಾಗಿ ಹಾರಿಸದೆ. ಇವುಗಳಲ್ಲಿ ಎರಡು ಶೈಕ್ಷಣಿಕ ಉಪಗ್ರಹಗಳು ಮತ್ತು ಉಳಿದವು ಅಮೆರಿಕ, ಜರ್ಮನಿ, ಕೆನಡಾ ಮತ್ತು ಇಂಡೋನೇಸ್ಯಾದ ಉಪಗ್ರಹಗಳು.

ಈ ಸಾಧನೆಯನ್ನು ಮಾಡಿದ ಇಸ್ರೋದ ವಿಜ್ಞಾನಿಗಳನ್ನು ಅಭಿನಂದಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ 'ಮಾನವ ಕುಲದ ಸೇವೆಯಲ್ಲಿ ಅಂತರಿಕ್ಷ ತಂತ್ರಜ್ಞಾನ' ಎಂಬ ತನ್ನ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ಇಸ್ರೋ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವತಂತ್ರ ಭಾರತದ ಹೆಮ್ಮೆಯ ಪರಂಪರೆಯನ್ನು ಜೀವಂತವಾಗಿಟ್ಟಿದೆ ಎಂದು ಹೇಳಿದ್ದಾರೆ.

ಈ ಹಿಂದೆ 2008ರಲ್ಲಿ ಮೊದಲ ಬಾರಿಗೆ 10 ಉಪಗ್ರಹಗಳನ್ನು ಹೊತ್ತ ರಾಕೆಟನ್ನು ಉಡಾಯಿಸಿ ಇಸ್ರೊ ವಿಶ್ವ ದಾಖಲೆ ರಚಿಸಿತ್ತು. ನಂತರ ಅಮೆರಿಕಾ ಮತ್ತು ರಶ್ಯ ಈ ದಾಖಲೆಗಳನ್ನು ಮುರಿದವು.

1988ರಿಂದ ಇಸ್ರೊ ನಮ್ಮ ದೇಶದ ಮತ್ತು ಇತರ ಹಲವು ದೇಶಗಳ ಹಲವಾರು ದೂರ ಸಂವೇದಿ ಉಪಗ್ರಹಗಳನ್ನು ಹಾರಿಸಿದೆ. ಇವೆಲ್ಲ ಕೃಷಿ, ನೀರು ಮತ್ತು ಸಾಗರ ಸಂಪನ್ಮೂಲಗಳು ಮಾತ್ರವಲ್ಲ, ನೈಸರ್ಗಿಕ ಅನಾಹುತಗಳ ಬಗ್ಗೆ ಮಾಹಿತಿಗಳನ್ನು ಒದಗಿಸುವಂತವುಗಳು.



ಬೇಲಿಗಳನ್ನು ಮುರಿದ ಮಹಿಳಾ ಶಕ್ತಿ

ಜೂನ್ 18ರಂದು ಮಧ್ಯಪ್ರದೇಶದ ಅವನಿ ಚತರ್ವೇದಿ, ರಾಜಸ್ತಾನದ ಮೋಹನಾ ಸಿಂಗ್ ಮತ್ತು ಬಿಹಾರದ ಭಾವನಾ ಕಾಂತ್ ಈ ಮೂವರನ್ನು ಹೈದರಾಬಾದ್‌ನ ಏರ್‌ಫೋರ್ಸ್ ಅಕಾಡೆಮಿಯಲ್ಲಿ ಭಾರತೀಯ ವಿಮಾನ ಪಡೆಯಲ್ಲಿ ಮಹಿಳಾ ಫೈಟರ್ ಪೈಲಟ್‌ಗಳಾಗಿ ಅಧಿಕೃತವಾಗಿ ಸೇರಿಸಿಕೊಳ್ಳಲಾಗಿದೆ. ಈ ಮೂಲಕ ಇವರು ಭಾರತದ ಮೊದಲ ಮಹಿಳಾ ಫೈಟರ್ ಪೈಲಟ್‌ಗಳಾಗಿ ಇತಿಹಾಸ ನಿರ್ಮಿಸಿದ್ದಾರೆ.

ಈ ಮೂವರೂ 150 ಗಂಟೆಗಳ ಹಾರಾಟದ ಮೂಲಕ ತರಬೇತಿಯ ಮೊದಲ ಹಂತವನ್ನು ಪೂರೈಸಿದ್ದಾರೆ. ಈಗ ಅವರನ್ನು ಹಾಕ್ ಯುದ್ಧವಿಮಾನದಲ್ಲಿ ಆರು ತಿಂಗಳ ಉನ್ನತ ತರಬೇತಿಗೆ ಕಳುಹಿಸಲಾಗುತ್ತಿದೆ ಎಂದು ಹೇಳಲಾಗಿದೆ.

ಸಮಾಜ ಹಾಕಿದ ಬೇಲಿಗಳನ್ನು ಮುರಿದು ಬಂದ ಮಹಿಳಾ ಶಕ್ತಿಯಿದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ತನ್ನ ಟ್ವೀಟ್‌ನಲ್ಲಿ ಇವರನ್ನು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

ಜುಲೈ 11ರಿಂದ 17: ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗದ ವಿರುದ್ಧ

ಆಗಸ್ಟ್ ಮೊದಲ ವಾರದಲ್ಲಿ ಚುನಾವಣೋತ್ತರ ಟಿಎಂಸಿ ಹಿಂಸಾಚಾರದ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ಕೇಂದ್ರ ಸಮಿತಿಯ ಸಭೆಯ ನಂತರ ಪತ್ರಿಕಾ ಸಮ್ಮೇಳನದಲ್ಲಿ ಸಭೆಯ ಕಲಾಪಗಳ ಕುರಿತು ವಿವರಿಸುತ್ತಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ

ಜೂನ್ 18ರಿಂದ 20ರ ವರೆಗೆ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ಜುಲೈ 11ರಿಂದ 17ರ ವರೆಗೆ ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗದ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿ ದೇಶದೆಲ್ಲೆಡೆಗಳಲ್ಲಿ ಪ್ರತಿಭಟನಾ ಕಾರ್ಯಾಚರಣೆ ನಡೆಸಬೇಕು ತನ್ನ ಎಲ್ಲ ಘಟಕಗಳಿಗೆ ಎಂದು ಕರೆ ನೀಡಿದೆ.

ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಫಲಿತಾಂಶಗಳ ನಂತರ ತೃಣಮೂಲ ಕಾಂಗ್ರೆಸ್ ಅಭೂತಪೂರ್ವ ಹಿಂಸಾಚಾರವನ್ನು ಹರಿಯ ಬಿಟ್ಟಿದೆ. ಇದನ್ನು ಪ್ರತಿಭಟಿಸಿ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆ ನಡೆಸಬೇಕು ಎಂದೂ ಕೇಂದ್ರ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಮೂರು ದಿನಗಳ ಸಭೆಯಲ್ಲಿ ಕೇಂದ್ರ ಸಮಿತಿ ಇತ್ತೀಚಿನ ವಿಧಾನಸಭಾ ಚುನಾವಣೆಗಳ ವಿಮರ್ಶೆಯನ್ನಲ್ಲದೆ, ಜಿಎಸ್‌ಟಿ ತೆರಿಗೆಯ ಬಗ್ಗೆ ಮೋದಿ ಸರಕಾರದ ಹಠಮಾರಿ ನಿಲುವು ಸೇರಿದಂತೆ ದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿಮರ್ಶೆ ನಡೆಸಿತು.

ಸಭೆಯ ನಂತರ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಪ್ರಕಟಪಡಿಸಿದ ಕೇಂದ್ರ ಸಮಿತಿಯ ಹೇಳಿಕೆಯಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಕೇಂದ್ರ ಸಮಿತಿಯ ಚರ್ಚೆಯನ್ನು ವಿಷದಪಡಿಸಲಾಗಿದೆ.

ಜನಗಳ ಮೇಲೆ ಹೆಚ್ಚುತ್ತಿರುವ ಹೊರೆಗಳು

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಇತ್ತೀಚೆಗೆ ಎರಡು ವರ್ಷಗಳ ತನ್ನ ಅಸ್ತಿತ್ವದ ಆಚರಣೆ ನಡೆಸಿ ದೇಶದ ರಾಜಕೀಯ ಮತ್ತು ಸಆಮಾಜಿಕ ಜೀವನದಲ್ಲಿ ಹಲವು ಸಾಧನೆಗಳನ್ನು ಮಾಡಿರುವುದಾಗಿ ಅಬ್ಬರದ ಪ್ರಚಾರ ನಡೆಸುತ್ತಿದೆ. ಅವರು ಏನೇ ಹೇಳಿಕೊಳ್ಳಲಿ, ಬಹುಪಾಲು ಜನಗಳ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಗಿದೆ ಎಂಬುದೇ ಎದ್ದು ಕಾಣುವ ವಾಸ್ತವ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ. ನಮಮ್ ಬಹುಪಾಲು ಜನತೆಗೆ ಆರ್ಥಿಕ ವ್ಯವಸ್ಥೆ ಒಂದು ಉತ್ತಮ ಜೀವನ ಪರಿಸ್ಥಿತಿಗಳನ್ನು ಒದಗಿಸಲಾರದಾಗಿದೆ, ನಿಜ ಸಂಗತಿಯೆಂದರೆ ಪರಿಸ್ಥಿತಿ ವಿಪರೀತ ಹದಗೆಡುತ್ತಿದೆ ಎಂದು ಅದು ಹೇಳಿದೆ.

ಬೆಲೆಯೇರಿಕೆ

ಮತ್ತೊಮ್ಮೆ ಅಗತ್ಯ ಸರಕುಗಳ, ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆಗಳು ನಾಗಾಲೋಟ ಹೂಡಿವೆ. ಎಲ್ಲ ಭಾರತೀಯರ ಆಹಾರದಲ್ಲಿ ಅನಿವಾರ್ಯವಾದ ಬೇಳೆಗಳ ಬೆಲೆಗಳು ಗಗನಕ್ಕೇರಿವೆ. ಸರಕಾರೀ ಸಂಸ್ಥೆಗಳು ಬಿಡುಗಡೆ ಮಾಡಿರುವ ಮೇ 2016ರ ಅಧಿಕೃತ ಸಗಟು ಬೆಲೆ ಸೂಚ್ಯಂಕದ ಪ್ರಕಾರ ಕಳೆದ ವರ್ಷಕ್ಕೆ ಹೋಲಿಸಿದರೆ ಬೇಳೆಕಾಳುಗಳ ಬೆಲೆಗಳಲ್ಲಿ 35.56ಶೇ., ರತೆಕಾರಿಗಳ ಬೆಲೆಗಳಲ್ಲಿ ಅ2.92ಶೇ. ಮತ್ತು ಸಕ್ಕರೆಯ ಬೆಲೆಗಳಲ್ಲಿ 22.3ಶೇ. ಉಬ್ಬರ ದಾಖಲಾಗಿದೆ. ಆಹಾರ ಸಾಮಗ್ರಿಗಳ ಬೆಲೆಗಳಲ್ಲಿ ಇಡೀ ದಏಶದಲ್ಲಿ 8ಶೇ.ಕ್ಕೂ ಹೆಚ್ಚಿನ ಉಬ್ಬರ ಉಂಟಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ, ಅದರಲ್ಲೂ ಡೀಸೆಲ್‌ನ ದರಗಳನ್ನು ಮತ್ತೆ-ಮತ್ತೆ ಆತಂಕಕಾರಿ ರೀತಿಯಲ್ಲಿ ಏರಿಸಲಾಗುತ್ತಿದೆ. ಇತ್ತೀಚೆಗಿನ ಏರಿಕೆಯೆಂದರೆ ಜೂನ್ 13ರಂದು ಡೀಸೆಲ್ ಬೆಲೆಗಳಲ್ಲಿ ಲೀಟರಿಗೆ 1.26ರೂ. ಏರಿಕೆ. ಇದು ಕಳೆದ ಆರುವಾರಗಳಲ್ಲಿ ನಾಲ್ಕನೇ ಏರಿಕೆ. ಈ ಏರಿಕೆಯಿಂದ ಗ್ರಾಮೀಣ ಜನಗಳ ಸಂಕಟಗಳು ಮತ್ತಷ್ಟು ಉಲ್ಬಣಗೊಳ್ಳಲಿವೆ. ಅಂದರೆ ಈ ಸರಕಾರ ಜನಗಳ ಮೇಲ ಹೆಚ್ಚಿನ ಹೊರೆಗಳನ್ನು ಹಾಕಿ ತನ್ನ ಆದಾಯಗಳನ್ನು ಹೆಚ್ಚಸಿಕೊಳ್ಳುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಏರುಗತಿಯಲ್ಲಿ ನಿರುದ್ಯೋಗ

ಶ್ರಮ ಶಕ್ತಿ ಹೆಚ್ಚು ಬೇಕಾಗಿರುವ ಎಂಟು ಉದ್ದಿಮೆಗಳಲ್ಲಿ ಹೊಸ ಉದ್ಯೋಗಗಳ ನಿರ್ಮಾಣದ ಪ್ರಮಾಣ ಕಳೆದ ಆರು ವರ್ಷಗಳಲ್ಲೇ ಅತಿ ಕಡಿಮೆ. 2015ರ ಕೊನೆಯ ತ್ರೈಮಾಸಿಕದಲ್ಲಿ ಉದ್ಯೋಗ ನಿರ್ಮಾಣವಾಗುವ ಬದಲು ಕಡಿತವನ್ನೇ ದಾಖಲಿಸಿದೆ..

ಭಾರತದ ಜಿಡಿಪಿ ಬೆಳವಣಿಗೆ ಜಗತ್ತಿನಲ್ಲೇ ಅತಿ ಹೆಚ್ಚು 7.9ಶೇ.ದ ದಾಖಲೆ ನಿರ್ಮಿಸಿದೆ ಎಂದು ಸರಕಾರ ಬೆನ್ನು ತಟ್ಟಿಕೊಳ್ಳುತ್ತಿದ್ದರೂ ಆರ್ಥಿಕ ರಂಗದಲ್ಲಿ ನೆಲದ ವಾಸ್ತವತೆಗಳು ಅದಕ್ಕೆ ಅನುಗುಣವಾಗಿಯೇನೂ ಇಲ್ಲ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಒಟ್ಟು ಆರ್ಥಿಕದ ಬೆಳವಣಿಗೆಯನ್ನು ಬಿಂಬಿಸುವ ಎಲ್ಲ ಮೂರು ವಲಯಗಳ, ಅಂದರೆ ಕೃಷಿ, ಕೈಗಾರಿಕೆ ಮತ್ತು ಸೇವಾವಲಯದ ಬೆಳವಣಿಗೆಗಳು ಗಮನಾರ್ಹವಾಗಿ ನಿಧಾನಗೊಂಡಿವೆ ಅಥವ ಇಳಿಕೆ ಕಂಡಿವೆ. ಕೈಗಾರಿಕಾ ರಂಗದಲ್ಲಂತೂ, 2015-16ರ ಕೊನೆಯ ತ್ರೈಮಾಸಿಕದಲ್ಲಿ ಹಿಂದಿನ ವರ್ಷದ ಆವಧಿಗೆ ಹೋಲಿಸಿದರೆ ಆಗಿರುವ ಬೆಳವಣಿಗೆ ಕೇವಲ 0.1ಶೇ. ಸರಕು ಉತ್ಪಾದನೆ ದರ ಹಿಂದಿನ ವರ್ಷಕ್ಕೆ ಹೋಲಿಸಿದರೆ 1.1ಶೇ.ದಷ್ಟು ಇಳಿದಿದೆ.

ಕಾರ್ಮಿಕರ ಮೇಲೆ ದಾಳಿಗಳು ಮುಂದುವರೆಯುತ್ತಿವೆ. ಭವಿಷ್ಯ ನಿಧಿಯಲ್ಲಿ ಅವರ ಇಡೀ ಜೀವನದ ಉಳಿತಾಯಗಳ ಮೇಲಿನ ಬಡ್ಡಿದರಗಳನ್ನು ಸತತವಾಗಿ ಇಳಿಸಲಾಗುತ್ತಿದೆ, ಜೂನ್ 1, 2016 ರಿಂದ ಅದು 8.7ಶೇ.ದಿಂದ 8.1ಶೇ.ಕ್ಕೆ ಇಳಿದಿದೆ. ಇದು ಎಲ್ಲ ಸರಕಾರೀ ಮತ್ತು ಸರಕಾರೀ ಒಡೆತನದ ಉದ್ದಿಮೆಗಳ ಮತ್ತು ರಕ್ಷಣಾ ವಲಯವೂ ಸೇರಿದಮತೆ ಎಲ್ಲ ಸೇವಾವಲಯದ ನೌಕರರನ್ನೂ ತಟ್ಟುತ್ತಿದೆ.

ಕರ್ಷಕ ಬಿಕ್ಕಟ್ಟು ಆಳಗೊಳ್ಳುತ್ತಿದೆ

ಸರಕಾರ ಕರ್ಷಕ ಬಿಕ್ಕಟ್ಟಿನ ನಿಜಮುಖವನ್ನು ಮರೆ ಮಾಚಲು ಹತಾಶ ಆತ್ಮಹತ್ಯೆಯ ನಿರ್ವಚನೆಯನ್ನು ಬದಲಿಸಿದರೂ ರೈತರ ಆತ್ಮಹತ್ಯೆಗಳ ಸಂಖ್ಯೆ ಏರುತ್ತಲೇ ಇದೆ.

2015ರಲ್ಲಿ ಸುಮಾರು 3000 ರೈತರು ಹತಾಶ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅಧಿಕೃತ ವರದಿಗಳೇ ಹೇಳುತ್ತಿವೆ.

ಒಟ್ಟು ಬಿತ್ತನೆ ಪ್ರದೇಶ 2015-16ರಲ್ಲಿ 76.65 ಲಕ್ಷ ಎಕರೆ ಇದ್ದದ್ದು 2016-17ರಲ್ಲಿ 71.21 ಲಕ್ಷ ಎಕರೆಗೆ ಇಳಿದಿದೆ. ಅಂದರೆ ಗ್ರಾಮೀಣ ನಿರುದ್ಯೋಗ ತೀಕ್ಷ್ಣವಾಗಿ ಏರುತ್ತಿದೆ ಎಂಬುದರ ಸ್ಪಷ್ಟ ಸೂಚನೆ ಇದು.

ಅದೇ ವೇಳೆಗೆ ಗ್ರಾಮೀಣ ನಿಜಕೂಲಿಗಳು ಈ ದಶಕದ ಅತೀ ಕೆಳಗಣ ಮಟ್ಟಕ್ಕೆ ಇಳಿದಿವೆ ಎಂಬ ಸಂಗತಿಯನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಗಮನಿಸಿತು.

ಖಾಸಗೀಕರಣ

ಸರಕಾರ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣವನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಂಡಿದೆ. ಇತ್ತೀಚೆಗೆ ಭಾರೀ ಆಸ್ತಿಗಳನ್ನು ಹೊಂದಿರುವ ಸಾರ್ವಜನಿಕ ವಲಯದ ತೈಲ ಕಂಪನಿಗಳ ಖಾಸಗೀಕರಣಕ್ಕೂ ಮುಂದಾಗಿದೆ. ಬ್ಯಾಂಕಿಂಗ್ ಪರಿಣಿತರು ಮತ್ತು ನೌಕರರ ಸಂಘಟನೆಗಳ ಆಕ್ಷೇಪಗಳನ್ನೆಲ್ಲ ಬದಿಗೊತ್ತಿ ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನ ಕ್ರಿಯೆ ಆರಂಭವಾಗಿದೆ.

ಕೇಂದ್ರ ಸರಕಾರದ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ರಾಷ್ಟ್ರೀಯ ಖಜಾನೆಯಿಂದ ಇನ್ನಷ್ಟು ಬಂಡವಾಳ ತೊಡಗಿಸಬೇಕು ಎಂದು 'ನೀತಿ' ಆಯೋಗ ಶಿಫಾರಸು ಮಾಡುವಂತೆ ಮಾಡಲಾಗಿದೆ. ಇದು ಈ ಉದ್ದಿಮೆಗಳನ್ನು ಹೆಚ್ಚು ದಕ್ಷಗೊಳಿಸಲಷ್ಟೇ ಅಲ್ಲ, ಆಮೂಲಕ ಅವನ್ನು ಖಾಸಗೀ ಕೈಗಳಿಗೆ ಹಸ್ತಾಂತರಿಸಲು ಅನುಕೂಲ ಕಲ್ಪಿಸಲಿಕ್ಕಾಗಿ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ

ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ನೌಕರರ ಒಕ್ಕೂಟಗಳು ಒಟ್ಟಾಗಿ ಸಪ್ಟಂಬರ್ 2, 2016ರಂದು ಸಾರ್ವತ್ರಿಕ ಮುಷ್ಕರ ನಡೆಸಲು ನೀಡಿದ ಕರೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ತೀಕ್ಷ್ಣಗೊಳ್ಳುತ್ತಿದೆ ಕೋಮುಧ್ರುವೀಕರಣ

ಮುಂದಿನ ವರ್ಷ ಉತ್ತರರಪ್ರದೇಶದ ವಿಧಾನಸಭಾ ಚುನಾವಣೆಗಳಿಗೆ ಸಿದ್ಧತೆಯಾಗಿ, ಆರೆಸ್ಸೆಸ್ ಮತ್ತು ಬಿಜೆಪಿ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸಲು ಭರದಿಂದ ಕೆಲಸ ಮಾಡುತ್ತಿವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಗಮನಿಸಿತು.

ಪುಟ 15 ನೋಡಿ

ಸಂಪುಟ ಪುನರ್ ರಚನೆ: ಕಾಂಗ್ರೆಸ್‌ನಲ್ಲಿ ಹೆಚ್ಚಾದ ಭಿನ್ನಮತದ ದಳ್ಳುರಿ

ಎಸ್. ವೈ. ಗುರುಶಾಂತ

ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಈ 2016ರ ಜೂನ್ 19 ರಂದು ತಮ್ಮ ಸಚಿವ ಸಂಪುಟವನ್ನು ಪುನರ್ ರಚಿಸಿದ ನಂತರ ರಾಜ್ಯದ ಕಾಂಗ್ರೆಸ್‌ನಲ್ಲಿಯ ಭಿನ್ನಮತ, ಗುಂಪುಗಾರಿಕೆಗಳು ತೀವ್ರ ಸ್ವರೂಪದಲ್ಲಿ ಮತ್ತೇ ಮುನ್ನೆಲೆಗೆ ಬಂದಿವೆ. ಅಧಿಕಾರ ವಂಚಿತರು, ಅತೃಪ್ತರೂ ಒಟ್ಟುಗೂಡಿ ಮುಖ್ಯಮಂತ್ರಿಯನ್ನೇ ಬದಲಾಯಿಸುವ 'ಕಿಡಿ ನುಡಿ'ಗಳನ್ನು ಬಹಿರಂಗವಾಗಿಯೇ ಆಡತೊಡಗಿದ್ದಾರೆ. ಇದಕ್ಕೆ ಬಲ ತುಂಬಲು "ಸೂಕ್ತ" ಸಮಯಕ್ಕಾಗಿ 'ಕಾಯುತ್ತಿರುವ' ಎಸ್.ಎಂ.ಕೃಷ್ಣರ ಮೊರೆ ಹೋಗಲು ಮುಂದಾಗಿದ್ದಾರೆ. ಆದರೆ 'ಇವೆಲ್ಲಾ ಮಾಮೂಲು, ನಿರೀಕ್ಷಿತ, ನಾಲ್ಕು ದಿನಗಳು ಕಳೆದರೆ ಎಲ್ಲವೂ ಶಮನ ಆಗುತ್ತವೆ' ಎಂದು ಸಿದ್ಧರಾಮಯ್ಯ ನಿರಾಳವಾಗಿರುವುದನ್ನು ಅವರ ಆಪ್ತ ಮೂಲಗಳು ಪ್ರಸ್ತಾಪಿಸುತ್ತವೆ. ಇದು ಸ್ವಲ್ಪ ಮಟ್ಟಿಗೆ ವಾಸ್ತವವಿರಬಹುದು. ಆದರೆ ಅಧಿಕಾರದಾಹಿಗಳಿಗೆ ಅಧಿಕಾರದ ಕುರ್ಚಿಯೇ ಕೇಂದ್ರವಾಗಿರುವಾಗ ಪಕ್ಷ, ರಾಜ್ಯದ-ದೇಶದ ರಾಜಕೀಯ ಸಮಸ್ಯೆ, ಸವಾಲುಗಳು ಗೌಣವಾಗಿರುವಾಗ ರಾಜಕಾರಣದಲ್ಲಾಗುವ ದೂರಗಾಮಿ ದುಷ್ಪರಿಣಾಮಗಳನ್ನು ನಿರ್ಲಕ್ಷಿಸುವುದು ಒಂದು ಪ್ರಮಾದ.

ನಿಜ, ರಾಜ್ಯದ ಕಾಂಗ್ರೆಸ್ ಸರಕಾರದಲ್ಲಿ ಸಂಪುಟದ ವಿಸ್ತರಣೆಯಾಗಲೀ, ಪುನರ್‌ರಚನೆಯಾಗಲಿ ಅಷ್ಟು ಸುಲಭ ಅಲ್ಲ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಚಾರ. ಹೀಗಾಗಿಯೇ ಸಿದ್ಧರಾಮಯ್ಯನವರು ತಮ್ಮ ಸಂಪುಟದಲ್ಲಿನ ಅಸಮರ್ಥರು, ಹಗರಣಖೋರರು, ಜನವಿರೋಧಿಗಳನ್ನು ಕೈ ಬಿಡಲೇ ಬೇಕಾದ ಒತ್ತಡದ ಪ್ರಸಂಗದಲ್ಲೂ ಭಿನ್ನಮತದ ಬೇಗೆಯಿಂದಾಗಿ ಕೈ ಚೆಲ್ಲಿ ಕೂತಿದ್ದರು. ಅಥವಾ ಕೆಲವು ಬಾರಿ ಇಚ್ಛೆ ಇಲ್ಲದೇ, ಸಂಕಷ್ಟಗಳನ್ನೂ ಊಹಿಸಿ ಮುಹೂರ್ತ ಪ್ರಕಟಿಸುತ್ತಾ ದಿನಗಳನ್ನು, ವರ್ಷಗಳನ್ನೂ ತಳ್ಳಿದರು. ಹೀಗೆ ವಿಳಂಬವಾಗುತ್ತಲೇ ಆಕಾಂಕ್ಷಿಗಳ ಪಟ್ಟಿ ಬೆಳೆಯುತ್ತಲೇ ಹೋಯಿತು. "ಬಾಯಿ ಬಢಾ" ಇದ್ದ ಕಾಗೋಡು ತಿಮ್ಮಪ್ಪನಂತಹವರೂ ವಿಧಾನಸಭೆಯಲ್ಲೂ, ಹೊರಗೂ 'ಚಾಟಿ ಬೀಸಿ' ರಂಪಾಟದ ರಾಮಾಯಣ' ಮಾಡಿದ ಪ್ರಸಂಗಗಳಿಗೂ ಕಡಿಮೆ ಇಲ್ಲ.

ಇತ್ತೀಚೆಗೆ ಆದ ಸಂಪುಟ ವಿಸ್ತರಣೆಯಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಡಾ॥ಜಿ.ಪರಮೇಶ್ವರ್‌ರವರು ಸೇರ್ಪಡೆಗೊಂಡ ಬಳಿಕ ಅವರು ಕೊಂಚ ಶಮನಗೊಂಡರೂ 'ದಲಿತ ಮುಖ್ಯಮಂತ್ರಿ' ಬೇಡಿಕೆಯನ್ನೂ ಜೀವಂತ ಇಟ್ಟರು. ಈ ನಡುವೆ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರ ಧ್ವನಿಯೂ ರಾಜ್ಯ ರಾಜಕಾರಣದ ಸುತ್ತ ತಿರುಗಿತು. ಇದನ್ನು ಹೈಕಮಾಂಡ್‌ನ ಅಣತಿಯೆಂದೇ ಭಾವಿಸಲಾಯಿತು. ಆ ನಡುವೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಕುರಿತ ದೂರುಗಳ ಅಹವಾಲು ಹಿಡಿದು ಹೈಕಮಾಂಡ್‌ಗೆ ಎಡತಾಕಿದರು. ಒಟ್ಟಾರೆ ಇದೆಲ್ಲವೂ ಕಾಂಗ್ರೆಸ್ ಒಡೆದ ಮನೆ ಎಂಬುದನ್ನು ಸಾರಿ ಹೇಳಿತಲ್ಲದೇ ಒಂದು ಪರಿಣಾಮಕಾರಿ ಆಡಳಿತ ನೀಡಲು, ಬಿಜೆಪಿಯನ್ನೂ, ಫ್ಯಾಸಿಸ್ಟ್ ಮಾದರಿಯ ರಾಜಕಾರಣವನ್ನು ಎದುರಿಸಲು ಸರಕಾರ ಮತ್ತು ಪಕ್ಷವನ್ನು ಅಸಮರ್ಥಗೊಳಿಸಿದವು. ಮಾತ್ರವಲ್ಲ, ಕಾಂಗ್ರೆಸ್ ಒಳಗಿನ ಈ ಕಿತ್ತಾಟ, ನಾಯಕರಲ್ಲಿನ ವಿಭಜನೆಯ ಲಾಭವನ್ನೂ ಬಿಜೆಪಿ ಆಕ್ರಮಣಕಾರಿಯಾಗಿ ಬಳಸಿಕೊಳ್ಳಲು ಅವಕಾಶ ನೀಡಿತು. ಮುಖ್ಯವಾಗಿ ಉತ್ತಮ ಆಡಳಿತ ಸಿಗಬಹುದೆಂಬ ಜನತೆಯ ನಿರೀಕ್ಷೆಗೆ 'ನಿರಾಸೆಯ' 'ಹತಾಶೆಯ' ಭಾಗ್ಯ ಕರುಣಿಸಲಾಯಿತು.

ಹಾಗೆ ನೋಡಿದರೆ, ಈ ಸಂಪುಟ ಪುನರ್ ರಚನೆ ಆಗಲೇ ಬೇಕಾದ ಅಗತ್ಯವಿತ್ತು. ಕಾರ್ಮಿಕ ವಿರೋಧಿ ಪರಮೇಶ್ವರ್ ನಾಯ್ಕ, ಕ್ರಿಮಿನಲ್ ಕೃತ್ಯಗಳ

ಪುಟ 4 ಕ್ಕೆ

ಕಾಂಗ್ರೆಸ್‌ನಲ್ಲಿ ಹೆಚ್ಚಾದ ಭಿನ್ನಮತ

ಪುಟ 3 ರಿಂದ

ಶಿವರಾಜ್ ತಂಗಡಗಿ, ಅನಾರೋಗ್ಯದ ಜೊತೆ ಸ್ವತಃ ಸೋಂಬೇರಿಯಾಗಿರುವ ನಟ ಅಂಬರೀಶ್, ಹಗರಣಗಳ ಬಾಬುರಾವ್ ಚಿಂಚನಸೂರ್, ಇಂತಹ ಅನೇಕರನ್ನು ಬದಲಾಯಿಸಲೇ ಬೇಕಿತ್ತು ಮತ್ತು ಆಂತರಿಕ ಬಡಿದಾಟ ಕಡಿಮೆ ಮಾಡಿಕೊಳ್ಳಲು ಮೂಲ ಹಾಗೂ ಹಿರಿಯ ಕಾಂಗ್ರೆಸ್ಸಿಗರನ್ನೂ ಒಳಗೊಳ್ಳಬೇಕಿತ್ತು. ಹೀಗಾಗಿ ಹಿಂದಿದ್ದ ಕೆಲವರನ್ನೂ ಉಳಿಸಿಕೊಂಡು, ಇದ್ದ 13 ಜನರನ್ನೂ ಕೈ ಬಿಟ್ಟು ಹೊಸಬರನ್ನೂ ಸೇರಿಸಿಕೊಂಡ ಸಂಪುಟ ಪುನರ್ ರಚನೆ ಸಿದ್ದರಾಮಯ್ಯನವರಿಗೆ ಅನಿವಾರ್ಯ, ಅಗತ್ಯವಿತ್ತು.

ಈ ಪುನರ್ ರಚನೆಯಲ್ಲಿ ಕಾಗೋಡು ತಿಮ್ಮಪ್ಪ, ಕೆ.ಆರ್. ರಮೇಶ್ ಕುಮಾರ್, ಬಸವರಾಜ ರಾಯರೆಡ್ಡಿ ಯಂತಹ ಹಿರಿಯ ನಾಯಕರಲ್ಲದೇ ಪ್ರಿಯಾಂಕ ಖರ್ಗೆ, ಪ್ರಮೋದ್ ಮಧ್ವರಾಜ್ ಮುಂತಾದ ಕೆಲ ಯುವಕರು ಸೇರ್ಪಡೆಯಾಗಿದ್ದಾರೆ. ದಿನೇಶ್ ಗುಂಡೂರಾಯರನ್ನು ಸಂಪುಟದಿಂದ ಕೈಬಿಟ್ಟು ಪಕ್ಷದ ಕಾರ್ಯಾಧ್ಯಕ್ಷ ಹುದ್ದೆಗೆ ನೇಮಿಸಲಾಗಿದೆ. ಯುವ ತಂಡದ ಮೂಲಕ ಚುರುಕು ಆಡಳಿತ ನಡೆಸುವ ನಿರೀಕ್ಷೆಯು ಕಾರ್ಯಗತಗೊಳ್ಳಬೇಕಿದೆ.

ಈ ಸಂಪುಟ ಪುನರ್ ರಚನೆಯಲ್ಲಿ ಹಿರಿಯ ನಾಯಕರಾದ ಶ್ಯಾಮನೂರು ಶಿವಶಂಕರಪ್ಪ, ಮಲ್ಲಿಕಾರ್ಜುನ ಖರ್ಗೆಯಂತಹವರು ತಮ್ಮ ಮಕ್ಕಳನ್ನೇ ಮಂತ್ರಿಯಾಗಿಸಿದ್ದಾರೆ. ತಾವು ಹೊರಗಿದ್ದರೂ ಸಂಪುಟ ಹಾಗೂ ಪಕ್ಷದಲ್ಲಿ ತಮ್ಮ ಬಲದ 'ಕೈ' ಇರಿಸಿದ್ದಾರೆ. ಕಾಂಗ್ರೆಸ್‌ಗೆ ಭಿನ್ನಮತದ ಕದನದ ಕಣಗಳಲ್ಲಿ ಒಂದಾಗಿರುವ ಮಂಡ್ಯ ಜಿಲ್ಲೆಯಲ್ಲಿ ಅಂಬರೀಶ್ ಸ್ಥಾನಕ್ಕೆ ಯಾರನ್ನೂ ತೆಗೆದುಕೊಳ್ಳದೇ ಖಾಲಿ ಇರುವುದು ಕುತೂಹಲಕರ! ಯಾಕೆಂದರೆ ಅಂಬರೀಶ್ ಬಣಕ್ಕೆ ಎದುರಾಗಿರುವುದು ಮಾಜಿ ಸಂಸದೆ ರಮ್ಯಾ ನೇತೃತ್ವದ ಬಣ. ಇದನ್ನು 'ಹೈಕಮಾಂಡ್ ಸೀಟ್' ಅಂತಾ ಕರೆಯುತ್ತಿರುವುದು ಕುತೂಹಲಕ್ಕೆ ಮತ್ತೊಂದು ಕಾರಣ. ಹಾಗೆ ಮೊದಲು ಲೇಔಟ್ ಕೃಷ್ಣಪ್ಪನವರ ಹೆಸರು ಪ್ರಕಟನೆಗೊಂಡು ನಂತರ ಬದಲಾದ ಪ್ರಸಂಗದಲ್ಲಿ ಡಿ ಕೆ ಶಿವಕುಮಾರ್ ಕೈವಾಡವಿದೆ ಎಂದು ದಾಂಧಲೆಯೂ ನಡೆದದ್ದು ಮತ್ತೊಂದು ಪ್ರಕರಣ.



ಕೃಪೆ: ಪಿ. ಮಹಮ್ಮದ್,
ವಿಜಯ ಕರ್ನಾಟಕ

ಈ ಸಂಪುಟ ವಿಸ್ತರಣೆ ಬಳಿಕ ಸಚಿವ ಸ್ಥಾನದಲ್ಲಿದ್ದು, ಮಾಜಿಗಳಾದ ಶ್ರೀನಿವಾಸ್ ಪ್ರಸಾದ್, ಖಮರುಲ್ ಇಸ್ಲಾಂ, ಮಾಲಿಕಯ್ಯ ಗುತ್ತೇದಾರ, ಮಲಕರೆಡ್ಡಿ, ಸೋಮಶೇಖರ್ ಹಾಗೂ ತಂಗಡಗಿ ಯಂತಹವರು ಈಗ ಬೀದಿರಂಪಾಟ ಮಾಡುತ್ತಿದ್ದಾರೆ. ಬೆಂಬಲಿಗರನ್ನೂ ಹುರಿದುಂಬಿಸಿ ಸಾರ್ವಜನಿಕ ಆಸ್ತಿ–ಪಾಸ್ತಿಗೆ ಹಾನಿಯುಂಟು ಮಾಡುತ್ತಿದ್ದಾರೆ. ಕಾಂಗ್ರೆಸ್ ಮುಕ್ತ ಭಾರತದ ಬಿಜೆಪಿ ಯತ್ನಕ್ಕೆ ತಮ್ಮಂತಹ ಕಾಂಗ್ರೆಸ್ಸಿಗರ ಕೊಡುಗೆ ದೊಡ್ಡದಾಗಲಿದೆ ಎಂದು ಎಚ್ಚರಿಸುತ್ತಿದ್ದಾರೆ. ಅವರಿಲ್ಲದೇ ಕರ್ನಾಟಕಕ್ಕೆ ಉಳಿಗಾಲವಿಲ್ಲ ಎಂದು ಅಂತಹವರು ಭಾವಿಸಿದ್ದರೆ ಅದು ಕಡು ಮೂರ್ಖತನ. ಈಗಿನ ಅವರ ವರ್ತನೆಗಳು ಅತ್ಯಂತ ಬೇಜವಾಬ್ದಾರಿತನ ಮತ್ತು ಸ್ವಾರ್ಥ ರಾಜಕಾರಣದ ಪರಮಾವಧಿ. ಸಿದ್ದರಾಮಯ್ಯನವರು ತಮ್ಮ ಸಂಪುಟದಲ್ಲಿ ಇನ್ನೂ ಕೆಲವರನ್ನೂ ಬದಲಾಯಿಸ ಬೇಕಿರಬಹುದು. ಹೊಸಬರನ್ನೂ ತೆಗೆದುಕೊಳ್ಳಬಹುದಿತ್ತು. ಆದರೆ ಯಾವುದಕ್ಕೂ ಒಂದು ಮಿತಿ ಇದೆ. ಸಾರ್ವಜನಿಕ ಸೇವೆಗೆಂದೇ ರಾಜಕಾರಣಕ್ಕೆ ಬಂದಿದ್ದೇವೆಂದು ಹೇಳುವ ಇವರು ಮಂತ್ರಿಗಿರಿಗೆ ಹಾತೊರೆಯುವುದು ಹಣ ಮಾಡಲು, ಸ್ವಜನ ಪಕ್ಷಪಾತ, ಆಸ್ತಿ ಗಳಿಕೆಗೆ ಎಂಬುದು ಬಹುತೇಕರ ವಿಷಯದಲ್ಲಿ ನಿಚ್ಚಳ. ಇದಕ್ಕೆ ಬಂದೆರಡು ಅಪವಾದ ಇರಬಹುದು. ಪಕ್ಷದೊಳಗೆ ವ್ಯಕ್ತಪಡಿಸಬೇಕಾದ ಅತೃಪ್ತಿ, ಭಿನ್ನಾಭಿಪ್ರಾಯಗಳನ್ನು ಬೀದಿಗೆ ತರುವುದೆಂದರೆ ಇವರ ರಾಜಕಾರಣಕ್ಕೆ ಏನರ್ಥ? ಈ ಪ್ರವೃತ್ತಿ ಒಂದು ಪಕ್ಷಕ್ಕೆ ಸೀಮಿತವೇನಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳಲ್ಲಿ ಇಂತಹ ಸ್ವಾರ್ಥವೇ ಹೆಚ್ಚಿರುವುದು ದಿವಾಳಿತನದ ಬಲಪಂಥೀಯ ರಾಜ–ಕಾರಣದ ದ್ಯೋತಕ.

ನಮ್ಮ ಪ್ರಶ್ನೆ, ಸಂಪುಟದ ಪುನರ್ ರಚನೆ, ಆ ಮೂಲಕ ಕ್ರಿಯಾಶೀಲತೆಗೆ ಒಂದಿಷ್ಟು ಚಾಲನೆ ಕೊಡಲು ಸಾಧ್ಯವಿದೆ ಎಂಬುದು ನಿಜವಾದರೂ ಮೂಲಭೂತವಾಗಿ ರಾಜ್ಯದ ಕಾಂಗ್ರೆಸ್‌ನ ಆಡಳಿತದ ನೀತಿಗಳು ಬದಲಾಗದೇ ಕನಿಷ್ಠ ಜನತೆಗೆ ಕೊಂಚವಾದರೂ ಪರಿಹಾರ ನೀಡಲು ಸಾಧ್ಯವಾದೀತೇ? ಸಂಪುಟ ರಚನೆ, ಪುನರ್ ರಚನೆ ಮುಖ್ಯಮಂತ್ರಿಯವರ ಹಕ್ಕು ಹಾಗೂ ಆ ಪಕ್ಷದ ಆಂತರಿಕ ವಿದ್ಯಮಾನ. ಜನರಿಗೆ ಬೇಕಿರುವುದು ಕಾಂಗ್ರೆಸ್ ಚುನಾವಣೆಯಲ್ಲಿ ನೀಡಿದ ವಚನಗಳ ಈಡೇರಿಕೆ. ಹೊರತು ಸಂಪುಟದ ಪುನರ್ ರಚನೆಯ ಬಳಿಕ ಕಾಂಗ್ರೆಸ್‌ನಲ್ಲಿ ಭಿನ್ನಮತ, ಒಳಜಗಳಗಳ ಕಿತ್ತಾಟ–ಕೆಸರೆರಚಾಟದ 'ಮನೋರಂಜನೆ'ಯಲ್ಲ.

ಈ ಸಂಪುಟದ ವಿಸ್ತರಣೆ ಮೂಲಕ ಸರಕಾರದಲ್ಲಿ ಉತ್ಸಾಹ ತುಂಬಿ ಅಧಿಕಾರ ಹಿಡಿದೇ ಬಿಡುವೆಂದು ಬೀಗುವ ಬಿಜೆಪಿಗೆ ಉತ್ತರ ಕೊಡಲು ಸಾಧ್ಯವೆಂದು ಹೇಳಲಾಗುತ್ತಿದೆ. ಇನ್ನು ತಮ್ಮನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಮುಖ್ಯಮಂತ್ರಿಯವರ ಮಾತುಗಳೂ ಸಹ ಅತಿ ಎನ್ನದೇ ವಿಧಿಯಿಲ್ಲ. ಮೇಲುಗೈ ಸಾಧಿಸುವ ಇಂಗಿತವನ್ನು ಅವರಾಡಿದರೂ ಮೂಲತಃ ನಿರ್ಣಾಯಕ ಕಾರ್ಯಕ್ರಮವಿಲ್ಲದೇ ಅದು ಅಷ್ಟು ಸುಲಭವೂ ಅಲ್ಲ.

ನಮ್ಮ ಪ್ರಶ್ನೆ, ಸಂಪುಟದ ಪುನರ್ ರಚನೆ, ಆ ಮೂಲಕ ಕ್ರಿಯಾಶೀಲತೆಗೆ ಒಂದಿಷ್ಟು ಚಾಲನೆ ಕೊಡಲು ಸಾಧ್ಯವಿದೆ ಎಂಬುದು ನಿಜವಾದರೂ ಮೂಲಭೂತವಾಗಿ ರಾಜ್ಯದ ಕಾಂಗ್ರೆಸ್‌ನ ಆಡಳಿತದ ನೀತಿಗಳು ಬದಲಾಗದೇ ಕನಿಷ್ಠ ಜನತೆಗೆ ಕೊಂಚವಾದರೂ ಪರಿಹಾರ ನೀಡಲು ಸಾಧ್ಯವಾದೀತೇ? ಇನ್ನೊಂದೆಡೆ ಆಡಳಿತ ಚುರುಕುಗೊಳಿಸುವ, ಸಚಿವರೂ ಕೂಡ ಜನರ ನೋವು, ಸಂಕಷ್ಟಗಳನ್ನು ಆಲಿಸುವ, ತಕ್ಷಣ ಕ್ರಮವಹಿಸಿ ಪರಿಹಾರ ಒದಗಿಸುವ ಇಚ್ಛಾಶಕ್ತಿ ಇಲ್ಲದೇ ಹೋದರೆ ಕೆಂಪು ಕಾರಿನ ಕಾರುಬಾರು ಉಳ್ಳವರಿಗಷ್ಟೇ ಆಗದಿರದೇ? ಎಂದಿನಂತೆ ಈಗಲೂ ಸಂಪುಟ ರಚನೆಗೆ ಆಧಾರವಾಗಿರುವುದು ಜಾತಿ ಸೂತ್ರ, ಬಲ ಇರುವ ನಾಯಕರ ಪಾತ್ರ ! ಇಷ್ಟರಿಂದಲೇ ಕೋಮುವಾದಿಗಳ ಅಪಾಯವನ್ನು ತಡೆಯಲು ಸಾಧ್ಯವೇ?

ಒಂದು ಸ್ಪಷ್ಟ ರಾಜಕೀಯ ಧೋರಣೆಯ ಸುತ್ತ ಕಾಂಗ್ರೆಸ್ ತನ್ನ ನಾಯಕರನ್ನು, ಕಾರ್ಯಕರ್ತರನ್ನು ಅಣಿ ನೆರೆಸದೇ ಗುರಿ ಸಾಧಿಸಲಾಗುವುದೆಂಬುದು ಬರೀ ಭ್ರಮೆ. ಅಂತಹ ಇಚ್ಛಾಶಕ್ತಿಯೇ ಅಲ್ಲಿ ಕಾಣುತ್ತಿಲ್ಲ. ಇಷ್ಟಾದ ಬಳಿಕವೂ ಖರ್ಗೆಯಂತಹ ನಾಯಕರೂ ಸಂಪುಟ ಪುನರ್ ರಚನೆ ಬಳಿಕ ಎದ್ದು ಬಂದ ಭಿನ್ನಮತದ ಪ್ರಶ್ನೆಗಳನ್ನೂ ಖಂಡತುಂಡವಾಗಿ ವಿರೋಧಿಸಿ ಬಗೆಹರಿಸುವ ಬದಲು, ತನ್ನ ಪಾತ್ರವೇನೂ ಇದರಲ್ಲಿ ಇಲ್ಲವೆಂದು ಕೈಝಾಡಿಸಿ ಭಿನ್ನಮತೀಯರಿಗೆ ಹೇಳಿರುವುದರಲ್ಲಿ ಯಾವ ಸದುದ್ದೇಶವೂ ಇಲ್ಲ. ಅಂದರೆ ತಮ್ಮದೇ ಪಕ್ಷದ ಸರಕಾರವನ್ನೂ ಭಿನ್ನಮತದ ಅತಂತ್ರ ಸ್ಥಿತಿಯಲ್ಲೇ ಇಡುವ ಯೋಜಿತ ತಂತ್ರ ಮುಂದುವರಿಯಲಿದೆ. ಯಾಕೆಂದರೆ ಸಂಪುಟದಲ್ಲಿ ಸ್ಥಾನ ಪಡೆಯುವ ಮಾತುಗಳ ಬದಲಾಗಿ ಮುಖ್ಯಮಂತ್ರಿಯನ್ನೇ ಬದಲಾಯಿಸುವುದರ ಸುತ್ತ ಈಗ 'ಅತೃಪ್ತ'ರನ್ನೂ ಕ್ರೋಢೀಕರಿಸುವ ಪ್ರಯತ್ನಗಳಿಗೆ ಚಾಲನೆ ಹೆಚ್ಚಿದೆ.

ಈ ಸನ್ನಿವೇಶದ ಲಾಭ ಗಿಟ್ಟಿಸಲು ಬಿಜೆಪಿ ಸಕ್ರಿಯವಾಗಿದೆ. ಇದಕ್ಕೆ ಮಾಧ್ಯಮಗಳೂ ಸಾಥ್ ನೀಡುತ್ತಿವೆ. ಹಿಂದೆಲ್ಲಾ ಅಂಬರೀಶ್, ತಂಗಡಗಿ, ಪರಮೇಶ್ವರನಾಯ್ಕರಂಥವರು ಅಸಮರ್ಥರು, ಭ್ರಷ್ಟರು ಅವರನ್ನು ಸಂಪುಟದಿಂದ ಹೊರದಬ್ಬಿ ಎಂದೆಲ್ಲಾ ಅಭಿಯಾನ ನಡೆಸಿದ್ದ ಪತ್ರಿಕೆ, ಟಿ.ವಿ. ಮಾಧ್ಯಮಗಳು ಇದೀಗ ಅಂತಹ ಅತಿರಥ–ಮಹಾರಥರನ್ನು ಕೈ ಬಿಟ್ಟು ಅನ್ಯಾಯ ಮಾಡಲಾಗಿದೆಯೆಂದು ದಮ್ಮು ಕಟ್ಟಿ ಪ್ರಚಾರಿಸುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ಬಿಜೆಪಿ ಸಂಘ–ಪರಿವಾರದ ರಾಜಕಾರಣಕ್ಕೆ ಭೂಮಿ ಹದಗೊಳಿಸುವ ಕರಸೇವಕರ ಪಾತ್ರದ್ದಾಗಿರುವುದು ನಾಚಿಕೇಗೇಡು.

ಒಟ್ಟಾರೆ, ಸಂಪುಟ ರಚನೆ, ಪುನರ್ ರಚನೆ ಮುಖ್ಯಮಂತ್ರಿಯವರ ಹಕ್ಕು ಹಾಗೂ ಆ ಪಕ್ಷದ ಆಂತರಿಕ ವಿದ್ಯಮಾನ. ಜನರಿಗೆ ಬೇಕಿರುವುದು ಕಾಂಗ್ರೆಸ್ ಚುನಾವಣೆಯಲ್ಲಿ ನೀಡಿದ ವಚನಗಳ ಈಡೇರಿಕೆ. ಹೊರತು ಸಂಪುಟದ ಪುನರ್ ರಚನೆಯ ಬಳಿಕ ಕಾಂಗ್ರೆಸ್‌ನಲ್ಲಿ ಭಿನ್ನಮತ, ಒಳಜಗಳಗಳ ಕಿತ್ತಾಟ–ಕೆಸರೆರಚಾಟದ 'ಮನೋರಂಜನೆ'ಯಲ್ಲ. ●

ನಾಳಿನ ಕಾರ್ಯಕ್ರಮಗಳು

ಜೂನ್ 28 : ಪಶ್ಚಿಮ ಬಂಗಾಳದಲ್ಲಿ ಜನತೆಯ ಮೇಲಿನ ಧಾಳಿಯನ್ನು ಖಂಡಿಸಿ ಸಿಐಟಿಯು ವತಿಯಿಂದ ರಾಜ್ಯಾದ್ಯಂತ ಪ್ರತಿಭಟನೆ

ಜೂನ್ 30 : ಸಿಐಟಿಯು ಸಂಸ್ಥಾಪನೆ ದಿನಾಚರಣೆ ಹಾಗೂ ಕಾಂ.ಸೂರ್ಯನಾರಾಯಣರಾವ್, ಕಾಂ. ಎಸ್.ಪ್ರಸನ್ನಕುಮಾರ್ ಇವರ ನೆನಪಿನಲ್ಲಿ "ಜಾಗತೀಕರಣ–ಉದ್ಯೋಗ" : ಒಂದು ಚರ್ಚೆ ಮತ್ತು "ನಿರುದ್ಯೋಗ ಉದ್ಯೋಗದ ಪ್ರಶ್ನೆ" ಪುಸ್ತಕ ಬಿಡುಗಡೆ. ಮುಖ್ಯ ಅತಿಥಿ ಡಾ.ಚಂದ್ರ ಪೂಜಾರಿ, ಯು.ಭೂಪತಿ, ಅಧ್ಯಕ್ಷತೆ ಕಾಂ.ವಿಜೆಕೆ ನಾಯರ್, 'ಸೂರಿ' ಭವನ ಸಂಪಂಗಿರಾಮನಗರ, ಬೆಂಗಳೂರು. ಬೆ.10.30ಕ್ಕೆ

ಜುಲೈ 1 : ಕೆಪಿಆರ್‌ಎಸ್ ನಿಂದ ರೈತರ ಬೃಹತ್ ಪ್ರತಿಭಟನಾ ಸಭೆ, ಫ್ರೀಡಂ ಪಾರ್ಕ್ ಬೆಂಗಳೂರು.

ಜುಲೈ 1–3 : ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೌನ್ಸಿಲ್ ಸಭೆ, ಶಿಕ್ಷಕರ ಸದನ, ಮೈಸೂರು ಬ್ಯಾಂಕ್ ಹತ್ತಿರ, ಬೆಂಗಳೂರು.

ಜುಲೈ 11 : ಮಿಷನ್ ಮೋಡ್ ವಿರೋಧಿಸಿ ದೇಶವ್ಯಾಪಿ ಅಂಗನವಾಡಿ ಕೇಂದ್ರಗಳ ಬಂದ್

ಆಗಸ್ಟ್ 09 : ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜೂನ್ 24–25	: ಕೊಪ್ಪಳ
ಜೂನ್ 26–27	: ಬಳ್ಳಾರಿ ಜಿಲ್ಲೆ
ಜುಲೈ 8–9	: ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17	: ಮೈಸೂರು ಜಿಲ್ಲೆ
ಜುಲೈ 23–24	: ದಾವಣಗೆರೆ ಜಿಲ್ಲೆ
ಜುಲೈ 24–25	: ಬೆಂಗಳೂರು ದಕ್ಷಿಣಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ
ಜುಲೈ 30–31	: ಉತ್ತರ ಕನ್ನಡ
ಜುಲೈ 30–31	: ಚಿತ್ರದುರ್ಗ
ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 31–ಆಗಸ್ಟ್ 01	: ಕೋಲಾರ ಜಿಲ್ಲೆ
ಆಗಸ್ಟ್ 06–07	: ಬೆಳಗಾಂ
ಆಗಸ್ಟ್ 6–7	: ತುಮಕೂರು ಜಿಲ್ಲೆ
ಆಗಸ್ಟ್ 13–14	: ಹಾಸನ ಜಿಲ್ಲೆ

ಸಿಪಿಐ(ಎಂ) ಕರ್ನಾಟಕ ಯೂಟ್ಯೂಬ್ ಚಾನಲ್ ಪ್ರಾರಂಭವಾಗಿದ್ದು, ಇದರಲ್ಲಿ ಇತ್ತೀಚಿನ ಸಂದರ್ಶನದ ವಿಡಿಯೋ ತುಣುಕುಗಳು ಇವೆ.

YouTube

1. ಬೆಲೆ ಏರಿಕೆ ತಡಗಟ್ಟಲು ವಿಫಲವಾಗಿದೆ ಕೇಂದ್ರ ರಾಜ್ಯ ಸರ್ಕಾರಗಳು : ಜಿ.ಎನ್.ನಾಗರಾಜ್
2. ವಿದೇಶಿ ಬಂಡವಾಳ ಹೂಡಿಕೆಯಿಂದಾಗಿ ಜನರ ಸಂಕಷ್ಟಗಳು ಮತ್ತಷ್ಟು ಉಲ್ಬಣ
3. ಸಚಿವ ಸಂಪುಟ ವಿಸ್ತರಣೆ ಪ್ರಹಸನ : ಜಿ.ವಿ.ಶ್ರೀರಾಮರೆಡ್ಡಿ
4. ಪ್ರಾಂತೀಯ ಸ್ವಾಯತ್ತತೆ ಕಸಿಯುವ ಹುನ್ನಾರ
5. ಪ್ರೊ. ಕೆ.ಎಸ್.ಭಗವಾನ್ ರವರಿಗೆ ಸಿಪಿಐ(ಎಂ) ಬೆಂಬಲ
6. ಸಮಸ್ಯೆ ಪರಿಹರಿಸದ ಸರ್ಕಾರ : ರಾಜ್ಯ ಸರ್ಕಾರಿ ನೌಕರರು ಹಾಗೂ ಪೊಲೀಸ್ ಸಿಬ್ಬಂದಿಗಳ ಪ್ರತಿಭಟನೆ

ಅಲ್ಲದೆ ಇನ್ನಷ್ಟು ವಿಡಿಯೋ ನೋಡಲು ಯೂಟ್ಯೂಬ್ ನಲ್ಲಿ :
cpim Karnataka ಎಂದು ಟೈಪ್ ಮಾಡಿ
ಅಥವಾ
ಈ ಲಿಂಕ್ ವಿಳಾಸಕ್ಕೆ ಭೇಟಿ ನೀಡಿ
https://www.youtube.com/channel/UCtfkWPTpMiT4SOQkSsV_BJA/videos
ಈ ಲಿಂಕ್ ವಿಳಾಸಕ್ಕೆ ಭೇಟಿ ನೀಡಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00
ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ದಲಿತ ಹಕ್ಕುಗಳ ಹಾಸನ ಜಿಲ್ಲಾ ಸಮಾವೇಶ

“ಉಪ ಯೋಜನೆಗಳ ಹಣ ದಲಿತರ ಮಾನವಾಭಿವೃದ್ಧಿಗೆ ಬಳಕೆಯಾಗಲಿ”



ಒಳ ಮೀಸಲಾತಿಯ ಬೇಡಿಕೆಗಿಂತ ಎಲ್ಲರೂ ಒಟ್ಟಿಗೆ ಸೇರಿ ಮೀಸಲಾತಿಯ ಉಳಿವಿಗಾಗಿ ಚಳುವಳಿಯನ್ನು ರೂಪಿಸಬೇಕಾದ ಅನಿವಾರ್ಯತೆ ದಲಿತ ಚಳುವಳಿಗಳ ಮುಂದಿದೆ ಎಂದು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು ಹೇಳಿದರು.

ಹಾಸನ ನಗರದ ಸ್ವಾಭಿಮಾನ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ 125 ನೇ ಜನ್ಮ ವರ್ಷಾಚರಣೆಯ ಅಂಗವಾಗಿ “ದಲಿತ ಹಕ್ಕುಗಳ ಜಿಲ್ಲಾ ಸಮಾವೇಶ”ವನ್ನು ಉದ್ಘಾಟಿಸಿ ಮಾತನಾಡುತ್ತಾ “ರಾಜ್ಯ ಸರ್ಕಾರ ಎಸ್ಸಿಪಿ ಮತ್ತು ಟಿಎಸ್ಪಿ ಉಪ ಯೋಜನೆಗೆಂದು 19 ಸಾವಿರ ಕೋಟಿ ರೂಗಳನ್ನು ಬಿಡುಗಡೆ ಮಾಡಿದ್ದು ಇದರಲ್ಲಿ ಬಹುಪಾಲು ಹಣವನ್ನು ದಲಿತ ಗ್ರಾಮಗಳ ಮೂಲಭೂತ ಸೌಲಭ್ಯಗಳಾದ ರಸ್ತೆ, ಮತ್ತಿತರೆ ಕಾಮಗಾರಿಗಳಿಗೆ ಬಳಸಲಾಗುತ್ತಿದೆ. ಆದರೆ ದಲಿತರ ಮಾನವಾಭಿವೃದ್ಧಿ ಕಡೆ ಹೆಚ್ಚಿನ ಗಮನ ನೀಡಬೇಕು, ಅದರಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗದಂತಹ ಕೆಲಸಗಳಿಗೆ ಹೆಚ್ಚಿನ ಗಮನ ನೀಡುತ್ತಿಲ್ಲ. ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇ 76 ರಷ್ಟಿದ್ದರೆ ಅದರಲ್ಲಿ ದಲಿತರ ಸಾಕ್ಷರತೆ-ಯ ಪ್ರಮಾಣ ಕೇವಲ ಶೇ 20 ರಷ್ಟಿದೆ ಎಂದರು.

ಸರ್ಕಾರವೇ ಬಿಡುಗಡೆ ಮಾಡಿರುವ ಅಭಿವೃದ್ಧಿ ವರದಿಯ ಪ್ರಕಾರ ಜಿಲ್ಲೆಯಲ್ಲಿ 1 ಎಕ್ರೆ ಕೃಷಿ ಭೂಮಿಯನ್ನು ಹೊಂದಿರುವ ದಲಿತರು ಶೇ 71, 2 ಎಕ್ರೆ ಹೊಂದಿರುವ ದಲಿತರು ಶೇ.23, 4 ರಿಂದ 10 ಎಕರೆ ಕೃಷಿ ಭೂಮಿಯನ್ನು ಹೊಂದಿರುವ ದಲಿತರು ಕೇವಲ ಶೇ 0.65 ರಷ್ಟಿದ್ದಾರೆ ಇದರಿಂದ ಕೃಷಿ ಯೋಗ್ಯ ಭೂಮಿ ಯಾರ ಕೈಯಲ್ಲಿ ಕೇಂದ್ರೀಕೃತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅತ್ಯಾಧುನಿಕ ವಿಜ್ಞಾನ ತಂತ್ರಜ್ಞಾನಗಳನ್ನು ಹೊಂದಿರುವ ನಾಗರಿಕ ಸಮಾಜದಲ್ಲಿ ಇಂದಿಗೂ ಶೇ 99 ರಷ್ಟು ದೇವಸ್ಥಾನಗಳಿಗೆ ದಲಿತರ ಪ್ರವೇಶವನ್ನು ನಿರಾಕರಿಸಲಾಗುತ್ತಿದೆ ಎಂದರು.

ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರ ಮೂರ್ತಿಯವರು ಹಾಸನ ಜಿಲ್ಲೆ ಮೂಲತಃ ಪಾಳೇಗಾರಿ ಭೂಮಾಲಿಕರ ಹಿಡಿತದಲ್ಲಿರುವ ಜಿಲ್ಲೆಯಾಗಿರುವುದರಿಂದ ಇಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿದ್ದರೂ ಅವುಗಳನ್ನು ಮುಚ್ಚಿ ಹಾಕುವ ಪ್ರಯತ್ನ ಮತ್ತು ದಲಿತರ ಪರ ಧ್ವನಿ ಎತ್ತುವವರನ್ನು ಬೆದರಿಸುವ ಪ್ರಯತ್ನಗಳು ನಡೆಯುತ್ತಿವೆ, ಇದಕ್ಕೆ ಜಗ್ಗದೆ ಸಿಗರನಹಳ್ಳಿಯ ದಲಿತರಿಗೆ ನ್ಯಾಯ ಕೊಡಿಸಿದ ಎಲ್ಲ ಚಳುವಳಿಗಾರರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್‌ರವರು “ಜಿಲ್ಲೆಯ ಎಲ್ಲ ಜನಪರ ಚಳುವಳಿಗಳು ಮತ್ತು ದಲಿತ ಚಳುವಳಿಗಳು ಒಟ್ಟಿಗೆ ಸೇರಿದ್ದ-ರಿಂದ ಸಿಗರನಹಳ್ಳಿ ಸಮಸ್ಯೆಯನ್ನು ಒಂದು ತಾತ್ವಿಕ ಹಂತಕ್ಕೆ ಮುಟ್ಟಿಸಲು ಸಾಧ್ಯವಾಯಿತು. ಇದೇ ಮಾದರಿಯಲ್ಲಿ ರಾಜ್ಯದಾ ದ್ಯಂತ ಚಳುವಳಿಗಳು ವಿಷಯಾಧಾರಿತವಾಗಿ ಒಗ್ಗಟ್ಟಾಗಿ ಕೆಲಸ ಮಾಡಬೇಕಾದ ಅನಿವಾರ್ಯತೆಯಿದೆ" ಎಂದರು.

ಸಮಾವೇಶದಲ್ಲಿ ಹಿರಿಯ ದಲಿತ ಮುಖಂಡರಾದ ನಾರಾಯಣದಾಸ್ ಭಾಗವಹಿಸಿದ್ದರು ಅಧ್ಯಕ್ಷತೆಯನ್ನು ಡಿ.ಎಚ್.ಎಸ್ ಮುಖಂಡರಾದ ಕೆ.ಎಸ್.ಮಂಜುನಾಥ್ ವಹಿಸಿದ್ದರು, ಸ್ವಾಗತವನ್ನು ಮಧುಸೂಧನ್, ವಂದನಾರ್ಪಣೆಯನ್ನು ಪ್ರದೀಪ್‌ಕುಮಾರ್ ಮಾಡಿದರು. ಕಾರ್ಯಕ್ರಮವನ್ನು ಪೃಥ್ವಿ ನಿರ್ವಹಿಸಿದರು.

ನೂತನ ಸಮಿತಿ ಆಯ್ಕೆ :

ಸಮಾವೇಶದ ಅಂತ್ಯದಲ್ಲಿ 29 ಜನರನ್ನೊಳಗೊಂಡ ಜಿಲ್ಲಾ ಮಟ್ಟದ ದಲಿತ ಹಕ್ಕುಗಳ ಸಮಿತಿಯನ್ನು ಆಯ್ಕೆ ಮಾಡಲಾಯಿತು ಜಿಲ್ಲಾ ಸಂಚಾಲಕರಾಗಿ ಪೃಥ್ವಿ ಎಂ.ಜಿ, ಸಹಸಂಚಾಲಕರುಗಳಾಗಿ ಮಂಜುನಾಥ್ ಕೆ.ಎಸ್, ವಿನೋದ್, ಮಧುಸೂದನ್, ಮೀನಾಕ್ಷಿ, ರಾಜು ಸಿಗರನಹಳ್ಳಿಯವರನ್ನು ಆಯ್ಕೆ ಮಾಡಲಾಯಿತು.

ಅಖಿಲ ಭಾರತ ಅಧ್ಯಯನ ಶಿಬಿರ 2016 ಜುಲೈ 23 ರಿಂದ 25 ಹಾಸನದಲ್ಲಿ

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚರಣೆಯ ಅಂಗವಾಗಿ ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ದಲಿತರ ಹಕ್ಕುಗಳ ಕುರಿತು ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್‌ಎಂಎಂ) ನೇತೃತ್ವದಲ್ಲಿ ಅಖಿಲ ಭಾರತ ಮಟ್ಟದ ಅಧ್ಯಯನ ಶಿಬಿರವು 2016 ಜುಲೈ 23 ರಿಂದ 25 ವರೆಗೆ 3 ದಿನಗಳ ಕಾಲ ಹಾಸನದಲ್ಲಿ ನಡೆಯಲಿದ್ದು ಆಯ್ದ ಸುಮಾರು 250 ಪ್ರತಿನಿಧಿಗಳು ದೇಶದ ವಿವಿಧ ರಾಜ್ಯಗಳಿಂದ ಭಾಗವಹಿಸಲಿದ್ದಾರೆ.

ಈ ಅಧ್ಯಯನ ಶಿಬಿರದ ಯಶಸ್ವಿಗೆ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಹಿರಿಯ ದಲಿತ ಮುಖಂಡರಾದ ನಾರಾಯಣ್ ದಾಸ್, ಅಧ್ಯಕ್ಷರಾಗಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್, ಪ್ರಧಾನ ಕಾರ್ಯದರ್ಶಿಯಾಗಿ ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಕರಾದ ಎಂ.ಜಿ.ಪೃಥ್ವಿ, ಖಜಾಂಚಿಯಾಗಿ ದಲಿತ ಹಕ್ಕುಗಳ ಸಮಿತಿಯ ಸಹ ಸಂಚಾಲಕರಾದ ಕೆ.ಎಸ್.ಮಂಜುನಾಥ್‌ರವರನ್ನು ಆಯ್ಕೆಮಾಡಲಾಗಿದೆ. ಸ್ವಾಗತ ಸಮಿತಿಯಲ್ಲಿ ಜಿಲ್ಲೆಯ ಎಡ, ದಲಿತ ಮತ್ತು ಜನಪರ ಸಂಘಟನೆಗಳ ಮುಖಂಡರನ್ನೊಳಗೊಳ್ಳಲಾಗಿದೆ.

ಜೂನ್ 11 ರಂದು ನಡೆದ ಸ್ವಾಗತ ಸಮಿತಿ ರಚನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳ್ಳಿಯವರು ಡಾ.ಬಿ.ಆರ್. ಅಂಬೇಡ್ಕರ್‌ರವರ 125 ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ದಲಿತ ಶೋಷಣ ಮುಕ್ತಿ ಮಂಚ್‌ನ ಅಖಿಲ ಭಾರತ ಅಧ್ಯಯನ ಶಿಬಿರವನ್ನು ಕರ್ನಾಟಕದಲ್ಲಿ ಅದರಲೂ ಹಾಸನದಲ್ಲಿ ನಡೆಸಲು ಅತ್ಯಂತ ಸಂತೋಷವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಸಿಗರನಹಳ್ಳಿ ದಲಿತರ ದೇವಸ್ಥಾನ ಮತ್ತು ಸಮುದಾಯ ಭವನ ಪ್ರವೇಶದ ಹೋರಾಟದ ಯಶಸ್ವಿನ ಸ್ಪೂರ್ಥಿಯಿಂದ ತಯಾರಿಗಳನ್ನು ನಡೆಸಿ ಈ ವಿಚಾರವನ್ನು ಜಿಲ್ಲೆಯ ಮನೆಮನೆಗಳಿಗೂ ತಲುಪಿಸೋಣ ಎಂದರು.

ನಿಯಮಾವಳಿ ರೂಪಿಸಲು ಬೀದಿಬದಿ ಮಾರಾಟಗಾರರ

ಪ್ರಥಮ ರಾಜ್ಯ ಸಮಾವೇಶ



ಕರ್ನಾಟಕ ರಾಜ್ಯ ಬೀದಿ ಬದಿ ಮಾರಾಟಗಾರರ ಫೆಡರೇಷನ್‌ನ ಪ್ರಥಮ ರಾಜ್ಯ ಸಮಾವೇಶವನ್ನು ಜೂನ್ 21ರಂದು ಬೆಂಗಳೂರಿನ ಸಿಐಟಿಯು ರಾಜ್ಯ ಸಮಿತಿ ಕಛೇರಿ ಸೂರಿಭವನದಲ್ಲಿ ನಡೆಸಲಾಯಿತು.

ಸಮಾವೇಶವನ್ನು ಕರ್ನಾಟಕ ರಾಜ್ಯ ಬೀದಿ ಬದಿ ಮಾರಾಟಗಾರರ ಫೆಡರೇಷನ್‌ನ ರಾಜ್ಯ ಅ ಧ್ಯಕ್ಷರಾದ ಕೆ.ಎನ್.ಉಮೇಶ್ ಅವರು ನೇರವೇರಿಸಿದರು. ಅಧ್ಯಕ್ಷತೆಯನ್ನು ತುಮಕೂರು ಫುಟ್‌ಪಾತ್ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷರಾದ ಮಹಮ್ಮದ್ ಇಬ್ರಾಹಿಂ ಅವರು ವಹಿಸಿದ್ದರು.

ಕೇಂದ್ರ ಸರ್ಕಾರದ ಬೀದಿಬದಿ ಮಾರಾಟಗಾರರ ಸಂರಕ್ಷಣೆಗಾಗಿ ಕಾಯಿದೆಯನ್ನು ರೂಪಿಸಿ ಎರಡು ವರ್ಷಗಳು ಕಳೆದರೂ ಸಹ ರಾಜ್ಯ ಸರ್ಕಾರ ಅದರ ಜಾರಿಗೆ ನಿಯಮಾವಳಿಗಳನ್ನು ರೂಪಿಸದೆ ಇರುವ ಕ್ರಮವನ್ನು ವಿರೋಧಿಸಿ, ಈ ತಕ್ಷಣ ನಿಯಮಾವಳಿಯನ್ನು ರೂಪಿಸಿ ಬೀದಿ ಬದಿ ಮಾರಾಟಗಾರರ ಹಿತಕಾಯಲು ಮುಂದಾಗಬೇಕು ಹಾಗೂ ನಗರಗಳ ಬಡವರಾಗಿರುವ ಈ ಜನರಿಗೆ ಸಾಮಾಜಿಕ ಭದ್ರತೆಯ ಭಾಗವಾಗಿ ಅವರ ಹಾಗೂ ಅವರ ಕುಟುಂಬ ವರ್ಗದವರ ಅನಾರೋಗ್ಯದ ಸಂದರ್ಭದಲ್ಲಿ ಉಚಿತ ಚಿಕಿತ್ಸೆ ನೀಡುವ, ಮಕ್ಕಳ ಶಿಕ್ಷಣ, ವಯಸ್ಸಾದಾಗ ಪಿಂಚಣಿ ಯೋಜನೆ ರೂಪಿಸಬೇಕೆಂದು ಈ ಸಮಾವೇಶದಲ್ಲಿ ಒತ್ತಾಯಿಸಲಾಯಿತು.

ಬೆಂಗಳೂರು ಬೀದಿ ಬದಿ ಮಾರಾಟಗಾರರ ಸಂಘದ ಮುಖಂಡರಾದ ಬಸಮ್ಮ, ಮಂಡ್ಯ ಬೀದಿ ಬದಿ ಮಾರಾಟಗಾರರ ಸಂಘದ ಅ ಧ್ಯಕ್ಷರಾದ ಎಸ್.ಬಿ.ರಾಮು, ಮಂಗಳೂರು ಬೀದಿ ಬದಿ ಮಾರಾಟಗಾರರ ಸಂಘದ ಜಿಲ್ಲಾ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್, ಕರ್ನಾಟಕ ರಾಜ್ಯ ಬೀದಿ ಬದಿ ಮಾರಾಟಗಾರರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಮತ್ತು ಸಿಐಟಿಯು ಮುಖಂಡರಾದ ಕೋದಂಡರಾಮ್ ರವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಸಮಾವೇಶಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಮೂರು ತಿಂಗಳ ಸಂಬಳ ಬಾಕಿ ಇರಿಸಿಕೊಂಡಿರುವ ಬಿಬಿಎಂಪಿ

ಏಪ್ರಿಲ್ ತಿಂಗಳಿನಿಂದ ವೇತನ ಬಾಕಿ, ವೇತನ ಹೆಚ್ಚಳ, ಪ್ರತಿ ಮಾಹೆ ದಿನಾಂಕ 5ರೊಳಗೆ ತಿಂಗಳ ವೇತನ ನೀಡಬೇಕೆಂದು ಸೇರಿದಂತೆ ಕಾರ್ಮಿಕರ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮಾಹಿತಿ ತಂತ್ರಜ್ಞಾನ ಇಲಾಖೆ ನೌಕರರು ಮತ್ತು ವಿವಿಧ ಕಛೇರಿಗಳಲ್ಲಿ ಕಂಪ್ಯೂಟರ್ಸ್ ಆಪರೇಟರ್ಸ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಸಿಐಟಿಯು ಸಂಘಟನೆ ನೇತೃತ್ವದಲ್ಲಿ ಜೂನ್ 17ರಂದು ಬಿಬಿಎಂಪಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಕಂಪ್ಯೂಟರ್ ಆಪರೇಟರ್ಸ್ ಯೂನಿಯನ್‌ನ ಅಧ್ಯಕ್ಷರಾದ ಕೆ.ಎಂ. ತನುಜಾಕ್ಷಿರವರು ಮಾತನಾಡಿ “ಕಂಪ್ಯೂಟರ್ ಆಪರೇಟರ್ಸ್‌ಗಳನ್ನು ನೇಮಿಸಿಕೊಂಡಿರುವ ಏಜೆನ್ಸಿಯ ಅವಧಿಯು ಮಾರ್ಚ್ ತಿಂಗಳಿಗೆ ಕೊನೆಗೊಂಡಿದ್ದು ಆಗಿನಿಂದಲೂ ಸಿಬ್ಬಂದಿಗಳಿಗೆ ವೇತನ ನೀಡಿಲ್ಲ, ಏಜೆನ್ಸಿಯ ಗುತ್ತಿಗೆ ಅವಧಿಯನ್ನು ನವೀಕರಿಸಿಲ್ಲ, ಹೊಸದಾಗಿ ಟೆಂಡರ್ ಕೂಡ ಕರೆಯಲಿಲ್ಲ ಹೀಗಾಗಿ ಕಾರ್ಮಿಕರು ವೇತನವಿಲ್ಲದೆ ದುಡಿಯುವಂತಾಗಿದೆ ಎಂದು ತಿಳಿಸಿದರು.

ತಿಂಗಳ ಭತ್ಯೆ 7,400 ರೂ.ನಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿದ್ದು ಶೇಕಡ 50ರಷ್ಟು ವೇತನ ಹೆಚ್ಚಿಸಬೇಕೆಂದು, ನೌಕರರಿಗೆ ವೇತನ ಹೆಚ್ಚಿಸುವ ಬಗ್ಗೆ 2014 ರಿಂದ 2015ರ ತುಟ್ಟಿಭತ್ಯೆ ಬಾಕಿ ಮತ್ತು ಬೋನಸ್ ಮತ್ತು ಮಾಹೆ ಏಪ್ರಿಲ್-2016 ರಿಂದ ದುಡಿದ ವೇತನ ಹಾಗೂ ತಂತ್ರಜ್ಞಾನ ಇಲಾಖೆಯ ನೌಕರರಿಗೆ ಸಾರಿಗೆ ಭತ್ಯೆಗೆ ನೀಡಬೇಕೆಂದು ಆಗ್ರಹಿಸಲಾಯಿತು.

ಇನ್ನಿತರೆ ಪ್ರಮುಖ ಬೇಡಿಕೆಗಳಾದ 2015 ರಿಂದ 2016 ಸಾಲಿಗೆ ಬೋನಸ್ ಹಣವನ್ನು ಶೇಕಡ 20ರಷ್ಟು ಮತ್ತು ಎಕ್ಸ್‌ಗ್ರೇಸಿಯಾ ಶೇಕಡಾ 5ರಷ್ಟು ಒಟ್ಟು ಶೇಕಡ 25ರಷ್ಟು ಈ ಕೂಡಲೇ ನೀಡಬೇಕು, ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಈಗಾಗಲೇ ನೀಡಲಾಗುತ್ತಿದ್ದ ಸಾರಿಗೆ ಭತ್ಯೆಯನ್ನು ನಿಲ್ಲಿಸಲ್ಪಟ್ಟ ದಿನಾಂಕದಿಂದ ಮತ್ತೆ ಈ ಕೂಡಲೇ ನೀಡಬೇಕು, ನೌಕರರಿಗೆ ಇ.ಎಸ್.ಐ ಮತ್ತು ಇ.ಪಿ.ಎಫ್ ಕಡಿತ ಮಾಡಿದ ಹಣವನ್ನು ನೌಕರರ ಖಾತೆಗೆ ಈ ಕೂಡಲೇ ಜಮಾ ಮಾಡಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಜಿ.ಕೆ. ಸಿಐಟಿಯು ಮುಖಂಡರಾದ ಜೋಮಿ ಜಾರ್ಜ್ ಮತ್ತಿತರ ಮುಖಂಡರು ಮಾತನಾಡಿದರು.



ಸಮಾನತೆಯ ಮೌಲ್ಯದಿಂದ ದೂರಸರಿಯುತ್ತಿರುವ ಸಮಾಜ!



ಪ್ರೊ. ಟಿ.ಆರ್. ಚಂದ್ರಶೇಖರ್

ಅಸಮ ಸಮಾಜದಲ್ಲಿ, ಜಾತಿ ತಾರತಮ್ಯಗಳಿರುವ ಸ್ಥಿತಿಯಲ್ಲಿ 'ಸಬ್ ಕ ಸಾತ್, ಸಬ್ ಕ ವಿಕಾಸ್' ಅನ್ನುವುದು ಕೇವಲ ಉಳ್ಳವರನ್ನು ಮಾತ್ರ ಒಳಗೊಳ್ಳಬಹುದು. ಅಸಮಾನತೆಯ ಸಮಾಜದಲ್ಲಿ ಸಮಾನಾವಕಾಶಗಳು ಅನ್ನುವುದು ಕೇವಲ ಒಂದು ಭ್ರಮೆ. ಸಮಾನತೆ ಅನ್ನುವುದು ಕೇವಲ ಮಾನಸಿಕವಾದ ಅಥವಾ ಮಾನವೀಯತೆಯ ಸಂಗತಿ ಮಾತ್ರವಲ್ಲ. ಅದು ಆರ್ಥಿಕ ಸಂಗತಿ. ಇದು ಅಭಿವೃದ್ಧಿಯ ಸಂಗತಿ. ಇದು ಜನರ ಬದುಕಿನ ಸಂಗತಿ.

ಇಂದು ವಿದೇಶಿ ಬಂಡವಾಳ, ಸ್ಟಾರ್ಟ್ ಅಪ್ ಇಂಡಿಯಾ, ಸ್ಟಾಂಡ್ ಅಪ್ ಇಂಡಿಯಾ, ಅಖಂಡತೆ, ದೇಶಪ್ರೇಮ, ಸಬ್ ಕಾ ಸಾತ್-ಸಬ್ ಕಾ ವಿಕಾಸ್, ಪೈಪೋಟಿ, ಶ್ರೇಷ್ಠತೆ, ಪವಿತ್ರ ಮುಂತಾದ ಘೋಷಣೆಗಳ ಜಗತ್ತಿನಲ್ಲಿ ನಾಡು ಬದುಕುತ್ತಿದೆ. ಜನರ ಬದುಕಿನ ಸಮೃದ್ಧತೆಗೆ ಪ್ರತಿಯಾಗಿ ಆರ್ಥಿಕತೆಯ ಸಮೃದ್ಧತೆಯ ಬಗ್ಗೆ ನಾಡು ತಹತಹಿಸುತ್ತಿದೆ. 'ದೇಶ ಮೊದಲು' ಎಂಬುದು ಇಂದು ಮಂತ್ರದ ಸ್ವರೂಪ ಪಡೆಯುತ್ತಿದೆ. ರೈತರು ಮೊದಲು, ಬಡವರು ಮೊದಲು, ಪರಿಶಿಷ್ಟರು ಮೊದಲು, ಮಹಿಳೆಯರು ಮೊದಲು ಮುಂತಾದ ಸಂಗತಿಗಳಿಗೆ ಇಂದು ಅವಕಾಶವಿಲ್ಲದಾಗಿದೆ. ಆಹಾರ ಭದ್ರತೆ ಅನ್ನುವುದನ್ನು ಉಚ್ಚರಿಸಲು ಆಳುವ ಪಕ್ಷಗಳು ಸಿದ್ಧವಿಲ್ಲ.

ಅಸಮ ಸಮಾಜದಲ್ಲಿ, ಜಾತಿ ತಾರತಮ್ಯಗಳಿರುವ ಸ್ಥಿತಿಯಲ್ಲಿ 'ಸಬ್ ಕ ಸಾತ್, ಸಬ್ ಕ ವಿಕಾಸ್' ಅನ್ನುವುದು ಕೇವಲ ಉಳ್ಳವರನ್ನು ಮಾತ್ರ ಒಳಗೊಳ್ಳಬಹುದೇ ವಿನಾ ಉಳಿದವರನ್ನು, ವಂಚಿತರನ್ನು, ಅಂಚಿನಲ್ಲಿರುವವರನ್ನು, ಮಹಿಳೆಯರನ್ನು ಒಳಗೊಳ್ಳುವುದು ಕಷ್ಟಸಾಧ್ಯ. ವಿಶ್ವಾದ್ಯಂತ ಒಪ್ಪಿಕೊಂಡಿರುವ ನಿಯಮವೆಂದರೆ ಸಮಾಜದಲ್ಲಿ ಲಾಗಾಯ್ತಿನಿಂದ ಅಸಮಾನತೆಯು ಹರಿದುಕೊಂಡು ಬರುತ್ತಿದ್ದರೆ ಅಲ್ಲಿ ಅಭಿವೃದ್ಧಿ ನೀತಿಗಳು ಸಮಾನತೆಯನ್ನು ಆಧರಿಸಿದ್ದರೆ ಅಲ್ಲಿ ಅಸಮಾನತೆಯು ಉಲ್ಬಣಗೊಳ್ಳುತ್ತದೆ ವಿನಾ ಅದು ಕಡಿಮೆಯಾಗುವುದಿಲ್ಲ. ಅಸಮಾನತೆಯ ಸಮಾಜದಲ್ಲಿ ಸಮಾನಾವಕಾಶಗಳು ಅನ್ನುವುದು ಕೇವಲ ಒಂದು ಭ್ರಮೆ.

ಇಂದಿನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳಾ ದೃಷ್ಟಿಕೋನ ಕಂಡು ಬರುವುದಿಲ್ಲ. ಸಂಪ್ರದಾಯದ ಮುಂದೆ ಮತ್ತೆಲ್ಲವೂ ಎರಡನೆಯ ಸಂಗತಿಯಾಗಿ ಬಿಟ್ಟಿದೆ. ಸಂವಿಧಾನವೂ ಇಂದು ಮುಖ್ಯವಾಗುತ್ತಿಲ್ಲ. ಮಹಿಳೆಯರಿಗೆ ದೇವಾಲಯ ಪ್ರವೇಶವನ್ನು ನಿಷೇಧಿಸುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ. ಇಂದಿಗೂ ದಲಿತ ಮಹಿಳೆಯರಿಗೆ ಊರೊಳಗಿನ ಬಾವಿಯಲ್ಲಿ ನೀರನ್ನು ಸೇದಲು ಉನ್ನತ ವರ್ಗದ ಜನರು ಕೆಲವು ಗ್ರಾಮಗಳಲ್ಲಿ ಬಿಡುತ್ತಿಲ್ಲ. ಈ ವಿಷಯವನ್ನು ಕುರಿತಂತೆ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು 1927ರಲ್ಲಿ ನಡೆಸಿದ ಮಹಾಡ್ ಚಳುವಳಿಯ ನೆನಪು ಮಾಡಿಕೊಳ್ಳಬಹುದು. ಅವರು ನಡೆಸಿದ ಚಳುವಳಿಯ ನಂತರ ಆ ಊರಿನ ಉನ್ನತ ವರ್ಗದ ಜನರು ಕೆರೆಗೆ ಮೈಲಿಗೆಯಾಗಿದೆ ಎಂದು ಅದನ್ನು ಶುದ್ಧೀಕರಿಸಲಾಯಿತು. ಈಗಲೂ ಶುದ್ಧೀಕರಣದ ಮಾತು ಕೇಳಿ ಬರುತ್ತಿದೆ. ಕೆಲವು ನದಿಗಳ ನೀರು ಪವಿತ್ರ ಎಂದು ಅದರ ನೀರನ್ನು ಮಾರಾಟ ಮಾಡಲಾಗುತ್ತಿದೆ.

ಬಡವರಿಗೆ ಕೆಲವು ಹೋಟೇಲುಗಳಲ್ಲಿ ತಿನಿಸುಗಳನ್ನು ನೀಡಲು ನಿರಾಕರಿಸಲಾಗುತ್ತಿದೆ. ಬಡವರು ಇಂದು ನ್ಯೂಯಿಸೆನ್ಸ್ ಆಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಬಡವರು, ಸಮಾಜದ ಅಂಚಿನಲ್ಲಿರುವವರು ಹೆಚ್ಚಾಗಿ ಹೋಗುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮಕ್ಕಳ ಸಂಖ್ಯೆಯ ಕೊರತೆ ಹೆಸರಿನಲ್ಲಿ ಮುಚ್ಚಲಾಗುತ್ತಿದೆ. ಖಾಸಗಿ ಶಾಲೆಗಳ ಸಂಖ್ಯೆಯ ಜೊತೆಯಲ್ಲಿ ಉನ್ನತ ಶಿಕ್ಷಣದ ಸಂಸ್ಥೆಗಳು, ಖಾಸಗಿ ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಖಾಸಗಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವು ಉತ್ತಮವಾಗಿದೆ ಎಂದು ಸುಳ್ಳು ಸುಳ್ಳೇ ಸುದ್ದಿ ಹಬ್ಬಿಸಿ ಸರ್ಕಾರವೇ ಕಾನೂನಿನ ಮೂಲಕ ಬಡವರ ಮಕ್ಕಳು ಅಲ್ಲಿಗೆ ಸೇರುವಂತೆ ಕುಮ್ಮಕ್ಕು ನೀಡಲಾಗುತ್ತಿದೆ. ಈ ನೀತಿಯನ್ನು ವೃತ್ತಿಪರ ಶಿಕ್ಷಣಕ್ಕೂ ಅನ್ವಯಿಸುವಂತೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಒತ್ತಾಯ ಮಾಡುತ್ತಿವೆ. ಶಿಕ್ಷಣದ ಹಕ್ಕಿನ ಶಾಸನವನ್ನು ಖಾಸಗಿ ವಲಯವು ತನ್ನ ಹಣಮಾಡುವ ದಂದೆಗೆ ಬಳಸಿಕೊಳ್ಳುವ ಬಗ್ಗೆ ತಂತ್ರವನ್ನು ರೂಪಿಸುತ್ತಿದೆ.

ನಕಾರಾತ್ಮಕ ಮಾತುಗಳು

ಅಸಮಾನತೆಯು ಕೆಟ್ಟದ್ದು. ಆದರೆ ಅದನ್ನು ಸಮರ್ಥಿಸುವುದು ಇದೆಯಲ್ಲ ಅದು ಅತ್ಯಂತ ಕೆಟ್ಟದ್ದು. ಸಮಾನತೆಯಿಂದ ದೂರ ಸರಿಯುವುದು ಎಂದರೆ ಪರಿಶಿಷ್ಟರಿಗೆ ದೊರೆಯುತ್ತಿರುವ, ಅದೆಷ್ಟೇ ಕನಿಷ್ಠ ಮಟ್ಟದಲ್ಲಿರಲಿ, ಸಹಾಯಧನದ ಬಗ್ಗೆ, ಮೀಸಲಾತಿಯ ಬಗ್ಗೆ, ಸಂವಿಧಾನಾತ್ಮಕ ಅನುಕೂಲಗಳ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ನಕಾರಾತ್ಮಕವಾಗಿ ಮಾತನಾಡುವುದು ಎಂದೇ ಅರ್ಥ. ದಲಿತರಿಗೆ ನೀಡುತ್ತಿರುವ ಮೀಸಲಾತಿಯಿಂದ ಉಳ್ಳವರು ಅಭಿವೃದ್ಧಿ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಆಧಾರರಹಿತವಾಗಿ ಆರೋಪಿಸಲಾಗುತ್ತಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಮೀಸಲಾತಿಯು ಶೇ.50 ಮೀರಬಾರದು. ಅಂದರೆ ಉಳ್ಳವರಿಗೆ ಉಳಿದ ಶೇ50ರಷ್ಟು ತೆರೆದಿದೆ. ಶತಮಾನ, ಶತಮಾನಗಳ ಕಾಲ ಉಳ್ಳವರು ಶೇ.100ರಷ್ಟು ಅವಕಾಶಗಳನ್ನು ಗುತ್ತಿಗೆ ಹಿಡಿದುಕೊಂಡಿದ್ದರು. ಈಗ ಕೇವಲ 67 ವರ್ಷಗಳ ಕಾಲ ಆಚರಣೆಯಲ್ಲಿರುವ ಮೀಸಲಾತಿಯ ಬಗ್ಗೆ, ಅದರ ಇತಿಮಿತಿಗಳ ಬಗ್ಗೆ ಚಿಂತಿಸದೆ ಅದರ ವಿರುದ್ಧ ತಂತ್ರಗಳನ್ನು ಹೂಡಲಾಗುತ್ತಿದೆ.

ಅಸ್ಪೃಶ್ಯತೆ, ತಾರತಮ್ಯ, ಅಸಮಾನತೆ, ಶ್ರೇಷ್ಠ-ಕನಿಷ್ಠ ಎಂಬ ನಂಬಿಕೆ ಮುಂತಾದ ನಕಾರಾತ್ಮಕ ನಡವಳಿಕೆಯಿಂದ ದಲಿತರಿಗೆ ಅಪಾರ ನಷ್ಟವಾಗಿದೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ(ಸಮಾಜದಲ್ಲಿ) ಅಸ್ಪೃಶ್ಯತೆ ಇಲ್ಲದಿದ್ದಿದ್ದರೆ ಪ.ಜಾ. ಸಾಕ್ಷರತೆ ಪ್ರಮಾಣ ಉನ್ನತ ವರ್ಗದ ಸಾಕ್ಷರತೆಗೆ ಸಮನಾಗಿರಬೇಕಾಗಿತ್ತು. ಕರ್ನಾಟಕದಲ್ಲಿ ಪ.ಜಾ. ಸಾಕ್ಷರತೆಯ ಪ್ರಮಾಣ 2011ರಲ್ಲಿ ಶೇ.65.32. ದಲಿತೇತರರ, ಅಂದರೆ ಶಿಷ್ಟರ(ಉಳ್ಳವರ) ಸಾಕ್ಷರತಾ ಪ್ರಮಾಣ ಶೇ.78.56. ಇಲ್ಲಿ ದಲಿತರು ಮತ್ತು ದಲಿತೇತರರ ನಡುವಿನ ಸಾಕ್ಷರತಾ ಅಂತರ ಶೇ. 13.24. ಅಂಶಗಳು. ಇದು ಅಸ್ಪೃಶ್ಯತೆಯಿಂದ ಉಂಟಾಗಿರುವ ಅಸಮಾನತೆ. ಇದು ಕೇವಲ ದಲಿತರಿಗೆ ಉಂಟಾಗಿರುವ ನಷ್ಟ ಮಾತ್ರವಲ್ಲ. ಇದು ರಾಷ್ಟ್ರೀಯ ನಷ್ಟ. ಅಸ್ಪೃಶ್ಯತೆ ಅನ್ನುವುದು ಇಲ್ಲದಿದ್ದಿದ್ದರೆ ದಲಿತರ(ಪ.ಜಾ) ಸಾಕ್ಷರತಾ ಪ್ರಮಾಣ ದಲಿತೇತರರ ಸಾಕ್ಷರತಾ ಪ್ರಮಾಣದಷ್ಟೇ ಇರಬೇಕಾಗಿತ್ತು.

ನಮ್ಮ ರಾಜ್ಯದಲ್ಲಿ ಉಳ್ಳವರಿಗೆ ಸಂಬಂಧಿಸಿದಂತೆ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ 2011ರಲ್ಲಿ ಶೇ 20.16. ಆದರೆ ಪ.ಜಾ ಮತ್ತು ಪ.ಪಂ. ಗಳಲ್ಲಿನ ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ.41.50. ಇಲ್ಲಿನ ಅಸಮಾನತೆಯ ಪ್ರಮಾಣ ಶೇ. 21.34 ಅಂಶಗಳು. ಒಂದು ವೇಳೆ ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆ-ಜಾತಿ ತಾರತಮ್ಯಗಳಿಲ್ಲದಿದ್ದರೆ ಪ.ಜಾ ಮತ್ತು ಪ.ಪಂ.ಗಳಲ್ಲಿನ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ20.16 ರಷ್ಟಿರಬೇಕಾಗಿತ್ತು. ಸಮಾಜವು ದಲಿತರ ಮೇಲೆ ಹೆಚ್ಚಿನ ದುಡಿಮೆಯ ಭಾರವನ್ನು ಹೇರಿದೆ.

ಆಸ್ತಿ ಮಾಲಿಕತ್ವದಲ್ಲಿ ದಲಿತರಿಗೆ ಅನ್ಯಾಯ

ಅನಾದಿ ಕಾಲದಿಂದ ಅಕ್ಷರ ಮತ್ತು ಆಸ್ತಿಗಳನ್ನು ದಲಿತರಿಗೆ ನಿಷೇಧಿಸಲಾಗಿತ್ತು. ಅಕ್ಷರವೂ ಸಂಪತ್ತೇ ಆಗಿದೆ. ಹೀಗೆ ಅಕ್ಷರ ಮತ್ತು ಆಸ್ತಿಯಿಂದ ವಂಚಿತರಾದ ದಲಿತರಿಗೆ ಅವುಗಳನ್ನು ಪಡೆಯುವ ಹಕ್ಕು ಬ್ರಿಟಿಷರ ವಸಾಹತುಶಾಹಿ ಕಾಲದಲ್ಲಿ ಪ್ರಾಪ್ತವಾಯಿತು. ಇದರಿಂದ ದಲಿತರಿಗೆ ಆಸ್ತಿ ದೊರೆಯಿತೆ, ದಲಿತರೆಲ್ಲರೂ ಅಕ್ಷರಸ್ಥರಾಗಿ ಬಿಟ್ಟರೆ ಅಂದರೆ ಉತ್ತರ ಖಚಿತವಾಗಿ ಇಲ್ಲ. ಆದರೆ ಅವುಗಳನ್ನು ಹೊಂದುವ ಹಕ್ಕು ಅವರಿಗೆ ಪ್ರಾಪ್ತವಾಯಿತು. ಸ್ವಾತಂತ್ರ್ಯಾ ನಂತರ ಶಿಕ್ಷಣ, ವಿದ್ಯಾರ್ಥಿ ವೇತನಗಳು, ವಿದ್ಯಾರ್ಥಿ ನಿಲಯಗಳು, ಪ್ರವೇಶದಲ್ಲಿ ಮೀಸಲಾತಿ -- ಹೀಗೆ ಅನೇಕ ಅವಕಾಶಗಳನ್ನು ಸಾಮಾಜಿಕ ನ್ಯಾಯದ ಆಧಾರದಲ್ಲಿ ದಲಿತರಿಗೆ ಒದಗಿಸಲಾಯಿತು. ಇಷ್ಟಾದರೂ 2011ರಲ್ಲಿ ಕರ್ನಾಟಕದಲ್ಲಿ ಉಳ್ಳವರಿಗೆ(ಶಿಷ್ಟ) ಸಂಬಂಧಿಸಿದಂತೆ ಆಸ್ತಿಯನ್ನು ಹೊಂದಿರುವ ಪ್ರಮಾಣ ಶೇ 23.60. ಆದರೆ ಪರಿಶಿಷ್ಟರಲ್ಲಿ ಆಸ್ತಿ ಹೊಂದಿರುವವರ ಪ್ರಮಾಣ ಶೇ 18.69. ಇಲ್ಲಿ ಅಂತರ ಶೇ.4.91. ಇಲ್ಲಿನ ಆಸ್ತಿ ಅಸಮಾನತೆಯ ಮೂಲ ಸಮಾಜದಲ್ಲಿ ಆಚರಣೆಯಲ್ಲಿರುವ ತಾರತಮ್ಯದಲ್ಲಿದೆ.

ಲಿಂಗ ತಾರತಮ್ಯದಿಂದ ಮಹಿಳೆಯರಿಗೆ ಉಂಟಾಗಿರುವ ಹಾನಿ

ನಮ್ಮ ಸಮಾಜದ ಸಂದರ್ಭದಲ್ಲಿ ಲಿಂಗ ತಾರತಮ್ಯ ಅನ್ನುವುದು ಒಂದು ಶ್ರೇಣೀಕೃತ ವ್ಯವಸ್ಥೆಯಾಗಿದೆ. ಅದಕ್ಕೆ ಅನೇಕ ಸಾಮಾಜಿಕ ಮುಖಗಳಿವೆ. ನಮ್ಮ ಸಮಾಜದಲ್ಲಿ ಎಲ್ಲ ಮಹಿಳೆಯರು ಲಿಂಗ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಇದು ರಾಜ್ಯವಾಗಿ ಕರ್ನಾಟಕಕ್ಕೆ, ರಾಷ್ಟ್ರವಾಗಿ ಭಾರತಕ್ಕೆ ಮೀಸಲಾದ ಸಂಗತಿಯೇನಲ್ಲ. ಇದೊಂದು ಸಾರ್ವತ್ರಿಕ ಸಮಸ್ಯೆ. ಆದರೆ ನಮ್ಮ ಸಮಾಜದ ಸಂದರ್ಭದಲ್ಲಿ ಅದು ಬಹುಮುಖಿ ಸಮಸ್ಯೆಯಾಗಿ ಮಹಿಳೆಯರನ್ನು ಕಾಡುತ್ತಿದೆ. ತಾರತಮ್ಯದ ಪ್ರಮಾಣ ಸಮಾಜದ ಎಲ್ಲ ವರ್ಗದ ಮಹಿಳೆಯರಿಗೂ ಸಮಾನವಾಗಿಲ್ಲ. ಉದಾಹರಣೆಗೆ ಸಮಾಜದಲ್ಲಿ ಉನ್ನತ ವರ್ಗದ ಮಹಿಳೆಯರು ಮಹಿಳೆಯರು ಅನ್ನುವ ಕಾರಣಕ್ಕೆ ಲಿಂಗ ತಾರತಮ್ಯ ಎದುರಿಸುತ್ತಿದ್ದಾರೆ. ಕೆಳವರ್ಗದ ಮಹಿಳೆಯರು ಮಹಿಳೆಯರು ಅನ್ನುವ ಕಾರಣಕ್ಕೆ ಲಿಂಗ ತಾರತಮ್ಯ ಮತ್ತು ಬಡವರು, ದುಡಿಮೆಗಾರರು, ಅನಕ್ಷರಸ್ಥರು ಅನ್ನುವ ಕಾರಣಕ್ಕೆ ಆರ್ಥಿಕ ಶೋಷಣೆಯನ್ನು ಎದುರಿಸುತ್ತಿದ್ದಾರೆ. ದಲಿತ ಮಹಿಳೆಯರು ಮಹಿಳೆಯರು ಅನ್ನುವ ಕಾರಣಕ್ಕೆ ಲಿಂಗ ತಾರತಮ್ಯವನ್ನು, ಬಡವರು-ದುಡಿಮೆಗಾರರು ಅನ್ನುವ ಕಾರಣಕ್ಕೆ ಆರ್ಥಿಕ ಶೋಷಣೆಯನ್ನು ಮತ್ತು ದಲಿತರು ಅನ್ನುವ ಕಾರಣಕ್ಕೆ ಸಾಮಾಜಿಕ ಪ್ರತ್ಯೇಕೀಕರಣವನ್ನು ಅನುಭವಿಸಬೇಕಾಗಿದೆ.

ಇಂತಹ ಸಾಮಾಜಿಕ ಸನ್ನಿವೇಶದಲ್ಲಿ ನೀತಿಗಳು ಸಮಾನಾವಕಾಶವನ್ನು ಒದಗಿಸುವ ಸ್ವರೂಪದಲ್ಲಿದ್ದರೆ ಅದರಿಂದ ತಾರತಮ್ಯ ಒಂದು ಮಟ್ಟದವರೆಗೆ ಕಡಿಮೆಯಾಗಬಹುದು. ಆದರೆ ಲಿಂಗ ತಾರತಮ್ಯದಲ್ಲಿರುವ ಶ್ರೇಣೀಕರಣವನ್ನು ಅದರಿಂದ ತೊಡೆದು ಹಾಕುವುದು ಸಾಧ್ಯವಿಲ್ಲ.

ಅಭಿವೃದ್ಧಿ ವಿರೋಧಿ ಸಂಗತಿಗಳು

ವಿಶ್ವಾದ್ಯಂತ ಅಧ್ಯಯನಗಳು, ಸಿದ್ಧಾಂತಗಳು ತಾರತಮ್ಯವನ್ನು ಅಭಿವೃದ್ಧಿ-ವಿರೋಧಿ ಸಂಗತಿಯನ್ನಾಗಿ ಪರಿಗಣಿಸಿದ್ದಾರೆ. ಅಭಿವೃದ್ಧಿ ವಿರೋಧಿ ಸಂಗತಿಗಳಲ್ಲಿ ಅಸ್ಪೃಶ್ಯತೆಯು ಪರಮೋಚ್ಚ ಸೂಚಿಯಾಗಿದೆ. ಈ ಎಲ್ಲ ಅಭಿವೃದ್ಧಿ-ವಿರೋಧಿ ಸಂಗತಿಗಳನ್ನು ತಡೆಯ ಬಲ್ಲ ಅಥವಾ ಮೀರಬಲ್ಲ ಸಾಮರ್ಥ್ಯ ಮೀಸಲಾತಿಗಿಲ್ಲ. ಮೀಸಲಾತಿ ಮೂಲಕ ದಲಿತರ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಅಸಾಧ್ಯ. ಏಕೆಂದರೆ ಇಲ್ಲಿ ಎರಡು ಬಗೆಯ ಸಂಗತಿಗಳಿವೆ. ಮೊದಲನೆಯದು ಅಭಿವೃದ್ಧಿಗೆ ಬೆಂಬಲವಾಗಿ ಅನೇಕ ಅನುಕೂಲಗಳನ್ನು ನೀಡುವುದು. ಎರಡನೆಯದಾಗಿ ಅಭಿವೃದ್ಧಿ-ವಿರೋಧಿ ಸಂಗತಿಗಳನ್ನು ತೊಡೆದು ಹಾಕಲು ಪ್ರಯತ್ನಿಸುವುದು. ಉಳ್ಳವರ ಅಭಿವೃದ್ಧಿಗೆ ಬಂಡವಾಳ, ಸಂಪನ್ಮೂಲ, ಭೂಮಿ, ನೀರು, ವಿದ್ಯುತ್ ಮುಂತಾದ ಸಂಗತಿಗಳನ್ನು ಒದಗಿಸಿದರೆ ಸಾಕು. ಏಕೆಂದರೆ ಅವರಿಗೆ ಸ್ವಂತದ್ದು ಅನ್ನುವ ಅನೇಕ ಸಾಮಾಜಿಕ ಅನುಕೂಲಗಳಿರುತ್ತವೆ. ಆದರೆ ದಲಿತರ/ಪರಿಶಿಷ್ಟರ ಅಭಿವೃದ್ಧಿಗೆ ಕೇವಲ ಬೆಂಬಲ ಸಾಕಾಗುವುದಿಲ್ಲ.

ಹಿಂಸೆ-ಕ್ರೌರ್ಯಗಳಿಗೂ ಪರಿಹಾರ ಸಮಾನತೆ

ಯಾವ ಸಮಾಜವು ಸಮಾನತೆ ಮೌಲ್ಯದಿಂದ ದೂರ ಸರಿಯುತ್ತದೆಯೋ ಅಲ್ಲಿ ಕ್ರೌರ್ಯ ಅಧಿಕವಾಗುತ್ತದೆ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ, ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯಗಳಲ್ಲಿ ನಡೆದ ಹಿಂಸೆ, ಅಸಹಿಷ್ಣುತೆ, ಆಕ್ರಮಣಶೀಲತೆ ಮುಂತಾದವು ಅಸಮಾನತೆಯು ಉಲ್ಬಣಗೊಳ್ಳುತ್ತಿರುವುದರ ಸೂಚಿಯಾಗಿವೆ. ಇಂದು ನಮ್ಮ ಸಮಾಜ ಇದನ್ನು ಎದುರಿಸುತ್ತಿದೆ. ಸಮಾನತೆ ಅನ್ನುವುದು ಕೇವಲ ಮಾನಸಿಕವಾದ ಅಥವಾ ಮಾನವೀಯತೆಯ ಸಂಗತಿ ಮಾತ್ರವಲ್ಲ. ಅದು ಆರ್ಥಿಕ ಸಂಗತಿ. ಇದು ಅಭಿವೃದ್ಧಿಯ ಸಂಗತಿ. ಇದು ಜನರ ಬದುಕಿನ ಸಂಗತಿ. ಇಂದು ಜಿಡಿಪಿಯ ಬೆಳವಣಿಗೆಯ ಬಗ್ಗೆ ವ್ಯಸನದಂತೆ ಆಳುವ ವರ್ಗ ಮಾತನಾಡುತ್ತಿದೆ. ಅದಕ್ಕೆ ನೀಡಿದಷ್ಟೇ ಒತ್ತನ್ನು ತಾರತಮ್ಯಗಳ ನಿವಾರಣೆಗೆ ನೀಡುವುದು ಅಗತ್ಯ. ಉತ್ಪಾದನೆ ಎಷ್ಟು ಮುಖ್ಯವೋ ವಿತರಣೆಯೂ ಅಷ್ಟೇ ಮುಖ್ಯ. ಒಂದಾದ ನಂತರ ಒಂದು ಬರುವುದು ಸಲ್ಲ. ಇವೆರಡೂ ಏಕಕಾಲದಲ್ಲಿ ಸಂಭವಿಸಬೇಕು. ಈ ಕಾರಣಕ್ಕೆ ಬಾಬಾ ಸಾಹೇಬ್ ಬಿ. ಆರ್.ಅಂಬೇಡ್ಕರ್ ಅವರು ರಾಜಕೀಯ ಸ್ವಾತಂತ್ರ್ಯ-ಪ್ರಜಾಪ್ರಭುತ್ವಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ-ಪ್ರಜಾಪ್ರಭುತ್ವದ ಬಗ್ಗೆ ಒತ್ತು ನೀಡುವ ಬಗ್ಗೆ ಪ್ರತಿಪಾದಿಸಿದ್ದರು. ಇಂದು ಇದು ತಲೆಕೆಳಗಾಗಿದೆ. ಮತ್ತೆ ಅದನ್ನು ಸರಿಪಡಿಸುವ ಅಗತ್ಯವಿದೆ. ಸಾಮಾಜಿಕ ಸಮಾನತೆ ಅನ್ನುವುದು ಆರ್ಥಿಕ ಮತ್ತು ರಾಜಕೀಯ ಸಂಗತಿಗಳನ್ನು ಒಳಗೊಂಡಿರುತ್ತದೆ. ಈ ಬಗ್ಗೆ ನಾವು ತೀವ್ರವಾಗಿ ಚಿಂತಿಸುವ ಅಗತ್ಯವಿದೆ.

ಇನ್ನಷ್ಟು ಉದಾರ ಎಫ್‌ಡಿಐ: ದೇಶಕ್ಕೆ ಇನ್ನಷ್ಟು ಅನರ್ಥಕಾರಿ



ಈ ಎಲ್ಲಾ ಕ್ರಮಗಳನ್ನು ನವ-ಉದಾರವಾದಿ ಧೋರಣೆಗಳಿಗೆ ಅತ್ಯಂತ ಆಕ್ರಮಣಾತ್ಮಕವಾಗಿ ನೀಡುತ್ತಿರುವ ಒತ್ತು ಮಾತ್ರವಾಗಿಯಷ್ಟೇ ಅಲ್ಲ ಅದರೊಂದಿಗೇ ಅಮೆರಿಕದ ವ್ಯೂಹದಲ್ಲಿ ಕಿರಿಯ ಪಾಲುದಾರನಾಗುವುದರ ಪರಿಣಾಮವಾಗಿ ಉಂಟಾಗುವ ಅನಿವಾರ್ಯತೆಯ ಭಾಗವಾಗಿಯೂ ನೋಡಬೇಕು. ಈಗಿರುವ ಉತ್ಪಾದಕ ಆಸ್ತಿಯನ್ನು ಕೈವಶ ಮಾಡಿಕೊಳ್ಳಲು ವಿದೇಶಿ ಬಂಡವಾಳಕ್ಕೆ ಪ್ರೋತ್ಸಾಹ ನೀಡುವ ಮೂಲಕ ಮತ್ತು ರಕ್ಷಣೆಯಂಥ ದೇಶದ ರಾಷ್ಟ್ರೀಯ ಸಾರ್ವಭೌಮತೆ ಮೇಲೆ ಪರಿಣಾಮ ಬೀರುವಂಥ ಪ್ರಮುಖ ಕ್ಷೇತ್ರಗಳಲ್ಲಿ ರಾಜಿ ಮಾಡಿಕೊಳ್ಳುವ ಮೂಲಕ ಎಫ್‌ಡಿಐ ಆಕರ್ಷಿಸಲು ಮೋದಿ ಸರಕಾರ ಹತಾಶ ಪ್ರಯತ್ನಗಳನ್ನು ಮಾಡುತ್ತಿದೆ. ಈ ಧೋರಣೆಗಳು ಜನತೆ ಮತ್ತು ದೇಶದ ಮೇಲೆ ಅನರ್ಥಕಾರಿ ಪರಿಣಾಮಗಳನ್ನು ಬೀರಲಿವೆ





ಪ್ರಕಾಶ ಕಾರಟ್

ವಿವಿಧ ಕ್ಷೇತ್ರಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಸಂಬಂಧಿಸಿದಂತೆ ನರೇಂದ್ರ ಮೋದಿ ಸರಕಾರ ಇನ್ನೊಂದು ಸುತ್ತಿನ ಭಾರೀ ಉದಾರ ನಿಯಮಾವಳಿಗಳನ್ನು ಘೋಷಿಸಿದೆ. ಮೋದಿ ಸರಕಾರದ ಕಳೆದ ಎರಡು ವರ್ಷಗಳ ಆಡಳಿತ ಅವಧಿಯಲ್ಲಿ ಸತತವಾಗಿ ಉದಾರವಾದ ಎಫ್‌ಡಿಐ ವಿಧಿ-ವಿಧಾನಗಳನ್ನು ಸತತವಾಗಿ ಉದಾರಗೊಳಿಸಿಕೊಂಡು ಬರಲಾಗಿದೆ. ರಕ್ಷಣೆ, ಚಿಲ್ಲರೆ ಆಹಾರ ವ್ಯಾಪಾರ, ನಾಗರಿಕ ವಿಮಾನಯಾನ, ಕೇಬಲ್ ಜಾಲಗಳು, ಡಿಟಿಎಚ್ ಮತ್ತಿತರ ಟೆಲಿಕಾಂ ಸೇವೆಗಳು ಮತ್ತು ಇತರ ಕೆಲವು ಕ್ಷೇತ್ರಗಳಲ್ಲಿ ಎಫ್‌ಡಿಐ ಹೂಡಿಕೆಗಳನ್ನು ನೂರಕ್ಕೆ ನೂರರಷ್ಟು ಸಡಿಲಗೊಳಿಸಿರುವುದು ಈ ಸುತ್ತಿನಲ್ಲಿ ಸೇರಿವೆ. ಭಾರತದ ಈಗ ಅಸ್ತಿತ್ವದಲ್ಲಿರುವ ಔಷಧ ತಯಾರಿಕೆ ಕಂಪೆನಿಗಳನ್ನು ವಿದೇಶೀಯರು ವಹಿಸಿಕೊಳ್ಳಲು ಅನುಕೂಲವಾಗುವಂತೆ ಯಾವುದೇ ಅಡೆ-ತಡೆಯಿಲ್ಲದೆ(ಆಟೋಮ್ಯಾಟಿಕ್ ರೂಟ್) 74 ಶೇಕಡಾ ಎಫ್‌ಡಿಐ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಖಾಸಗಿ ಭದ್ರತಾ ಸಂಸ್ಥೆಗಳಲ್ಲಿನ ಎಫ್‌ಡಿಐ ಹೂಡಿಕೆ ಪ್ರಮಾಣವನ್ನು ಶೇಕಡಾ 49ರಿಂದ 74ಕ್ಕೆ ಏರಿಸಲಾಗಿದೆ. ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಸ್ಥಳೀಯವಾಗಿ ಖರೀದಿಸಬೇಕು ಎಂಬ ನಿಯಮವನ್ನು ಸಡಿಲಿಸಲಾಗಿದೆ.

ಇವಲ್ಲದೆ, ಪಶು ಸಂಗೋಪನೆ, ಮೀನು ಸಾಕಾಣಿಕೆ,ಜಲಕೃಷಿ, ಜೇನು ಸಾಕಾಣಿಕೆ ಕ್ಷೇತ್ರಗಳಲ್ಲಿ 'ನಿಯಂತ್ರಿತ ಷರತ್ತುಗಳ' ಆಟೋಮ್ಯಾಟಿಕ್ ರೂಟ್ ಮೂಲಕ ಶೇಕಡಾ ನೂರು ಎಫ್‌ಡಿಐಗೆ ಇದುವರೆಗೆ ಅವಕಾಶ ಇದ್ದು ಇದೀಗ ನಿಯಂತ್ರಿತ ಷರತ್ತುಗಳನ್ನು ತೆಗೆದು ಹಾಕಲಾಗಿದೆ. ಆ ಸಂಬಂಧ ತಿದ್ದುಪಡಿಗಳನ್ನು ಮಾಡಲಾಗಿದೆ.

ಕಿರಿಯ ಪಾಲುದಾರನಾಗುವ ಪರಿಣಾಮ

ಈ ಎಲ್ಲಾ ಕ್ರಮಗಳನ್ನು ನವ-ಉದಾರವಾದಿ ಧೋರಣೆಗಳಿಗೆ ಅತ್ಯಂತ ಆಕ್ರಮಣಾತ್ಮಕವಾಗಿ ನೀಡುತ್ತಿರುವ ಒತ್ತು ಮಾತ್ರವಾಗಿಯಷ್ಟೇ ಅಲ್ಲ ಅದರೊಂದಿಗೇ ಅಮೆರಿಕದ ವ್ಯೂಹದಲ್ಲಿ ಕಿರಿಯ ಪಾಲುದಾರನಾಗುವುದರಿಂದಾಗಿ ಉಂಟಾಗುವ ಅನಿವಾರ್ಯತೆಯ ಭಾಗವಾಗಿಯೂ ನೋಡಬೇಕು.

ಇದು, ರಕ್ಷಣಾ ಕ್ಷೇತ್ರದಲ್ಲಿನ ಎಫ್‌ಡಿಐ ಹೂಡಿಕೆ ನಿಯಮಗಳನ್ನು ಮೋದಿ ಸರಕಾರ ಇನ್ನಷ್ಟು ಸಡಿಲಗೊಳಿಸಿದ ರೀತಿಯಿಂದಲೇ ಸುಸ್ಪಷ್ಟಗೊಳ್ಳುತ್ತದೆ. ಈ ಮುನ್ನ ಶೇಕಡಾ 49ಕ್ಕಿಂತ ಹೆಚ್ಚಿನ ಎಫ್‌ಡಿಐಗೆ ಸರಕಾರ ಪ್ರತಿ ವಿಷಯವನ್ನು ಆಧರಿಸಿ (ಕೇಸ್ ಟು ಕೇಸ್ ಬೇಸಿಸ್) ಅನುಮತಿ ನೀಡುತ್ತಿತ್ತು. ಅದರಲ್ಲೂ ಅಂಥ ಹೂಡಿಕೆಯು ಅತ್ಯಾಧುನಿಕ ತಂತ್ರಜ್ಞಾನವನ್ನು ಗಳಿಸಿಕೊಳ್ಳಲು ಅನುಕೂಲ ಆಗುತ್ತದೆ ಎಂಬ ಆಶಯದ ಆಧಾರದಲ್ಲಿ; ಆದರೆ ಈಗ ಆ ನಿಯಮವನ್ನೇ ಬದಲಾಯಿಸಲಾಗಿದೆ. ಅಂದರೆ ಅತ್ಯಾಧುನಿಕ ತಂತ್ರಜ್ಞಾನ ಗಳಿಕೆಯ ಷರತ್ತನ್ನು ಕೈಬಿಡಲಾಗಿದೆ. ರಕ್ಷಣಾ ಕ್ಷೇತ್ರದಲ್ಲಿ ಎಫ್‌ಡಿಐ ನಿಯಮಗಳನ್ನು ಎರಡು ವರ್ಷಗಳ ಹಿಂದೆಯೇ ಸಡಿಲಿಸಲಾಗಿದ್ದರೂ ವಿದೇಶಿ ಕಂಪೆನಿಗಳಿಂದೇನೂ ಹೂಡಿಕೆಗಳು ಬಂದಿರಲಿಲ್ಲ. ಇದೀಗ ಮೋದಿ ಸರಕಾರ ಲಾಕ್‌ಹೀಡ್ ಮಾರ್ಟಿನ್‌ನಂಥ ಅಮೆರಿಕದ ಶಸ್ತ್ರಾಸ್ತ್ರ ಕಂಪೆನಿಗಳನ್ನು ಆಕರ್ಷಿಸಲು ಉತ್ಸುಕವಾಗಿದೆ. ಆದರೆ ಇಲ್ಲಿ ನಿಜವಾಗಿ ಇರುವ ವಿಷಯ ಹಣ ಹೂಡಿಕೆ ಅಲ್ಲ, ಅದರ ಬದಲು ಭಾರತದಲ್ಲೇ ನಿರ್ಮಾಣ ಮಾಡಲು ತಂತ್ರಜ್ಞಾನವನ್ನು ಬಳಸಿಕೊಳ್ಳಲು ಇರುವ ವಿಷಯವೇ ಮುಖ್ಯವಾದುದು. ಯಾವುದೇ ಬಹುರಾಷ್ಟ್ರೀಯ ಕಂಪೆನಿಯು ತನ್ನ ತಂತ್ರಜ್ಞಾನವನ್ನು ಬಿಟ್ಟುಕೊಡುವುದಿಲ್ಲ. ಒಂದು ವೇಳೆ ಅಂಥ ತಂತ್ರಜ್ಞಾನವನ್ನು ಭಾರತದಲ್ಲಿ ಬಳಸಿದರೆ ಅದರ ಮೇಲಿನ ತನ್ನ ನಿಯಂತ್ರಣ ಕಳೆದುಹೋಗುವುದೇನೋ ಎಂಬ ಭೀತಿ ಅವುಗಳದ್ದಾಗಿದೆ.

> **ಎಫ್‌ಡಿಐ ನಿಯಮಗಳ ಪ್ರಸಕ್ತ ಉದಾರೀಕರಣವು ಉತ್ಪಾದನೆ ಮತ್ತು ಉತ್ಪಾದಕ ಕ್ಷೇತ್ರಗಳಲ್ಲಿ ಇದುವರೆಗೆ ಹೇಳಿಕೊಳ್ಳುವಂಥ ವಿದೇಶಿ ಬಂಡವಾಳ ಹೂಡಿಕೆ ಆಗಿಲ್ಲ ಎಂಬುದನ್ನು ಒಪ್ಪಿಕೊಂಡಿರುವುದರ ಸೂಚನೆಯಾಗಿದೆ.**

ಇಸ್ರೇಲ್‌ನಂತೆ ಭಾರತವೂ ಒಂದು ಪೂರ್ಣ ಪ್ರಮಾಣದ ಮಿತ್ರ ಹಾಗೂ ವಿಶ್ವಾಸಾರ್ಹ ಪಾಲುದಾರನಾಗದೆ ಅಂಥ ಯಾವುದೇ ಜಂಟಿ ಉತ್ಪಾದನೆ ಅಥವಾ ತಂತ್ರಜ್ಞಾನ ಅಭಿವೃದ್ಧಿಗೆ ಅವಕಾಶ ಇರುವುದಿಲ್ಲ.

ಹೀಗಾಗಿ, ಇಸ್ರೇಲ್‌ನಂತೆ ಭಾರತವು ಪೂರ್ಣ ಅಧೀನ ಮಿತ್ರನಾಗುವವರೆಗೆ ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡುವ ಈ ಆಹ್ವಾನ ಕೆಲಸ ಮಾಡಲಾರದು. ಭಾರತವು ಜಗತ್ತಿನಲ್ಲೇ ಅತಿ ದೊಡ್ಡ ಶಸ್ತ್ರಾಸ್ತ್ರ ಆಮದು ದೇಶವಾಗಿದ್ದು, ದುಬಾರಿ ಶಸ್ತ್ರಾಸ್ತ್ರಗಳ ಆಮದಿಗೆ ವಿದೇಶಗಳನ್ನು ಅವಲಂಬಿಸುವುದನ್ನು ಭಾರತ ನಿಲ್ಲಿಸಬೇಕಾಗಿದೆ. ಮುಂದುವರಿದ ಮಿಲಿಟರಿ ತಂತ್ರಜ್ಞಾನದಲ್ಲಿ ಮತ್ತು ರಕ್ಷಣಾ ಉತ್ಪಾದನೆ ಸಾಮರ್ಥ್ಯದಲ್ಲಿ ಸ್ವಾವಲಂಬನೆ ಸಾಧಿಸುವ ಮೂಲಕ ಮಾತ್ರವೇ ಇದನ್ನು ಸಾಧಿಸಬಹುದಾಗಿದೆ. ಬಾಹ್ಯಾಕಾಶ ಮತ್ತು ಪರಮಾಣು ತಂತ್ರಜ್ಞಾನವನ್ನು ಭಾರತ ಅಭಿವೃದ್ಧಿಪಡಿಸಬಹುದಾದರೆ ಮಿಲಿಟರಿ ತಂತ್ರಜ್ಞಾನವನ್ನೂ ಅಭಿವೃದ್ಧಿಪಡಿಸದಿರಲು ಕಾರಣ ಇರಲು ಸಾಧ್ಯವೇ ಇಲ್ಲ.

ಎಫ್‌ಡಿಐನ ನಿಯಮಗಳಲ್ಲಿನ ಇತ್ತೀಚಿನ ಈ ಬದಲಾವಣೆಗಳನ್ನು ನೋಡಿದರೆ ಭಾರತ ಅತ್ಯಂತ ಮುಂದುವರಿದ ತಂತ್ರಜ್ಞಾನದ ಬದಲಿಗೆ ವಿದೇಶಿ ಶಸ್ತ್ರಾಸ್ತ್ರ ಕಂಪೆನಿಗಳನ್ನು ಅವು ಇಲ್ಲಿ ತಮ್ಮ ಉದ್ದಿಮೆಗಳನ್ನು ಸ್ಥಾಪಿಸಲು ಆಹ್ವಾನಿಸುವ ಭರದಲ್ಲಿ ಎರಡನೇ ಉತ್ತಮ ತಂತ್ರಜ್ಞಾನಕ್ಕೆ ತೃಪ್ತಿಪಟ್ಟುಕೊಳ್ಳಲು ಈಗ ಸಿದ್ಧವಾಗುತ್ತಿರುವಂತೆ ಕಾಣುತ್ತದೆ.

ರಕ್ಷಣಾ ಉತ್ಪಾದನೆ ಉದ್ದಿಮೆಗಳಲ್ಲಿ ಎಫ್‌ಡಿಐಗೆ ಆಹ್ವಾನ ನೀಡುವುದರ ಹಿಂದೆ ದೇಶದಲ್ಲಿ ಒಂದು ಮಿಲಿಟರಿ ಕೈಗಾರಿಕಾ ಸಮುಚ್ಚಯವನ್ನು ಸ್ಥಾಪಿಸುವ ಉದ್ದೇಶವೂ ಅಡಗಿದೆ. ಲಾರ್ಸನ್ ಅಂಡ್ ಟೂಬ್ರೋ, ರಿಲಯನ್ಸ್, ಟಾಟಾ ಮತ್ತಿತರ ಭಾರತೀಯ ಕಾರ್ಪೊರೇಟ್ ಕಂಪೆನಿಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚೆಚ್ಚಾಗಿ ರಕ್ಷಣಾ ಉತ್ಪಾದನೆ ಕ್ಷೇತ್ರವನ್ನು ಪ್ರವೇಶಿಸುತ್ತಿವೆ.

ಯಾವುದೇ ಕಾರ್ಯಸಾಧುವಾದ ಜಂಟಿ ಉತ್ಪಾದನೆ ಅವಕಾಶಗಳು ಸೃಷ್ಟಿಯಾಗುವ ಮುನ್ನ ಕಮ್ಯುನಿಕೇಷನ್ ಇಂಟರ್‌ಆಪರೆಬಿಲಿಟಿ ಅಂಡ್ ಸೆಕ್ಯುರಿಟಿ ಮೆಮೊರಾಂಡಮ್ ಅಗ್ರಿಮೆಂಟ್ (ಸಿಐಎಸ್‌ಎಂಓಎ) ಮತ್ತು ಬೇಸಿಕ್ ಎಕ್ಸ್‌ಚೇಂಜ್ ಅಂಡ್ ಕೋಪರೇಷನ್ ಅಗ್ರಿಮೆಂಟ್ (ಬಿಇಸಿಎ) ಮುಂತಾದಪಿನ್ನಷ್ಟು ಮಿಲಿಟರಿ ಸಹಕಾರದ ಒಡಂಬಡಿಕೆಗಳಿಗೆ ಭಾರತ ಸಹಿ ಹಾಕುವಂತೆ ಒತ್ತಡ ಹೇರುವುದನ್ನು ಅಮೆರಿಕ ಮುಂದುವರಿಸಲಿದೆ.

ಅಮೆರಿಕದೊಂದಿಗೆ ನಿಕಟ ಮಿಲಿಟರಿ ಸಹಕಾರವನ್ನು ಸಾಧಿಸುವಲ್ಲಿ ಮೋದಿ ಸರಕಾರ ಅಪಾಯದ ಎಲ್ಲೆಯನ್ನು ಮೀರಿದೆ. ಇದು ಭಾರತದ ಸಾರ್ವಭೌಮತೆ ಮತ್ತು ಸ್ವತಂತ್ರ ವ್ಯೂಹಾತ್ಮಕ ನಿರ್ಣಯ ಕೈಗೊಳ್ಳುವ ಸಾಮರ್ಥ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರಲಿದೆ.

ಔಷಧಿ-ಚಿಲ್ಲರೆ ವ್ಯಾಪಾರದಲ್ಲಿ ಪ್ರತಿಗಾಮಿ ಕ್ರಮ

ಔಷಧ ಕ್ಷೇತ್ರದಲ್ಲಿ ಇನ್ನಷ್ಟು ಎಫ್‌ಡಿಐಗೆ ಉದಾರ ಅವಕಾಶ ಕಲ್ಪಿಸುವುದು ಕೂಡ ಅಷ್ಟೇ ಅಪಾಯಕಾರಿಯಾದುದು. ಈ ಮೊದಲು ಹೊಚ್ಚಹೊಸ (ಗ್ರೀನ್‌ಫೀಲ್ಡ್-ಹಸಿರು ಕ್ಷೇತ್ರ)ಯೋಜನೆಗಳಲ್ಲಿ ಶೇಕಡಾ ನೂರರಷ್ಟು ಎಫ್‌ಡಿಐಗೆ ಅವಕಾಶ ಕಲ್ಪಿಸಿದ್ದ ಸರಕಾರ ಇದೀಗ ಅದನ್ನು ಮೇಲ್ದರ್ಜೆಗೇರಿಸುವ ಹೆಸರಿನಲ್ಲಿ (ಬ್ರೌನ್‌ಫೀಲ್ಡ್ ಪ್ರಾಜೆಕ್ಟ್-ಬೂದು ಕ್ಷೇತ್ರ) ಈಗಾಗಲೇ ಅಸ್ತಿತ್ವದಲ್ಲಿರುವ ಔಷಧಿ ಕಂಪೆನಿಗಳಲ್ಲಿ ಶೇಕಡಾ 74 ಎಫ್‌ಡಿಐ ಹೂಡಿಕೆಗೆ ಅವಕಾಶ ನೀಡಿದೆ. ಈಗಾಗಲೇ ಕಳೆದ ಕೆಲವು ವರ್ಷಗಳಿಂದ ಭಾರತೀಯ ಔಷಧಿ ತಯಾರಿಕೆ ಕಂಪೆನಿಗಳನ್ನು ವಿದೇಶಿ ಔಷಧ ಕಂಪೆನಿಗಳು ಖರೀದಿಸುವ ಪ್ರಕ್ರಿಯೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಭಾರತ ಸಾರ್ವತ್ರಿಕ (ಜೆನೆರಿಕ್) ಔಷಧ ತಯಾರಿಕೆಯ ದೊಡ್ಡ ದೇಶವಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಔಷಧ ಕಂಪೆನಿಗಳನ್ನು ಖರೀದಿಸುವುದರಿಂದ ಭಾರತೀಯರು ಹಾಗೂ ಈ ಔಷಧಿಗಳನ್ನು ಭಾರತ ರಫ್ತು ಮಾಡುತ್ತಿರುವ ಅಭಿವೃದ್ಧಿಶೀಲ ದೇಶಗಳ ಜನರಿಗೆ ಔಷಧಿಗಳು ದುಬಾರಿಯಾಗಲಿವೆ.

ಚಿಲ್ಲರೆ ಆಹಾರ ವ್ಯಾಪಾರ ಕ್ಷೇತ್ರವನ್ನು ಕೂಡ ಬಹುರಾಷ್ಟ್ರೀಯ ಕಂಪೆನಿಗಳಿಗೆ ತೆರೆದಿಡುತ್ತಿರುವುದು ಇನ್ನೊಂದು ಪ್ರತಿಗಾಮಿ ಕ್ರಮವಾಗಿದೆ. ಭಾರತದಲ್ಲಿ ತಯಾರಿಸುವ ಅಥವಾ ಉತ್ಪಾದಿಸುವ ಆಹಾರ ಉತ್ಪನ್ನಗಳ ವಾಣಿಜ್ಯಕ್ಕೆ ಶೇಕಡಾ ನೂರು ಎಫ್‌ಡಿಐಗೆ ಅವಕಾಶ ನೀಡುವ ಮೂಲಕ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಎಫ್‌ಡಿಐಗೆ ಹೆಬ್ಬಾಗಿಲನ್ನೇ ತೆರೆದಿದೆ ಮೋದಿ ಸರಕಾರ. ಇದರಲ್ಲಿ ಇ-ಕಾಮರ್ಸ್ (ಇಂಟರ್‌ನೆಟ್ ಮೂಲಕ ಖರೀದಿ) ಕೂಡ ಸೇರಿದೆ. ಸರಕಾರದ ಈ ಘೋಷಣೆಗಳ ಪರಿಣಾಮವಾಗಿ ವಾಲ್‌ಮಾರ್ಟ್ ಮತ್ತು ಅಮೆಜಾನ್‌ನಂಥ ದೈತ್ಯ ಕಂಪೆನಿಗಳು ಭಾರತದ ಚಿಲ್ಲರೆ ಆಹಾರ ಮಾರುಕಟ್ಟೆ ಕ್ಷೇತ್ರವನ್ನು ಪ್ರವೇಶಿಸಲು ತುದಿಗಾಲ ಮೇಲೆ ನಿಂತಿವೆ. ಇದು ದೇಶಾದ್ಯಂತ ಸಣ್ಣ ಆಹಾರ ಮತ್ತು ದಿನಸಿ ಅಂಗಡಿಗಳ ಮೇಲೆ ಪರಿಣಾಮ ಬೀರಲಿದೆ. ಲಕ್ಷಾಂತರ ಸಣ್ಣ ವ್ಯಾಪಾರಿಗಳು ಮತ್ತು ಕಿರಾಣಿ ಅಂಗಡಿದಾರರ ಜೀವನೋಪಾಯ ಸಂಕಷ್ಟಕ್ಕೆ ಸಿಲುಕಲಿದೆ.

ರಾಷ್ಟ್ರೀಯ ಸಾರ್ವಭೌಮತೆ, ರಕ್ಷಣೆ ಮತ್ತು ಭದ್ರತೆಯನ್ನು ಶರಣಾಗಿಸುವ ನೀತಿಗೆ ಅನುಗುಣವಾಗಿ, ದೇಶದ ಖಾಸಗಿ ಭದ್ರತಾ ಕೈಗಾರಿಕೆಯನ್ನು ವಿದೇಶಿ ಕಂಪೆನಿಗಳು ಕೈವಶ ಮಾಡಿಕೊಳ್ಳುವುದಕ್ಕೆ ಸರಕಾರ ಅನುಕೂಲ ಮಾಡಿಕೊಟ್ಟಿದೆ. ಈ ಕ್ಷೇತ್ರದ ಎಫ್‌ಡಿಐ ಅನ್ನು ಶೇಕಡಾ 49ರಿಂದ 74ಕ್ಕೆ ಏರಿಸಿದೆ. ಆಂತರಿಕ ಭದ್ರತೆಯ ಖಾಸಗೀಕರಣದ ಪ್ರಕ್ರಿಯೆಯನ್ನು ದೇಶೀಯ ಭದ್ರತಾ ಸಂಸ್ಥೆಗಳ ಮೇಲೆ ವಿದೇಶಿ ಭದ್ರತಾ ಕಂಪೆನಿಗಳ ಸವಾರಿಯ ಮಟ್ಟಕ್ಕೆ ಒಯ್ಯಲಾಗುತ್ತಿದೆ.

ಹತಾಶ ಕ್ರಮ

ಎಫ್‌ಡಿಐ ನಿಯಮಗಳ ಪ್ರಸಕ್ತ ಉದಾರೀಕರಣವು ಉತ್ಪಾದನೆ ಮತ್ತು ಉತ್ಪಾದಕ ಕ್ಷೇತ್ರಗಳಲ್ಲಿ ಇದುವರೆಗೆ ಹೇಳಿಕೊಳ್ಳುವಂಥ ವಿದೇಶಿ ಬಂಡವಾಳ ಹೂಡಿಕೆ ಆಗಿಲ್ಲ ಎಂಬುದನ್ನು ಒಪ್ಪಿಕೊಂಡಿರುವುದರ ಸೂಚನೆಯಾಗಿದೆ. ಹೆಚ್ಚಿನ ವಿದೇಶಿ ಬಂಡವಾಳ ಬಂದಿರುವುದು ಮಾರಿಷಸ್, ಸಿಂಗಾಪುರ ಮತ್ತು ನೆದರ್ಲೆಂಡ್ಸ್ ಮಾರ್ಗದ ಮೂಲಕ. ಹೇಳಬೇಕೆಂದರೆ ಅವು ನಿಜವಾಗಿಯೂ ಹೂಡಿಕೆಗಳೇ ಅಲ್ಲ, ಬದಲಿಗೆ ತೆರಿಗೆ ವಿನಾಯಿತಿ ಸೌಲಭ್ಯಗಳನ್ನು ಪಡೆಯಲು ಮಾಡಿದ ಹಣಕಾಸು ಹರಿವು ಅಷ್ಟೇ.

ಈಗಿರುವ ಉತ್ಪಾದಕ ಆಸ್ತಿಯನ್ನು ಕೈವಶ ಮಾಡಿಕೊಳ್ಳಲು ವಿದೇಶಿ ಬಂಡವಾಳಕ್ಕೆ ಪ್ರೋತ್ಸಾಹ ನೀಡುವ ಮೂಲಕ ಮತ್ತು ರಕ್ಷಣೆಯಂಥ ದೇಶದ ರಾಷ್ಟ್ರೀಯ ಸಾರ್ವಭೌಮತೆ ಮೇಲೆ ಪರಿಣಾಮ ಬೀರುವಂಥ ಪ್ರಮುಖ ಕ್ಷೇತ್ರಗಳಲ್ಲಿ ರಾಜಿ ಮಾಡಿಕೊಳ್ಳುವ ಮೂಲಕ ಎಫ್‌ಡಿಐ ಆಕರ್ಷಿಸಲು ಮೋದಿ ಸರಕಾರ ಹತಾಶ ಪ್ರಯತ್ನಗಳನ್ನು ಮಾಡುತ್ತಿದೆ. ಈ ಧೋರಣೆಗಳು ಜನತೆ ಮತ್ತು ದೇಶದ ಮೇಲೆ ಅನರ್ಥಕಾರಿ ಪರಿಣಾಮಗಳನ್ನು ಬೀರಲಿವೆ

ಅನು: ವಿಶ್ವ

ಎಫ್‌ಡಿಐ: ಉದ್ಯೋಗ ನಿರ್ಮಾಣ ಯಾರಿಗೆ?



ವ್ಯಂಗ್ಯಚಿತ್ರ: ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಸೆಪ್ಟೆಂಬರ್ 2, 2016

ಎಸ್.ವರಲಕ್ಷ್ಮಿ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?

ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಈ ವಾರದಿಂದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಈ ಮಹಾಮುಷ್ಕರದ ಬೇಡಿಕೆಗಳ ಬಗ್ಗೆ ನಮ್ಮ ಓದುಗರಿಗೆ ತಿಳಿಸುತ್ತಾರೆ.

ರೂ.18,000 ಕನಿಷ್ಟ ಕೂಲಿಯ ಬೇಡಿಕೆಯೊಂದಿಗೆ ಅವರು ಆರಂಭಿಸುತ್ತಿದ್ದಾರೆ. ಈ ಬೇಡಿಕೆ ಏಕೆ, ಜನಸಾಮಾನ್ಯರಿಗೆ 'ಅಚ್ಛೇ ದಿನ್' ಭರವಸೆ ನೀಡಿರುವ ಸರಕಾರ ಅದಕ್ಕೆ ಮೂಲಾಧಾರವಾದ ಈ ಬೇಡಿಕೆಯನ್ನೇಕೆ ಒಪ್ಪಿಕೊಳ್ಳುತ್ತಿಲ್ಲ, 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂದು ಸಾರುವ ಸರಕಾರ ಈ ವಿಷಯದಲ್ಲೂ ಮಾಲಕರ 'ಸಾಥ್' ಮತ್ತು ವಿಕಾಸದ ಬಗ್ಗೆಯಷ್ಟೇ ಯೋಚಿಸುತ್ತಿದೆಯೇ? ಓದಿ.

ಉದಾರೀಕರಣ ನೀತಿಗಳು ಪ್ರಾರಂಭವಾಗಿ 25 ವರ್ಷಗಳು ಕಳೆದಿವೆ. ಈ ನೀತಿಗಳು ತೀವ್ರವಾಗಿ ಜಾರಿಯಾಗುತ್ತಿರುವ ಹಿನ್ನೆಲೆಯಲ್ಲಿ "ಕಾರ್ಮಿಕ" ನನ್ನು ಕಾರ್ಮಿಕ ಎಂದು ವಾದಿಸಬೇಕಾದ ಅನಿವಾರ್ಯತೆ ಈಗ ಸೃಷ್ಟಿಯಾಗಿದೆ. ಇಂತಹ ಪರಿಸ್ಥಿತಿಗಳ ವಿರುದ್ಧ 12 ಬೇಡಿಕೆಗಳನ್ನಿಟ್ಟು ಇಂದು ಸಿಐಟಿಯು, ಐಎನ್‌ಟಿಯುಸಿ, ಹೆಚ್‌ಎಂಎಸ್, ಎಐಟಿಯುಸಿ, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಬ್ಯಾಂಕ್, ವಿಮಾ, ರಕ್ಷಣಾ ಮತ್ತಿತರ ಕಾರ್ಮಿಕರ, ನೌಕರರ ಜಂಟೀ ಹೋರಾಟ ಸಮಿತಿಗಳು "ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ" ಯನ್ನು ರಚಿಸಿಕೊಂಡು ಅದರ ಮುಖಾಂತರ ಈ ಮುಷ್ಕರಕ್ಕೆ ಕರೆಯನ್ನು ಕೊಟ್ಟಿವೆ.

ಕೇಂದ್ರ ಸರ್ಕಾರದ ಸಚಿವರ ತಂಡ ಕೇಂದ್ರ ಕಾರ್ಮಿಕ ಸಂಘಟನೆಗಳೊಟಿಗೆ ಮಾತುಕತೆ ನಡೆಸಿ ಬೇಡಿಕೆಗಳನ್ನು ಪರಿಷ್ಕರಿಸಲು ಒಪ್ಪಿದೆ, ಮಾತ್ರವಲ್ಲ 7 ಬೇಡಿಕೆಗಳನ್ನೊಪ್ಪಿದೆ, ಆದ್ದರಿಂದ ಈ ಮುಷ್ಕರ ರಾಜಕೀಯ ಪ್ರೇರಿತ ಎಂದು ಬಿ.ಎಂಎಸ್. ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ ದೂರ ಉಳಿದಿದೆ. ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಉಳಿಸಲಿಕ್ಕಾಗಿ ಮಾಡುವ ಹೋರಾಟ ರಾಜಕೀಯ ಪ್ರೇರಿತವೇ? ಕಾರ್ಮಿಕರ ಹಕ್ಕುಗಳನ್ನು ಸಂಪೂರ್ಣ ದಮನ ಮಾಡಿ ಅವರನ್ನು ಗುಲಾಮರನ್ನಾಗಿಸುವುದರ ವಿರುದ್ಧದ ಹೋರಾಟ ರಾಜಕೀಯ ಪ್ರೇರಿತವೇ? ಜಂಟಿ ವೇದಿಕೆಯಲ್ಲಿರುವುದು ಕೇವಲ ಎಡಪಂಥೀಯ ಕಾರ್ಮಿಕ ಸಂಘಟನೆಗಳು ಮಾತ್ರವೇ ಅಲ್ಲ, ಬೇರೆ ಕಾರ್ಮಿಕ ಸಂಘಟನೆಗಳೂ ಇವೆ. ಇವೆಲ್ಲ ಜಂಟಿ–ಯಾಗಿ ಸರಕಾರದ ಮುಂದಿಟ್ಟಿರುವ ಈ ಸಾರ್ವತ್ರಿಕ ಮುಷ್ಕರದ ಬೇಡಿಕೆಗಳು ದೇಶದ ಕೋಟ್ಯಂತರ ಜನಗಳ ಬದುಕನ್ನು ಬಾಧಿಸುತ್ತಿರುವ ಪ್ರಮುಖ ಪ್ರಶ್ನೆಗಳು.

ಈ ಬಗ್ಗೆ ಇಲ್ಲಿ ವಿವರವಾದ ಮಾಹಿತಿಯನ್ನು ಕೊಡುವ ಪ್ರಯತ್ನ ನಮ್ಮದಾಗಿದೆ.

18 ಸಾವಿರ ರೂ. ಕನಿಷ್ಠ ಕೂಲಿ ನಿಗದಿಪಡಿಸಿ

ದುಡಿಮೆಗಾರರಿಗೆ ಒಳ್ಳೆಯ ದಿನಗಳನ್ನು ಕೊಡುವ ಬದಲಿಗೆ ಕೇಂದ್ರ ಸರ್ಕಾರ ದುಬಾರಿ ದಿನಗಳನ್ನು ಕೊಟ್ಟಿರುವುದರ ಪರಿಣಾಮ ವಿವಿಧ ವಿಭಾಗದ ದುಡಿಯುವ ಜನತೆ ತಮ್ಮ ಕನಿಷ್ಠ ವೇತನ, ವೇತನ ತಾರತಮ್ಯಗಳ ವಿರುದ್ಧವಾಗಿ ಸತತವಾಗಿ ಹೋರಾಟ ನಡೆಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿಯೇ ಮುನ್ಸಿಪಲ್ ಕಾರ್ಮಿಕರು, ಹಮಾಲಿ ಕಾರ್ಮಿಕರು ವಿವಿಧ ಕೈಗಾರಿಕೆಗಳ ಕಾರ್ಮಿಕರು, ಆರೋಗ್ಯ ಇಲಾಖೆಯ ಡಾಕ್ಟರ್‌ಗಳು, ನರ್ಸ್‌ಗಳು, 108 ಆಂಬುಲೆನ್ಸ್ ಸಿಬ್ಬಂದಿ, ಅತಿಥಿ ಶಿಕ್ಷಕರು, ಪಿ.ಯು.ಸಿ ಮತ್ತು ಎಸ್.ಎಸ್.ಎಲ್.ಸಿ. ಪ್ರಾಧ್ಯಾಪಕರು, ರಾಜ್ಯ ಸರ್ಕಾರಿ ನೌಕರರು, ಸಚಿವಾಲಯದ ನೌಕರರು, ಪೋಲೀಸ್ ಸಿಬ್ಬಂದಿಗಳು, ಮಹಾನಗರ ಪಾಲಿಕೆಯಲ್ಲಿರುವ ಕಂಪ್ಯೂಟರ್ ಆಪರೇಟರ್ಸ್, ಬೀಡಿ, ಪ್ಲ್ಯಾಂಟೇಶನ್ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಆಶಾ, ಗ್ರಾಮ ಪಂಚಾಯ್ತಿ ನೌಕರರು, ಕೆ.ಎಸ್.ಆರ್.ಟಿ.ಸಿ, ಬಿ.ಟಿ.ಎಸ್. ಡ್ರೈವರ್‌ಗಳು, ಕಂಡಕ್ಟರ್‌ಗಳು, ಬ್ಯಾಂಕ್, ವಿಮಾ, ಬಿ.ಎಸ್.ಎನ್.ಎಲ್., ರಕ್ಷಣಾ ರೇಲ್ವೆ ನೌಕರರು, ಕೇಂದ್ರ ಸರ್ಕಾರ ವಿವಿಧ ಇಲಾಖೆಯ ನೌಕರರು, ಸಾರ್ವಜನಿಕ ಕೈಗಾರಿಕೆಗಳ ನೌಕರರು, ದಿನನಿತ್ಯ ಹೋರಾಟದ ಕಣದಲ್ಲಿದ್ದಾರೆ. ಆದರೆ ಈ ಸರ್ಕಾರಗಳು ಕನಿಷ್ಟ ಕೂಲಿಯ ಬೇಡಿಕೆಯನ್ನು ಒಪ್ಪುತ್ತಿಲ್ಲ.

1 18 ಸಾವಿರ ರೂ. ಕನಿಷ್ಠ ಕೂಲಿ ನಿಗದಿಪಡಿಸಿ

ಈ ಕನಿಷ್ಟ ಕೂಲಿ ಎನ್ನುವುದು ಒಬ್ಬ ಕಾರ್ಮಿಕನ ಶ್ರಮದ ಕನಿಷ್ಟ ಮೌಲ್ಯ. ಈ ಮೌಲ್ಯವನ್ನೂ ಪಡೆಯಲೂ ಒಂದು ದೊಡ್ಡ ಸಂಘರ್ಷ ಮಾಡಬೇಕಾದ ಅಗತ್ಯ ಬರಬಾರದು. ಮತ್ತು ಈ ಕನಿಷ್ಟ ವೇತನವನ್ನು ಜಾರಿಮಾಡದಿದ್ದರೆ ಅದರ ದುಷ್ಪರಿಣಾಮ ದೇಶದ ಒಟ್ಟು ಆರ್ಥಿಕದ ಮೇಲೆಯೇ ಬೀಳುತ್ತದೆ. ಏಕೆ–ಂದರೆ ಇದರಿಂದ ದೇಶದ ಬಹುದೊಡ್ಡ ವಿಭಾಗದ ಕೊಳ್ಳುವ ಸಾಮರ್ಥ ಕುಗ್ಗುತ್ತದೆ.

ಕನಿಷ್ಠಕೂಲಿ 15 ಸಾವಿರಕ್ಕೆ ಕಡಿಮೆ ಇಲ್ಲದಂತಿರಬೇಕು ಎಂಬ ಬೇಡಿಕೆಗೆ ಸರ್ಕಾರವು ನೀಡಿರುವ ಪ್ರತಿಕ್ರಿಯೆ ಹೀಗಿದೆ– "ಕನಿಷ್ಠ ಕೂಲಿ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ಸರಕಾರ ತೀವ್ರವಾಗಿ ಪರಿಶೀಲಿಸುತ್ತಿದೆ. ಎಲ್ಲಾ ಕಾರ್ಮಿಕರಿಗೆ ರೂ.273 ಕ್ಕೆ ಕಡಿಮೆ ಇಲ್ಲದಂತೆ ದಿನಗೂಲಿ ಅಂದರೆ ತಿಂಗಳಿಗೆ 6098 ರೂ. ನ್ನು ನೀಡುವ ತಿದ್ದುಪಡಿ ತರಲಾಗುವುದು"

ಅಂದರೆ ಕಾರ್ಮಿಕ ಸಂಘಟನೆಗಳ ಬೇಡಿಕೆಯಲ್ಲಿ 40% ಮಾತ್ರ ಕೂಲಿ ಹೆಚ್ಚಿಸುವುದಾಗಿ ಹೇಳುತ್ತಿದೆ. ಈ ವಾದವನ್ನು ನಾವು ಒಪ್ಪಬೇಕೇ?

ಒಪ್ಪಲು ಸಾಧ್ಯವಿಲ್ಲ, ಏಕೆಂದರೆ ಕನಿಷ್ಠ ವೇತನದ ಈ ಬೇಡಿಕೆ ಒಂದು ನಿರ್ದಿಷ್ಠ ಸೂತ್ರವನ್ನು ಆಧರಿಸಿದೆ:

- 1957ನೇ ಐಎಲ್‌ಸಿ (ಅಂತರ ರಾಷ್ಟ್ರೀಯ ಕಾರ್ಮಿಕ ಸಮಾವೇಶ)ದ ಕನಿಷ್ಠ ವೇತನದ ಅಂಶಗಳು ಹೇಗಿರಬೇಕೆಂದೂ ನಿಗದಿಪಡಿಸಿದೆ.
- ರಘುಕೋಸ ಬ್ರೇನ್ ಕೇಸ್‌ನಲ್ಲಿ 1992 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಆಧಾರದಲ್ಲಿ ಕನಿಷ್ಠ ವೇತನ ಹೇಗೆ ನಿಗದಿಪಡಿಸಬೇಕೆಂದೂ ತಿಳಿಸಿದೆ.
- ಐಎಲ್‌ಒ 131 ನೆಯ ಒಡಂಬಡಿಕೆ ಕನಿಷ್ಠ ವೇತನ ಎಂಬುದು ಶೆಡ್ಯೂಲ್‌ನಲ್ಲಿ ಬರುವ ಕೈಗಾರಿಕೆಗಳಿಗೆ ಮಾತ್ರ ಎಂಬ ಷರತ್ತನ್ನು ತೆಗೆಯಬೇಕೆಂದೂ ತಿಳಿಸಿದೆ.
- ಐಎಲ್‌ಒ, ಐಎಲ್‌ಸಿ ಸಮಿತಿಗಳು ತ್ರಿಪಕ್ಷೀಯ ಸಮಿತಿಗಳು ಈ ಸಮಿತಿಗಳ ತೀರ್ಮಾನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಮಾಲೀಕರ ಪ್ರತಿನಿಧಿಗಳು ಕಾರ್ಮಿಕ ಸಂಘಟನೆಗಳು ಕನಿಷ್ಠ ವೇತನ ಸೂತ್ರವನ್ನು ರಚಿಸಿರುವುದು.

ಕನಿಷ್ಠ ವೇತನವನ್ನು ನಿಗದಿಪಡಿಸುವ ಸೂತ್ರಗಳು ಹೀಗಿವೆ:

- ಪ್ರತಿ ಮೂರು ಜನ ಸದಸ್ಯರಿರುವ ಕಾರ್ಮಿಕ ಕುಟುಂಬದ ಪ್ರತಿಯೊಬ್ಬರಿಗೆ ಕನಿಷ್ಠ 2,700 ಕ್ಯಾಲೋರಿ ಆಹಾರ
- ವರ್ಷಕ್ಕೆ ಪ್ರತಿಯೊಬ್ಬರಿಗೆ ಕನಿಷ್ಠ 18 ಗಜ ಬಟ್ಟೆ
- ಮೇಲಿನ ಎರಡು ವೆಚ್ಚಗಳ 10% ಮನೆಯ ಬಾಡಿಗೆ
- ಮೊದಲ ಎರಡು ವೆಚ್ಚಗಳ 20% ರಷ್ಟು ಇಂಧನ (ವಿದ್ಯುಚ್ಛಕ್ತಿ ಇತ್ಯಾದಿ)

ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪನ್ನು ಮೇಲಿನ 1 ರಿಂದ 4 ಅಂಶಗಳ ವೆಚ್ಚದ 25% ರಷ್ಟನ್ನು ಸೇರಿಸುವ ಮೂಲಕ ಕನಿಷ್ಠ ಕೂಲಿಯನ್ನು ನಿಗದಿಪಡಿಸಬೇಕೆಂದೂ ಆದೇಶಿಸಿದೆ.

ಆದರೆ ಕೇಂದ್ರ ಸರ್ಕಾರ ಈ ಸೂತ್ರದ ಪ್ರಕಾರವೇ ಲೆಕ್ಕ ಹಾಕಿ ದಿನಕ್ಕೆ 273 ಇದಕ್ಕೆ ಸುಪ್ರಿಂಕೋರ್ಟ್ ಹೇಳಿದ 25% ಸೇರಿಸಿದರೆ ಸಂಪೂರ್ಣವಾಗುತ್ತದೆ ಎಂಬ ಹೇಳಿಕೆಯನ್ನು ನೀಡಿದ್ದಾರೆ. ದೆಹಲಿ, ಮಂಡ್ಯ, ಚೆನ್ನೈ, ಕಲ್ಕತ್ತಾ, ಬೆಂಗಳೂರು, ಭುವನೇಶ್ವರ ಮತ್ತು ತಿರುವನಂತಪುರಂ ನಂತಹ 7 ನಗರಗಳಲ್ಲಿ ಚಿಲ್ಲರೆ ವ್ಯಾಪಾರದ ಸರಾಸರಿ ಬೆಲೆಗಳನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಿಂದ ಲೆಕ್ಕ ಹಾಕಿದ ಒಂದು ಕಾರ್ಮಿಕನೊಬ್ಬನಿಗೆ ತಿಂಗಳಿಗೆ ರೂ. 20,861 ಅಂ–ದರೆ, ದಿನಕ್ಕೆ 802.35ರೂ. ಕನಿಷ್ಠ ಕೂಲಿ ನೀಡಬೇಕಿದೆ. ಇದನ್ನು ನೋಡಿದಾಗ ಹೇಳಿಕೆ ಹಾಸ್ಯಾಸ್ಪದವಲ್ಲವೇ?

ಪರಿಣಿತರಲ್ಲದ **(Unskilled)** ಕೆಲಸಗಾರರಿಗೆ ಕೊಡಬೇಕಾದ ಕನಿಷ್ಟ ಕೂಲಿಯ ಈ ಲೆಕ್ಕಾಚಾರವು ಐಎಲ್‌ಸಿ ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ 2014 ಮೇ 1ರ ಬೆಲೆಗಳನ್ನು ಆಧರಿಸಿದೆ. ಆದಾಗ್ಯೂ ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಯನ್ನು ಕೆಳಗಿಳಿಸಿದೆ. ಇದರ ನಂತರ ಕೇಂದ್ರ ಸರ್ಕಾರ ನೇಮಿಸಿದ 7 ನೇ ವೇತನ ಆಯೋಗ ಕನಿಷ್ಠ ವೇತನ 18 ಸಾವಿರಕ್ಕೆ ಕಡಿಮೆ ಇಲ್ಲದಂತಿರಬೇಕೆಂದೂ ಶಿಫಾರಸ್ಸು ಮಾಡಿದೆ.

ಆದ್ದರಿಂದ ಈಗ ನಮ್ಮ ಬೇಡಿಕೆ – ರೂ. 18000 ಕನಿಷ್ಟ ವೇತನ ನಿಗದಿ ಮಾಡಿ.

ಐಎಲ್‌ಒ, ಐಎಲ್‌ಸಿ ಸುಪ್ರೀಂಕೋರ್ಟ್ ನಿರ್ದೇಶನಗಳಿದ್ದರೂ ಯಾಕೆ ಕೇಂದ್ರ ಸರ್ಕಾರ ಕನಿಷ್ಠ ವೇತನ ಕಾಯ್ದೆಗೆ ತಿದ್ದುಪಡಿ ತರುತ್ತಿಲ್ಲ?

ಬಂಡವಾಳದ ಉದ್ದೇಶವೇ ಲಾಭ. ಲಾಭವನ್ನು ಮತ್ತಷ್ಟು, ಮಗದಷ್ಟು ಗಳಿಸಲಿಕ್ಕಾಗಿ ಯಾವ ತಂತ್ರವಾದರೂ ಸರಿ. ಇದರಿಂದಾಗಿ ಹೆಚ್ಚುತ್ತಿರುವ ಅಸಮಾನತೆ.

'ಮೇಕ್ ಇನ್ ಇಂಡಿಯಾ', ಭಾರತದಲ್ಲಿಯೇ ತಯಾರಿಸಿ ಎಂಬ ಘೋಷಣೆ ಕೊಟ್ಟಿದ್ದೇ ಭಾರತದಲ್ಲಿ ಅತ್ಯಂತ ಕಡಿಮೆ ಕೂಲಿಗೆ ಕಾರ್ಮಿಕರು ಲಭ್ಯರಿದ್ದಾರೆ ಎಂಬ ಕಾರಣಕ್ಕಾಗಿ ತಾನೇ?

ಒಂದು ದಿನಕ್ಕೆ 2,000 ರೂ. ಮೌಲ್ಯವನ್ನು ಉತ್ಪಾದಿಸುವ ಕಾರ್ಮಿಕ ಅದರಲ್ಲಿ ಅರ್ಧದಷ್ಟು (1/2) ಪಾಲನ್ನೂ ಕೇಳಬಾರದೆಂಬ ಪರಿಸ್ಥಿತಿಯನ್ನು ನಿರ್ಮಿಸಲಾಗುತ್ತಿದೆ. ಖಾಯಂ ಉದ್ಯೋಗವನ್ನು ದಿನಗೂಲಿ, ಗುತ್ತಿಗೆ, ಹೊರಗುತ್ತಿಗೆ, ಟ್ರೈನಿ, ಕ್ಯಾಷುಯಲ್, ಪೀಸ್‌ವರ್ಕ್, ತಾತ್ಕಾಲಿಕ, ಸ್ವ–ಯಂ ಉದ್ಯೋಗಿ, ಪ್ರೋತ್ಸಾಹ ಧನ, ಗೌರವಧನ ಎಂದು ವಿಭಜನೆ ಮಾಡಿ ಕಾರ್ಮಿಕರ ಐಕ್ಯತೆಗೆ ಧಕ್ಕೆ ತರುವುದಷ್ಟೇ ಅಲ್ಲದೆ ಕನಿಷ್ಠ ವೇತನವೂ ಸಿಗದಂತೆ ವಂಚನೆ ಮಾಡಿ ಮಾಲಿಕರಿಗೆ ಸಹಾಯ ಮಾಡುತ್ತಿದೆ ಸರಕಾರ.

ಈ ನೀತಿಗಳಿಂದಾಗಿ ಒಟ್ಟು ಮೌಲ್ಯ ಉತ್ಪಾದನೆಯಲ್ಲಿ ಕಾರ್ಮಿಕರ ಪಾಲು 33% ರಿಂದ 10% ಗೆ ಇಳಿದಿದೆ. ಮಾಲೀಕರ ಲಾಭ 12% ರಿಂದ 45% ಗೆ ಹೆಚ್ಚಿದೆ.

ಭಾರತದಲ್ಲಿ ಕನಿಷ್ಠ ವೇತನದ ಇಂತಹ ಪರಿಸ್ಥಿತಿಯಿಂದಾಗಿ ಇಂದು ವಿಶ್ವಬ್ಯಾಂಕ್ ತನ್ನ ವರದಿಯಲ್ಲಿ ಅಪೌಷ್ಠಿಕತೆಯಿಂದಾಗಿ ಜಿ.ಡಿ.ಪಿ. ಗೆ 2% ರಷ್ಟು ಹಾನಿಯಾಗಿದೆ, ವಿಶ್ವದಲ್ಲಿ ಮಕ್ಕಳ ಅಪೌಷ್ಠಿಕತೆ 42% ರಷ್ಟು ಭಾರತದಲ್ಲಿದೆ, ಮನುಷ್ಯನ ಜೀವಿತಾವಧಿ ಕಡಿಮೆಯಾಗುತ್ತಿದೆ, ಒಟ್ಟು ದುಡಿಮೆಯಲ್ಲಿ 10% ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿವೆ.

ವಿಶ್ವ ಆರ್ಥಿಕ ವೇದಿಕೆ ಭಾರತದಲ್ಲಿ ಅಸಮಾನತೆ ಹೆಚ್ಚು ಆಳಗೊಳ್ಳುತ್ತಿದೆ ಎಂಬುದಾಗಿಯೂ ಎಚ್ಚರಿಸಿದೆ.

ಸಬ್ ಕಾ ಸಾಥ್, ಸಬ್‌ಕಾ ವಿಕಾಸ್ ಎಂದು ಹೇಳುವ ನರೇಂದ್ರ ಮೋದಿ ಸರ್ಕಾರದ ಅಭಿವೃದ್ಧಿಯ ಮಂತ್ರದಲ್ಲಿ ಕನಿಷ್ಠ ವೇತನ ಎಂಬ ಅಂಶವೇ ಇಲ್ಲ.

ಅದೇ ರೀತಿ ಕನಾಟಕ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ ಅಡಿಯಲ್ಲಿರುವ ಕನಿಷ್ಠ ಕೂಲಿ ಸಲಹಾ ಸಮಿತಿ 32 ವಿಭಾಗಗಳಿಗೆ ಕನಿಷ್ಠ ವೇತನ ನಿಗದಿಪಡಿಸಲು ಚರ್ಚಿಸುತ್ತಿದೆ. ಅದರಲ್ಲಿ (1) ಆಟೋಮೊಬೈಲ್ ಇಂಜಿನಿಯರಿಂಗ್ ಉದ್ದಿಮೆ (2) ಪೌಲ್ಟ್ರಿ ಉದ್ದಿಮೆ (3) ವಿನೀರ್ ಉದ್ದಿಮೆ (4) ಹಾಸ್ಟೆಲ್ ಉದ್ದಿಮೆ (5) ಪ್ರಿಂಟಿಂಗ್ ಪ್ರೆಸ್ (6) ಆಯಿಲ್ ಮಿಲ್ (7) ಸೆರಾಮಿಕ್ ಉದ್ದಿಮೆ ಮತ್ತು ಐಸ್ ಫ್ಯಾಕ್ಟರಿ ಉದ್ದಿಮೆಗಳಿಗೆ 10,100 ರೂ.ಗಳಿಂದ 10,500 ರೂ.ಗಳ ತನಕ ಕನಿಷ್ಠ ಕೂಲಿ ಪರಿಷ್ಕರಿಸಿ ಅಂತೆಯೇ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ರಾಜ್ಯದ ಮಾಲೀಕರು ರಾಜ್ಯ ಸರ್ಕಾರದ ಅಪ್ರತ್ಯಕ್ಷ ಸಹಾಯದೊಂದಿಗೆ ಹೈಕೋರ್ಟ್‌ನಿಂದ ತಡೆಯಾಜ್ಞೆಯನ್ನು ಪಡೆದಿದ್ದಾರೆ. ಅಂದರೆ ಪರಿಷ್ಕರಣೆಯಾದ ವೇತನದಲ್ಲಿ 75% ಮಾತ್ರ ಜಾರಿಯಾಗಬೇಕು. 7,000 ದಿಂದ 7,500 ರೂ. ಮಾತ್ರ ಅಂದರೆ ಹಿಂದಿರುವ ವೇತನಕ್ಕೆ ವಾಪಾಸ್ಸಾಗಬೇಕೆಂಬ ಸಂದೇಶವಿದೆ. ಸರಕಾರದೊಟ್ಟಿಗೆ ಕೋರ್ಟ್‌ಗಳು ಕೂಡಾ ಉದಾರೀಕರಣ ನೀತಿಗಳ ಜಾರಿಗೆ ಸಹಕಾರಿಯಾಗಿವೆ ಎಂಬುದನ್ನು ಸಾಬೀತುಪಡಿಸಲಾಗುತ್ತಿದೆ.

ಭಾರತದಲ್ಲಿ ಯಾವ ದುಡಿಯುವ ಜನತೆ ನಿಜವಾಗಿಯೇ ದೇಶದ ಜಿಡಿಪಿಗಾಗಿ ದುಡಿಯುತ್ತಿದ್ದಾರೋ, ಯಾರು ಸಾರ್ವಜನಿಕ ವೆಚ್ಚಕ್ಕೆ ಆದಾಯವನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆಯೇ, ಯಾರು ಬಂಡವಾಳಗಾರರ ಮತ್ತು ಭೂಮಾಲೀಕ ವರ್ಗದ ಲಾಭಕ್ಕೆ ಕಾರಣರಾಗಿದ್ದಾರೆಯೋ ಅವರು ತಮ್ಮ ಜೀವ ಮತ್ತು ಜೀವನಾಧಾರದ ಮೇಲೆ ತೀವ್ರ ಪ್ರಹಾರವನ್ನು ಎದುರಿಸುತ್ತಿದ್ದಾರೆ.

ವೇತನ ವೆಚ್ಚವು ಒಟ್ಟು ಉತ್ಪಾದನಾ ಆದಾಯದ ಸುಮಾರು 10% ಕ್ಕೆ ಇಳಿದಿದೆ. ಗ್ರಾಮೀಣ ಕೂಲಿಕಾರರ ಕೂಲಿಯೂ ನಿರಂತರ ಇಳಿಕೆಯಾಗುತ್ತಿದೆ.

ಸರ್ಕಾರ ಕಾರ್ಪೋರೇಟ್ ಬಂಡವಾಳಗಾರರ ಸೇವೆಯನ್ನು ಮಾಡುತ್ತಾ ಪ್ರಗತಿಯ ಬಡಾಯಿಯ ಘೋಷಣೆಗಳ ಮರೆಯಲ್ಲಿ ಜನಸಾಮಾನ್ಯರ ಮಟ್ಟಿಗೆ ಆರ್ಥಿಕತೆಯ ಅಂಧಕಾರವನ್ನು ಮುಂದುವರಿಸುತ್ತಿದೆ.

ಸಂಪತ್ತನ್ನು ಸೃಷ್ಟಿಸುವ ನಾವು ನಮ್ಮ ಶ್ರಮದ ಮೌಲ್ಯವನ್ನು ಪಡೆಯಬಾರದೇ? ಅದಕ್ಕಾಗಿ ಕನಿಷ್ಠ ವೇತನ ಕಾಯ್ದೆಗೆ 18 ಸಾವಿರ ರೂ. ತಿದ್ದುಪಡಿಗಾಗಿ ಒತ್ತಾಯಿಸಲು ಈ ಮುಷ್ಕರ.



ಸಿಐಟಿಯು 3ನೇ ಧಾರವಾಡ ಜಿಲ್ಲಾ ಸಮ್ಮೇಳನ

ಅಂದು ಮೌನಿ ಪಿಎಂ, ಇಂದು ವಾಚಾಳಿ ಪಿಎಂ – ಕೆ ಮಹಾಂತೇಶ



ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶರವರು "ಹಿಂದಿನ ಯುಪಿಎ ಸರಕಾರದಲ್ಲಿ ಮೌನ ಪ್ರಧಾನಿಯನ್ನು ನೋಡಿದ್ದಾಯಿತು, ಈಗ ಯಾವಾಗಲೂ ಮಾತನಾಡುವ ಪ್ರಧಾನಿಯನ್ನು ನೋಡುವಂತಾಗಿದೆ. ಪ್ರಧಾನಿ ಮೋದಿ ಅವರ ವಿದೇಶಗಳಲ್ಲಿನ 149 ಭಾಷಣಗಳಿಂದ ಏನೂ ಪ್ರಯೋಜನವಾಗಿಲ್ಲ" ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಧಾನಿ ಮೋದಿ ಅವರು ಎರಡು ವರ್ಷಗಳಲ್ಲಿ 42 ವಿದೇಶ ಪ್ರವಾಸ ಮಾಡಿದ್ದು ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ ಅವರನ್ನು ಅಪ್ಪಿತಪ್ಪಿಯೂ ವಿದೇಶಕ್ಕೆ ಕರೆದುಕೊಂಡು ಹೋಗಿಲ್ಲ. ವಿದೇಶಾಂಗ ಸಚಿವರದ್ದು ಕೇವಲ ಪ್ರಧಾನಿಯವರನ್ನು ಹೂಗುಚ್ಛ ನೀಡಿ ಸ್ವಾಗತಿಸುವ ಮತ್ತು ಬೀಳ್ಕೊಡುವುದು ಮಾತ್ರ ಕೆಲಸವಾಗಿದೆ ಎಂದು ಅವರು ವ್ಯಂಗವಾಡಿದರು.

ಅವರು ಜೂನ್–19ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿತಯನ್ಸ್(ಸಿಐಟಿಯು), 3ನೇ ಧಾರವಾಡ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾಂ॥ ಎಸ್. ಪ್ರಸನ್ನಕುಮಾರ ವೇದಿಕೆ ಹಾಗೂ ಕಾಂ॥ ಸಾಯಿಕುಮಾರ ಅರ್ಕಸಾಲಿ ಸಭಾಂಗಣದಲ್ಲಿ (ಹುಬ್ಬಳ್ಳಿಯ ಮುನ್ಸಿಫಲ್ ಎಂಪ್ಲಾಯೀಸ್ ಹಾಲ್‌ನಲ್ಲಿ) ಯಶಸ್ವಿಯಾಗಿ ಸಿಐಟಿಯು 3ನೇ ಧಾರವಾಡ ಜಿಲ್ಲಾ ಸಮ್ಮೇಳನ ನಡೆಯಿತು. ಜಿಲ್ಲಾ ಗೌರವಾಧ್ಯಕ್ಷ ಕಾಂ॥ ಆರ್.ಎಚ್.ಆಯಿ ಅವರು ಸಿಐಟಿಯು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನ ಪ್ರಾರಂಭವಾಗಿ, ಹುತಾತ್ಮ ಸಂಗಾತಿಗಳಿಗೆ ಗೌರವಾವಂದನೆ ಸಲ್ಲಿಸಿದರು.

ಕೆ.ಮಹಾಂತೇಶ್ ರವರು ಮುಂದುವರಿದು ಮಾತನಾಡುತ್ತಾ, "ದೇಶದಲ್ಲಿ ಉದ್ಯೋಗ ಬೇಡಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗ ಬೇಡಿಕೆ ಇದೆ. 2014ರಲ್ಲಿ ಕೇವಲ 8 ಲಕ್ಷ ಉದ್ಯೋಗ ಸೃಷ್ಠಿಮಾಡಲಾಗಿದೆ. ಸೃಷ್ಠಿಯಾದ ಅಲ್ಪಪ್ರಮಾಣದ ಈ ಉದ್ಯೋಗಗಳು ಅಭದ್ರತೆಯಿಂದ ಕೂಡಿವೆ. ಕಾರ್ಪೋರೇಟ್ ಪರ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳಿಂದ ಮತ್ತು ಬೆಲೆ ಏರಿಕೆಯಿಂದ ಕಾರ್ಮಿಕರು ಇನ್ನಷ್ಟು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಇನ್ನೊಂದಡೆ ಬೇಳೆಕಾಳುಗಳ ಬೆಲೆ ರೂ. 200ಕ್ಕೇರಿದೆ. ಬೇಳೆಕಾಳು ಬೆಳೆಯುವ ರೈತರನ್ನು ಉತ್ತೇಜಿಸಬೇಕಾದ ಕೇಂದ್ರ ಸರಕಾರ ಆಫ್ರಿಕಾದಲ್ಲಿ ಜಮೀನು ಗುತ್ತಿಗೆ ಪಡೆದು ಅಲ್ಲಿ ಬೆಳೆದ ಬೇಳೆಕಾಳುಗಳನ್ನು ದೇಶಕ್ಕೆ ರಫ್ತು ಮಾಡಿಕೊಳ್ಳಲು ಕೇಂದ್ರ ಸಂಪುಟ ನಿರ್ಧರಿಸಿರುವುದು ಹಾಸ್ಯಾಸ್ಪದ" ಎಂದರು.

ಪ್ರಸ್ತಾವಿಕವಾಗಿ ಮಾತನಾಡಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಕಾರ್ಮಿಕರ 12 ಅಂಶದ ಬೇಡಿಕೆಗಳು ಹಾಗೂ ರಾಜ್ಯ ಸರಕಾರದ ಕಾರ್ಮಿಕರ ಕುರಿತು ವಹಿಸಿರುವ ನಿಷ್ಕಾಳಜಿ ವಿರುದ್ಧ ಸೆಪ್ಟೆಂಬರ್–02 ರಂದು ನಡೆಯುವ ದೇಶದ ಕಾರ್ಮಿಕ ವರ್ಗದ ಮತ್ತೊಂದು ಮಹಾಮುಷ್ಕರವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಜಿಲ್ಲೆಯ ದುಡಿಯುವ ಜನರನ್ನು ಸನ್ನದ್ದರನ್ನಾಗಿಸುವ ಜವಾಬ್ದಾರಿ ನಮ್ಮ ಮುಂದಿದೆ ಎಂದರು.

ರಾಜ್ಯ ಉಪಾಧ್ಯಕ್ಷ ಹರೀಶ ನಾಯ್ಕ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಜಿಲ್ಲಾಧ್ಯಕ್ಷ ಬಿ.ಐ.ಈಳಿಗೇರ ಅಧ್ಯಕ್ಷತೆ ವಹಿಸಿದ್ದರು. ನಾಗರಾಜ ನೆರೆಗಲ್ ಸ್ವಾಗತಿಸಿದರು. ಪ್ರವೀಣ ಶಿವಶಿಂಪರ ವಂದಿಸಿದರು. ಎಐಟಿಯುಸಿ ಜಿಲ್ಲಾಧ್ಯಕ್ಷ ಎನ್.ಎ.ಖಾಜಿ, ಬಿಎಸ್‌ಎನ್‌ಎಲ್‌ಇಯುನ ಹರೀಶ ದೊಡ್ಡಮನಿ, ಪೌರಕಾರ್ಮಿಕರ ಸಂಘದ ವಿಜಯ ಗುಂಟ್ರಾಳ, ಕೆಪಿಆರ್‌ಎಸ್‌ನ ಕೆ.ಎಚ್.ಪಾಟೀಲ ಶುಭಕೋರಿ ಮಾತನಾಡಿದರು. ಗದಗ ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಮಾರುತಿ ಚಿಟಗಿ, ವಕೀಲರ ಸಂಘದ ಬಸವರಾಜ ಕೋರಿಮಠ, ಹಾವೇರಿ ಜಿಲ್ಲಾ ಸಂಚಾಲಕ ವಿನಾಯಕ ಕುರಬರ ಉಪಸ್ಥಿತರಿದ್ದರು.



ಪ್ರತಿನಿಧಿ ಅಧಿವೇಶನ:

ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಮಂಡಿಸಿದ ವರದಿ ಆಧಾರದಲ್ಲಿ ಗ್ರಾಮ ಪಂಚಾಯತ್, ಹಮಾಲಿ, ಔಷಧಿ ಪ್ರತಿನಿಧಿಗಳ, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘದ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ನಂತರ ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಲಾಯಿತು.

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು:

1. ಮಹದಾಯಿ ಕಳಸಾ–ಬಂಡೂರಿ ನೀರಿಗಾಗಿ ಕಳೆದ ಒಂದು ವರ್ಷದಿಂದ ಈ ಭಾಗದಲ್ಲಿ ನಡೆಯುತ್ತಿರುವ ಜನಚಳುವಳಿಗೆ ಬೆಂಬಲ. ಸಮಸ್ಯೆಯನ್ನು ಇತ್ಯರ್ಥಪಡಿಸಲು ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಲು ಆಗ್ರಹ.
2. 12 ಅಂಶದ ಬೇಡಿಕೆಗಳಿಗಾಗಿ ಒತ್ತಾಯಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಸೆಪ್ಟೆಂಬರ್–02 ರಾಷ್ಟ್ರವ್ಯಾಪಿ ಕಾರ್ಮಿಕರ ಮಹಾಮುಷ್ಕರವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸುವುದು. ಕೈಗಾರಿಕಾ ಪ್ರದೇಶಗಳಲ್ಲಿ ಮತ್ತು ಗ್ರಾಮೀಣ ಅಸಂಘಟಿತ ಕಾರ್ಮಿಕರ ಮಧ್ಯೆ ವ್ಯಾಪಕ ಪ್ರಚಾರ ನಡೆಸುವುದು.
3. 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ರಾಷ್ಟ್ರವ್ಯಾಪಿ ಸಮಾನ ಕನಿಷ್ಟ ವೇತನ ರೂ. 18 ಸಾವಿರ ನಿಗದಿ ಮಾಡಬೇಕು.
4. ತೀವ್ರ ಕೃಷಿ ಬಿಕ್ಕಟ್ಟಿನಿಂದಾಗಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳನ್ನು ತಡೆಯಲು ಸೂಕ್ತ ಕ್ರಮವಹಿಸಲು ಆಗ್ರಹ.
5. ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಸರಕಾರವೇ ಭವಿಷ್ಯ ನಿಧಿ ಜಾರಿಮಾಡಿ ಆ ಮುಖಾಂತರ ಪಿಂಚಣಿ ನೀಡಲು ಆಗ್ರಹ.
6. ಕಾರ್ಪೋರೇಟ್ ಪರ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳನ್ನು ಕೈಬಿಡಲು ಹಾಗೂ ಈಗಿರುವ ಕಾರ್ಮಿಕ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಮಾಡಲು ಒತ್ತಾಯ.
7. ಹುಬ್ಬಳ್ಳಿ ಎಪಿಎಂಸಿಯಲ್ಲಿ ಹಮಾಲರಿಗಾಗಿ ಕಾಯ್ದಿರಿಸಿದ ನಿವೇಶನಗಳಲ್ಲಿ ವಸತಿ ಯೋಜನೆ ಜಾರಿಮಾಡಲು ಒತ್ತಾಯ.

ವರದಿ: ಮಹೇಶ ಪತ್ತಾರ

ವಿಕಾಸ ಪರ್ವ ಅಲ್ಲ ವಿನಾಶ ಪರ್ವ: ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಷಣ ಮಾಡಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿರವರು "ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಜನತೆಯ ಮೇಲೆ ತಡೆಯೇ ಇಲ್ಲದೇ ನಿರಂತರವಾದ ಆರ್ಥಿಕ ಹೊರೆ, ಅಭದ್ರತೆಯ ಉದ್ಯೋಗಗಳ ಸೃಷ್ಠಿ, ಗೌರವದಿಂದ ಬದುಕಲು ಬೇಕಾದ ವೇತನ ಸಿಗದೇ ಇರುವುದು, ಆಳಗೊಳ್ಳುತ್ತಿರುವ ತೀವ್ರ ಕೃಷಿ ಬಿಕ್ಕಟ್ಟು ಹಾಗೂ ಕಲ್ಯಾಣ ಕಾರ್ಯಕ್ರಮಗಳ ಅನುದಾನ ಕಡಿತದಿಂದಾಗಿ ರೈತ ಕಾರ್ಮಿಕರು ಹಾಗೂ ಜನಸಾಮಾನ್ಯರು ತೀವ್ರ ಸಂಕಷ್ಟಕ್ಕೀಡಾಗಿದ್ದು ಈ ವಿಶಾಲ ಜನತೆಗೆ ಕಿಂಚಿತ್ತಾದರೂ ಪರಿಹಾರ ಒದಗಿಸಲು ಕೇಂದ್ರದ ನರೇಂದ್ರ ಮೋದಿ ಸರಕಾರದ ನೀತಿಗಳು ವಿಫಲವಾಗಿದ್ದು ಖಂಡಿತ ಇದು ವಿಕಾಸ ಪರ್ವ ಅಲ್ಲ ಇದು ವಿನಾಶ ಪರ್ವ" ಎಂದು ಹೇಳಿದರು.

ಕೇಂದ್ರದ ನರೇಂದ್ರ ಮೋದಿ ಸರಕಾರ ಭಾಜಾಭಜಂತ್ರಿಯೊಂದಿಗೆ ಘೋಷಿಸಲಾದ ಆರ್ಥಿಕ ನೀತಿಗಳು ಮತ್ತು ಘೋಷಣೆಗಳು ಕಾರ್ಪೋರೇಟ್ ತಿಮಿಂಗಲುಗಳಿಗೆ ದೇಶವನ್ನು ಲೂಟಿಮಾಡಲು ಅವಕಾಶ ಮಾಡಿಕೊಟ್ಟಿವೇ ಹೊರತು ದೇಶದ ಕಾರ್ಮಿಕರಿಗೆ ಯಾವುದೇ ನ್ಯಾಯ ನೀಡಿಲ್ಲ. ಇದರಿಂದ "ಅಚ್ಛಾದಿನ್" ಅಸಲಿ ಮುಖವಾಡ ಬಯಲಾಗಿದೆ. ಸ್ವದೇಶಿ ಹಾಗೂ ದೇಶಪ್ರೇಮದ ವಾರಸುದಾರರಂತೆ ವರ್ತಿಸುವ ಹಾಗೂ ಬಿಜೆಪಿ ಸರಕಾರಕ್ಕೆ ಮಾರ್ಗದರ್ಶಕವಾಗಿರುವ ಆರ್‌ಎಸ್‌ಎಸ್ ಬಾಯಿ ಮುಚ್ಚಿಕೊಂಡಿರುವುದು ಏಕೆ ಎಂದು ಪ್ರಶ್ನಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಐಟಿಯು ಜಿಲ್ಲಾ ಗೌರವಾಧ್ಯಕ್ಷ ಬಿ.ಎನ್.ಪೂಜಾರಿ ರಾಜ್ಯದ ಸಿದ್ದರಾಮಯ್ಯ ಸರಕಾರ ಆಂತರಿಕ ರಾಜಕೀಯ ಕಚ್ಚಾಟದಲ್ಲಿ ಜನತೆಯ ಪ್ರಶ್ನೆಗಳ ಬಗ್ಗೆ ಕಾಳಜಿ ವಹಿಸಲು ಆಶಕ್ತಿಯನ್ನು ಕಳೆದುಕೊಂಡು ರಾಜ್ಯದ ದುಡಿಯುವ ಜನತೆಗೆ ದ್ರೋಹ ಬಗೆದಿದೆ ಎಂದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ಜಿಲ್ಲಾಧ್ಯಕ್ಷರಾದ ಬಿ.ಐ.ಈಳಿಗೇರ, ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ, ನಾಗರಾಜ ನೆರೆಗಲ್, ಹನಮಂತ ಜಾಲಗಾರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗುರುಸಿದ್ದಪ್ಪ ಅಂಬಿಗೇರ ವಂದಿಸಿದರು.

ಹೋರಾಟದ ಹೆಜ್ಜೆಗಳು ಚಿತ್ರ ಪ್ರದರ್ಶನ: ಕಳೆದ ಅವದಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ನಡೆಸಿದ ಹೋರಾಟ ಕಾರ್ಯಕ್ರಮಗಳ ಚಿತ್ರ ಪ್ರದರ್ಶನವನ್ನು ಸಮ್ಮೇಳನ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು.

ಸಿಐಟಿಯು ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ:

ಸಿಐಟಿಯು 3ನೇ ಧಾರವಾಡ ಜಿಲ್ಲಾ ಸಮ್ಮೇಳನವು ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆಮಾಡಿತು. ಗೌರವಾಧ್ಯಕ್ಷರಾಗಿ ಬಿ.ಎನ್.ಪೂಜಾರಿ ಅಧ್ಯಕ್ಷರಾಗಿ ಬಿ.ಐ.ಈಳಿಗೇರ, ಉಪಾಧ್ಯಕ್ಷರುಗಳಾಗಿ ಆರ್. ಎಚ್.ಆಯಿ, ಹನಮಂತ ಜಾಲಗಾರ, ಮನೋಜ ತೋರಣಗಲ್, ರಮೇಶ ಲಮಾಣಿ, ಬಸವಣ್ಣೆಪ್ಪ ನೀರಲಗಿ, ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ ಪತ್ತಾರ, ಕಾರ್ಯದರ್ಶಿಗಳಾಗಿ ಪ್ರವೀಣಕುಮಾರ ಶಿವಶಿಂಪಗೇರ, ನಾಗರಾಜ ನರೇಗಲ್, ಕಲ್ಲನಗೌಡ ಮಣ್ಣೂರ, ಹುಸೇನಸಾಬ ನದಾಫ್, ಸಹ ಕಾರ್ಯದರ್ಶಿಗಳಾಗಿ ಮಂಜುನಾಥ ಹುಜರಾತಿ, ಪುಷ್ಪಾ ಗಾರಗೆ, ರಾಜು ಕೊಟಗಿ, ರವಿ ಚೆನ್ನಾಪೂರ ಹಾಗೂ ಖಜಾಂಚಿಯಾಗಿ ಗುರುಸಿದ್ದಪ್ಪ ಅಂಬಿಗೇರ ಆಯ್ಕೆಯಾದರು.

ಸಿಐಟಿಯು ಧಾರವಾಡ ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ:


ಅಧ್ಯಕ್ಷರು: ಬಿ.ಐ.ಈಳಿಗೇರ


ಪ್ರಧಾನ ಕಾರ್ಯದರ್ಶಿ: ಮಹೇಶ ಪತ್ತಾರ


ಖಜಾಂಚಿ: ಗುರುಸಿದ್ದಪ್ಪ ಅಂಬಿಗೇರ

ಎಂಡೋ ಸಲ್ಫಾನ್ ಬಾಧಿತ ಅಂಗವಿಕಲರಿಂದ ಪಿಂಚಣಿ ಬಿಡುಗಡೆಗೆ ಒತ್ತಾಯಿಸಿ

ಬೈಂದೂರು ವಿಶೇಷ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ



ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ, ನವದೆಹಲಿ (ಓಕಖಿಆ) ಗೆ ಸಂಯೋಜಿತ, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ, ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಎಂಡೋಸಲ್ಫಾನ್ ಬಾಧಿತ ಅಂಗವಿಕಲರಿಗೆ ತಡೆಹಿಡಿದ ಪಿಂಚಣಿಯನ್ನು ಶೀಘ್ರ ಬಿಡುಗಡೆಗೆ ಒತ್ತಾಯಿಸಿ ಜೂನ್ 21ರಂದು ಉಡುಪಿ ಜಿಲ್ಲೆಯ ಬೈಂದೂರು ವಿಶೇಷ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ ನಡೆಯಿತು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಉಡುಪಿ ಜಿಲ್ಲಾ ಗೌರವ ಅಧ್ಯಕ್ಷ ವೆಂಕಟೇಶ ಕೋಣಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ "ಎಂಡೋಸಲ್ಫಾನ್ ಪೀಡಿತರಾಗಿ ಹಾಸಿಗೆ ಹಿಡಿದಿರುವ ಯುವಕ – ಯುವತಿಯರಿಗೆ ಆರೈಕೆ ದೂಡುವ ದೊಡ್ಡಭಾರ ಕುಟುಂಬಗಳ ಮೇಲೆ ಇದೇ. ಕುಟುಬಂದ ಹಿರಿಯರು ಸಾವಿಗೀಡಾದರೆ ಎಂಡೋಪೀಡಿತರಿಗೆ ದಿಕ್ಕಿಲ್ಲದಂತಹ ಪರಿಸ್ಥಿತಿ ನಿರ್ಮಾಣಗೊಳ್ಳಲಿದೆ, ಆದ್ದರಿಂದ ಎಂಡೋಸಲ್ಫಾ಼ ಸಂತ್ರಸ್ತರ ಅನುಕೂಲಕ್ಕಾಗಿ ಶಾಶ್ವತ ಎಂಡೋಪಾಲನ ಕೇಂದ್ರ ಸ್ಥಾಪಿಸಬೇಕು ಎಂಡೋ ಸಂತ್ರಸ್ತರ ಪುನರ್ವಸತಿ ಆರೋಗ್ಯ ರಕ್ಷಣೆ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಅಂಗವಿಕಲರ ಹಾಗೂ ತಾಲೂಕು ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜುನಾಥ ಹೆಬ್ಬಾರ್ ತಾಲೂಕು ಪ್ರಧಾನ ಕಾರ್ಯದರ್ಶಿ ಕೃಷ್ಣ ಪೂಜಾರಿ ಕೋಟೇಶ್ವರರವರು ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದರು.

ಎಂಡೋಸಲ್ಫಾನ್ ಬಾಧಿತ ಅಂಗವಿಕಲರಿಗೆ ಕಳೆದ ಹಲವು ತಿಂಗಳಿಂದ ತಡೆಹಿಡಿದ ಪಿಂಚಣಿ ಸೌಲಭ್ಯವನ್ನು ಕೂಡಲೇ ಬಿಡುಗಡೆ ಮಾಡಲು ಒತ್ತಾಯಿಸಿ ಮಾನ್ಯ ವಿಶೇಷ ತಹಶೀಲ್ದಾರ ರವರಿಗೆ ಸಾಮೂಹಿಕ ಮನವಿ ಅರ್ಪಿಸಲಾಯಿತು. ಅಂಗವಿಕಲರ ಒಕ್ಕೂಟದ ಮುಂಖಂಡರಾದ ರಾಧಕೃಷ್ಣ ಬೈಂದೂರು, ಮೂಕಾಂಟು ಯಡ್ತರೆ, ದೀಪಾ ಕಾಲ್ತೋಡು ಉಪಸ್ಥಿತರಿದ್ದರು.

ಸಮಾವೇಶ :

ಜೂನ್ 18ರಂದು ಬೈಂದೂರು ಸಿಐಟಿಯು ಕಛೇರಿ ಸಭಾಂಗಣದಲ್ಲಿ ಬೈಂದೂರು ಪಡುವರಿ, ತಗ್ಗರ್ಸೆ, ಯಡ್ತರೆ, ಗ್ರಾಮಗಳ ವ್ಯಾಪ್ತಿಯ ಎಂಡೋಸಲ್ಫಾನ್ ಬಾಧಿತ ಅಂಗವಿಕಲರ ಹಾಗೂ ಪಾಲಕರ ಬೃಹತ್ ಸಮಾವೇಶವನ್ನು ಸಂಘಟಿಸಲಾಗಿತ್ತು, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜುನಾಥ ಹೆಬ್ಬಾರ್ ಕಾಲ್ತೋಡು, ವೆಂಕಟೇಶ್ ಕೋಣಿ, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಸುರೇಶ ಕಲ್ಲಾಗರ ಮತ್ತು ಒಕ್ಕೂಟದ ಮುಖಂಡರಾದ ರಾಧಾಕೃಷ್ಣ ಬೈಂದೂರು, ಮೂಕಾಂಬು ಯಡ್ತರೆ, ಅನಿತಾ ಪಡುವರಿ, ದೀಪ ಕಾಲ್ತೋಡು ಮುಂತಾದವರು ಸಮಾವೇಶದಲ್ಲಿ ಉಪಸ್ಥಿತರಿದ್ದರು.

ವರದಿ: ವೆಂಕಟೇಶ್ ಕೋಣಿ

ಬೆಳ್ತಂಗಡಿಯಲ್ಲಿ ಕಟ್ಟಡ ಕಾರ್ಮಿಕರ ಧರಣಿ:

ಕಲ್ಯಾಣ ಮಂಡಳಿಯ ನಿಷ್ಕ್ರಿಯತೆಗೆ ಪ್ರತಿಭಟನೆ



ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ವಂತಿಗೆ ಹಣ, ಸವಲತ್ತುಗಳನ್ನು ನುಂಗುವ ದರೋಡೆಗಾರರು ಕಾರ್ಮಿಕ ಇಲಾಖೆಯ ಒಳಗೇ ಇದ್ದಾರೆ, ನಮ್ಮನ್ನಾಳುವ ಸರಕಾರಗಳು ಗೊತ್ತಿದ್ದು ಗೊತ್ತಿಲ್ಲದಂತೆ ವರ್ತಿಸುತ್ತಿದೆ, ಇದ–ರಿಂದ ಕಾರ್ಮಿಕರಿಗೆ ಸವಲತ್ತುಗಳು ಬರುತ್ತಿಲ್ಲ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಢರೇಶನ್ ನ ದ.ಕ. ಜಿಲ್ಲಾ ಅಧ್ಯಕ್ಷರಾದ ನ್ಯಾಯವಾದಿ ಬಿ.ಎಂ.ಭಟ್ ಆರೋಪಿಸಿದರು.

ಅವರು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಕಟ್ಟಡ ಕಾರ್ಮಿಕರು ನಡೆಸುತ್ತಿರುವ ಜೂನ್ 21ರಿಂದ ಅನಿರ್ಧಿಷ್ಟಾವಧಿ ಧರಣಿ ಹಮ್ಮಿಕೊಂಡಿರುವ ಕಾರ್ಮಿಕರನ್ನು ಉದ್ದೇಶಿಸಿ ಮಾತಾಡುತ್ತದ್ದರು. ಕಟ್ಟಡ ಕಾರ್ಮಿಕರು ಕಲ್ಯಾಣ ಮಂಡಳಿಗೆ ಸದಸ್ಯರಾಗಿ ನ್ಯಾಯ ಬದ್ದ ವಂತಿಗೆ ಹಣ ಪಾವತಿ ಮಾಡುತ್ತಿದ್ದರೂ, ಅವರ ಮಕ್ಕಳ ಸ್ಕಾಲರ್‌ಶಿಪ್ ಆಗಲಿ, ಆರೋಗ್ಯ ಸಹಾಯವಾಗಲಿ, ಮದುವೆ ಸಹಾಯವಾಗಲಿ, ಮರಣ ನಿಧಿಯಾಗಲಿ ಯಾವುದೂ ಬಾರದೆ ಕಲ್ಯಾಣ ಮಂಡಳಿ ಕೇವಲ ಕಾರ್ಮಿಕರಿಂದ ವಂತಿಗೆ ವಸೂಲು ಮಾಡುವ ಕೇಂದ್ರವಾಗಿದೆ ಎಂದು ಟೀಕಿಸಿದರು.

ಆರೋಗ್ಯಕ್ಕೆ ಒಳ್ಳೆಯದಲ್ಲದ ಆಹಾರ ಸೇವಿಸಿ ಮದ್ದಿಗಾಗಿ ಡಾಕ್ಟರಲ್ಲಿಗೆ ಹೋಗುವಂತೆ ಜನತೆ ನಮ್ಮ ಬದುಕಿಗೆ ಆತಂಕ ತರುವ ಬಿಜೆಪಿ–ಕಾಂಗ್ರೆಸ್ಸಿಗರನ್ನು ಗೆಲ್ಲಿಸಿ ಸಮಸ್ಯೆ ಬಂದಾಗ ಕಮ್ಯೂನಿಷ್ಟರ ಬಳಿಗೆ ಬರುತ್ತಿದ್ದಾರೆ. ಇಂತಹ ಜನವಿರೋಧಿ ಪಕ್ಷಗಳೇ ನಮ್ಮ ಸವಲತ್ತುಗಳು ಬಾರದಿರಲು ಮುಖ್ಯ ಕಾರಣ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕು ಎಂದರು.

ಸಂಘಟನೆಯ ತಾಲೂಕು ಕಾರ್ಯದರ್ಶಿ ವಸಂತ ನಡ ಅವರು ಮಾತಾಡುತ್ತಾ ಕಟ್ಟಡ ಕಾರ್ಮಿಕರಿಗೆ ಅನ್ಯಾಯ ಮಾಡಬೇಡಿ, ಎಲ್ಲರಿಗೂ ನೆರಳು ಕೊಡುವ ನಮ್ಮ ಮೇಲೆ ಸವಾರಿ ಮಾಡಿದರೆ ನಾವು ಸುಮ್ಮನಿರುವುದಿಲ್ಲ ಎಂದರು. ಬೀಡಿ ಕಾರ್ಮಿಕರಿಗೆ ಅನ್ಯಾಯ ಮಾಡಿದ ಕಾರ್ಮಿಕ ಮಂತ್ರಿ ಪರಮೇಶ್ವರ ನಾಯ್ಕ ಹೋದರೂ ಸಂತೋಷ್ ಲಾಡ್ ರಂತಹ ಕಾರ್ಮಿಕ ವಿರೋಧಿಗಳು ಕಾರ್ಮಿಕ ಮಂತ್ರಿಗಳಾದರೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಜೂನ್ 27, ಸೋಮವಾರದಿಂದ ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟ ಧರಣಿ ನಡೆಸಲಿದ್ದೇವೆ ಎಂದು ಅವರು ಎಚ್ಚರಿಸಿದರು. ತಾಲೂಕಿನ ಸಮಸ್ತ ಕಟ್ಟಡ ಕಾರ್ಮಿಕರು ಧರಣಿ ಸತ್ಯಾಗ್ರಹಕ್ಕೆ ದೊಡ್ಡ ಸಂಖ್ಯೆಯಲ್ಲಿ ಬಂದು ಸಹಕರಿಸಬೇಕೆಂದು ಕರೆ ನೀಡಿದರು.

ಕಾರ್ಮಿಕ ಇಲಾಖೆಯ ಪರವಾಗಿ ಕಾರ್ಮಿಕ ವೃತ್ತ ನಿರೀಕ್ಷಕರು ಆಗಮಿಸಿ ಒಂದು ವಾರದ ಒಳಗೆ ಎಲ್ಲಾ ಸವಲತ್ತುಗಳನ್ನು ಒದಗಿಸುವುದಾಗಿಯೂ, ಉಳಿದ ಸಮಸ್ಯೆಗಳನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿಯೂ ತಿಳಿಸಿದರು.

ಈ ಸಂದರ್ಭದಲ್ಲಿ ಧರಣಿ ನಿರತರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಸಮಿತಿ ಸದಸ್ಯೆ ಈಶ್ವರಿ ಪದ್ಮುಂಜ, ಆಶಾ ಜಿಲ್ಲಾ ಕಾರ್ಯದರ್ಶಿ ದೇವಕಿ ಕಳೆಂಜ ಮಾತಾಡಿದರು. ಸಿಐಟಿಯು ಮುಖಂಡರುಗಳಾದ ಜಯರಾಮ ಮಯ್ಯ, ನೆಬಿಸಾ, ಜಯಶ್ರೀ, ಇಂದಿರಾ, ಮೀನಾಕ್ಷಿ, ಪುಷ್ಪಾ, ಕುಸುಮಾವತಿ, ಕುಮಾರಿ, ರಾಮಚಂದ್ರ ಮೊದಲಾದವರು ಉಪಸ್ಥಿತರಿದ್ದರು. ಮೊದಲಿಗೆ ಲೋಕೇಶ್ ಕುದ್ಯಾಡಿ ಸ್ವಾಗತಿಸಿ ಕೊನೆಗೆ ವಂದಿಸಿದರು.

ವರದಿ: ಬಿ.ಎಂ.ಭಟ್

ಖಾಸಗಿ ಶಾಲಾ ವಾಹನಗಳ ಸೇಫ್ಟಿ ಲಾಕರ್ ತಪಾಸಣೆಗೆ

ಎಸ್‌ಎಫ್‌ಐ–ಡಿವೈಎಫ್‌ಐ ಆಗ್ರಹ

ಜೂನ್ 21ರಂದು ಬೆಳಿಗ್ಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೋವಾಡಿ ಕ್ರಾಸ್ ಪ್ರದೇಶದಲ್ಲಿ ನಡೆದ ದುರಂತದಲ್ಲಿ ಶಾಲಾಮಕ್ಕಳನ್ನು ಹೊತ್ತೊಯ್ಯುತ್ತಿದ್ದ ಖಾಸಗಿ ಓಮ್ನಿಯು ಬಸ್‌ಗೆ ಡಿಕ್ಕಿ ಹೊಡೆದ ಹೃದಯವಿದ್ರಾವಕ ಘಟನೆಯು ಕುಂದಾಪುರ ಪರಿಸರದಲ್ಲಿ ನಡೆಯಿತು. ಈ ಕಾರಿನಲ್ಲಿ ಸುಮಾರು 17 ಮಕ್ಕಳು ಮತ್ತು ಚಾಲಕ ಹಾಗೂ ಶಿಕ್ಷಕಿಯನ್ನು ಹೊತ್ತೊಯ್ಯುತ್ತಿದ್ದ ಖಾಸಗಿ ವಾಹನವು ಬಸ್ ಒಂದಕ್ಕೆ ಡಿಕ್ಕಿ ಹೊಡೆದು ಕನಿಷ್ಟ 8 ಮಕ್ಕಳು ಅಪಘಾತದಲ್ಲಿ ಮಡಿದಿರುತ್ತಾರೆ ಹಾಗೂ ಇನ್ನೂ ಹಲವರ ಸ್ಥಿತಿ ಗಂಭೀರವಾಗಿದೆ. ಇಂತಹ ಹಲವಾರು ಖಾಸಗಿ ವಾಹನಗಳ ಮೂಲಕ ಕುಂದಾಪುರ ತಾಲೂಕಿನಾದ್ಯಂತ ಖಾಸಗಿ ಶಾಲೆಗಳ ವಾಹನಗಳಲ್ಲಿ ಮೀಸಲಿರುವ ಸೀಟುಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ತುಂಬಿಸಿಕೊಂಡು ಹೋಗಿರುವುದೇ ಇಂತಹ ದುರಂತಗಳಿಗೆ ಕಾರಣ.

ಆರ್‌ಟಿಓ ಇಲಾಖೆ ಹಾಗೂ ಸಂಚಾರಿ ಪೋಲೀಸ್ ಇಲಾಖೆಯು ಇಂತಹ ವಾಹನಗಳನ್ನು ತಪಾಸಣೆ ನಡೆಸಿ ಮುಂದೆ ನಡೆಯುವ ದುರಂತಗಳನ್ನು ತಪ್ಪಿಸಬೇಕು. ಸಾರಿಗೆ ಸಹಕಾರಿ ಸಂಸ್ಥೆ ಮತ್ತು ಸಂಚಾರಿ ಠಾಣಾ ಪೋಲೀಸರ ದಿವ್ಯ ನಿರ್ಲಕ್ಷವೇ ಈ ದುರ್ಘಟನೆಗೆ ಕಾರಣ ಮತ್ತು ಖಾಸಗಿ ಶಾಲೆಗಳು ಸಹಾ ವಿದ್ಯಾರ್ಥಿಗಳು ಬರುವ ವಾಹನಗಳ ಬಗ್ಗೆ ಗಮನ ಹರಿಸದಿರುವುದು ಮತ್ತು ಶಿಕ್ಷಣ ಸಂಸ್ಥೆಗಳ ವ್ಯಾಪಾರೀಕರಣ ದೃಷ್ಟಿಯಿಂದ ನೋಡದೇ ಈ ಮುದ್ದು ಮಕ್ಕಳ ಕಡೆಗೆ ಗಮನ ಹರಿಸಬೇಕಾಗಿದೆ. ಹಾಗಿದ್ದೂ ಇಂತಹ ದುರ್ಘಟನೆಗಳು ಪುನಃ ಪುನಃ ಮರುಕಳಿಸುತ್ತಿದೆಯಾದರೂ ಸಂಬಂಧಪಟ್ಟ ಇಲಾಖೆಗಳು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಡಿವೈಎಫ್‌ಐ ಹಾಗೂ ಎಸ್‌ಎಫ್‌ಐ ಸಂಘಟನೆಯ ಕುಂದಾಪುರ ಘಟಕಗಳು ಜಂಟಿಯಾಗಿ ತೀವ್ರತರವಾದ ಹೋರಾಟಕ್ಕೆ ಅಣಿಯಾಗುವುದಾಗಿ ಎಚ್ಚರಿಕೆ ನೀಡಿದೆ.


ಈ ವಾರ ಚರಿತ್ರೆಯಲ್ಲಿ

22 ಜೂನ್ 1941



ಹಿಟ್ಲರನ ಪಡೆಗಳು ಸೋವಿಯತ್ ಒಕ್ಕೂಟದೊಂದಿಗೆ ಮಾಡಿದ್ದ ಅನಾಕ್ರಮಣ ಒಪ್ಪಂದವನ್ನು ಮುರಿದು ಆ ದೇಶದ ಮೇಲೆ ಆಕ್ರಮಣ ಆರಂಭಿಸಿದವು. ಇದಕ್ಕೆ ಆತ ಕೊಟ್ಟ ಹೆಸರು 'ಆಪರೇಶನ್ ಬಾರ್ಬರೋಸ್'. ಇದು ಕಡು ಕಮ್ಯುನಿಸ್ಟ್–ದ್ವೇಷಿಯಾದ ಆತನಿಗೆ ಸೈದ್ಧಾಂತಿಕ ಸಮರವೂ ಆಗಿತ್ತು. ಅದೇ ರೀತಿ ಇತರ ಹಲವು ಪಾಶ್ಚಿಮಾತ್ಯ ದೇಶಗಳವರಿಗೂ. ಆದರೆ ಇದು ಆತನ ಮತ್ತು ನಾಝೀವಾದದ ಅಂತ್ಯದ ಆರಂಭವೂ ಆಗಿತ್ತು.

ಕ್ಯಾಸ್ಟ್ರೋ ಕಥೆ 16



ಫಲ್ಗೆನ್ಸಿಯೊ ಬಟಿಸ್ಟಾನ ವಿರುದ್ಧ ಸಮರ

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಫಿಡೆಲ್ ಮತ್ತು ಚೆ ಸುಮಾರು ಎರಡು ತಿಂಗಳು ಒಟ್ಟಾಗಿ ಜೈಲಿನಲ್ಲಿದ್ದರು. ಹೀಗಿರುವಾಗ ಒಮ್ಮೆ ಚೆ' ಒಂದು ಸಮಸ್ಯೆಯನ್ನು ಸೃಷ್ಟಿ ಮಾಡಿದರು. ಚೆ'ನನ್ನು ವಿಚಾರಣೆ ಮಾಡುವಾಗ ಅವರು "ನೀನು ಕಮ್ಯುನಿಸ್ಟಾ?" ಎಂದು ಕೇಳಿದರು. "ಹೌದು, ನಾನು ಕಮ್ಯುನಿಸ್ಟ್" ಎಂದುತ್ತರಿಸಿದರು. ಮೆಕ್ಸಿಕೋದ ಸುದ್ದಿ ಮಾಧ್ಯಮಗಳು ಇದನ್ನು ಬರೆಯಲು ಶುರು ಮಾಡಿದವು. ಇವರದು ಕಮ್ಯುನಿಸ್ಟ್ ಸಂಘಟನೆಯಾಗಿದ್ದು, ದಕ್ಷಿಣ ಅಮೇರಿಕಾ ಖಂಡದಲ್ಲಿ 'ಪ್ರಜಾಪ್ರಭುತ್ವವನ್ನು ಇಲ್ಲವಾಗಿಸಲು' ಪಿತೂರಿ ನಡೆಸಿದ್ದಾರೆಂದು, ಇನ್ನೂ ಏನೇನೋ ಆರೋಪಿಸಿದರು. ಅವರು ಚೆ'ನನ್ನು ನ್ಯಾಯಾಧೀಶರ ಬಳಿ ಕರೆದೊಯ್ದರು. ನ್ಯಾಯಾಧೀಶರು ವಿಚಾರಣೆ ನಡೆಸುವಾಗ ಚೆ ಮಾತನಾಡಿದ ವಿಚಾರಗಳು ಆ ಸಂದರ್ಭಕ್ಕೆ ಸೋಜಿಗವಾಗಿತ್ತು ಮತ್ತು ತೊಂದರೆ-ಯದ್ದಾಗಿತ್ತು. ರಷ್ಯಾದ ಸ್ಟಾಲಿನ್ ಕುರಿತು ವಿಮರ್ಶೆ ಮತ್ತು ವ್ಯಕ್ತಿ ಪೂಜೆಯ ಕುರಿತು ವಾದ ಮಾಡಲು ಶುರು ಮಾಡಿದರು. ಪೊಲೀಸರು, ಜಿಲ್ಲಾ ಅಟಾರ್ನಿ ಮತ್ತು ವಲಸೆ ಅಧಿಕಾರಿಗಳ ಜೊತೆ ಸ್ಟಾಲಿನ್‌ನ ತಪ್ಪುಗಳ[1] ಕುರಿತು ಚೆ' ಸೈದ್ಧಾಂತಿಕ ವಾದಗಳನ್ನು ಮಾಡತೊಡಗಿದರು. ಸಹಜವಾಗಿಯೇ ಸೋವಿಯಟ್ ಪಕ್ಷದ ಮಹಾಧಿವೇಶನ ಅಧಿಕೃತವಾಗಿ ಮಂಡಿಸಿದ ಹೇಳಿಕೆಗಳನ್ನು ಚೆ' ಅವಲಂಭಿಸಿದ್ದರು. ಆ ತಪ್ಪುಗಳನ್ನು ಹೇಳುತ್ತಲೇ ಚೆ ತಾನು ತಿಳಿದಿದ್ದ ರೀತಿಯಲ್ಲಿ ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಚಿಂತನೆಗಳನ್ನು ಸಮರ್ಥಿಸಿಕೊಂಡರು. ಈ ಪರಿಸ್ಥಿತಿಗಳನ್ನು ನಿಭಾಯಿಸಿದ್ದರ ಬಗ್ಗೆ ಫಿಡೆಲ್ ಹೇಳುವುದು ಹೀಗೆ: "ಆ ಸಮಯಕ್ಕೆ ಆತ ಅರ್ಜೆಂಟೈನ್, ಅದು ಗಂಡಾಂತರವಾಗಿತ್ತು. ಇಡೀ ಯೋಜನೆಯೇ ಅಪಾಯದಲ್ಲಿರುವ ಅಂತಹ ಹೊತ್ತಿನಲ್ಲಿ ಶತ್ರುವಿಗೆ ತಪ್ಪು ಮಾಹಿತಿ ನೀಡುವುದೇ ಉತ್ತಮವೆಂದು ಪ್ರಾಮಾಣಿಕವಾಗಿ ನಾನು ಭಾವಿಸುತ್ತೇನೆ. ಆದರೆ ಚೆ' ಕಮ್ಯುನಿಸ್ಟ್ ಸಾಹಿತ್ಯ ಗಾಥೆಯ ಪ್ರಭಾವಕ್ಕೆ ಅಷ್ಟೊಂದು ಗಾಢವಾಗಿ ಒಳಗಾಗಿದ್ದರು. ಆಗಿನ ತಂತ್ರಾತ್ಮಕ ದುರವಸ್ಥೆಗೆ ಚೆ'ನನ್ನು ದೂರಲು ಸಾಧ್ಯವಿಲ್ಲ." ಇದೇನೇ ಆದರೂ ಚೆ' ಫಿಡೆಲ್‌ರೊಂದಿಗೆ ಕ್ಯೂಬಾಕ್ಕೆ ಬರುವುದು ನಿಲ್ಲಲಿಲ್ಲ.

ಜೈಲುಗಳಿಂದ ಕೊನೆಯದಾಗಿ ಬಿಡುಗಡೆ ಆದವರು ಫಿಡೆಲ್ ಮತ್ತು ಚೆ. ಆ ಸಂದರ್ಭದಲ್ಲಿ ಕ್ಯೂಬನ್ ಖೈದಿಗಳ ಬಿಡುಗಡೆಗೆ ಲಾಝೆರೊ ಕಾರ್ಡೆನಾಝ್[2] (Lazaro Cardenas) ತೋರಿದಮುತುವರ್ಜಿ ಕ್ಯೂಬನ್ ಕ್ರಾಂತಿಗೆ ಸಹಕಾರಿಯಾಗಿತ್ತು. ಮೆಕ್ಸಿಕನ್ ಜನತೆಯ ಅಪಾರ ಗೌರವ ಹೊಂದಿದ್ದ ಇವರ ನಾಮಬಲ ಮತ್ತು ನೈತಿಕ ಅಧಿಕಾರದ ಮಧ್ಯಪ್ರವೇಶದಿಂದಾಗಿ ಜೈಲುಗಳ ಬಾಗಿಲು ಇವರ ಪಾಲಿಗೆ ತೆಗೆಯಲು ಸಹಕಾರಿಯಾಯಿತು.

ಚೆ'ಗೆ ಟ್ರಾಟ್‌ಸ್ಕಿಯ ಪ್ರಭಾವ ಇತ್ತೆಂಬ ವಾದಗಳಿಗೆ ಸಂಬಂಧಿಸಿ ಫಿಡೆಲ್ ಅಭಿಪ್ರಾಯ ಹೀಗಿದೆ : "ಚೆ'ಗೆ ಆಗಾಗಲೇ ರಾಜಕೀಯ ಶಿಕ್ಷಣವಿತ್ತು. ಮಾರ್ಕ್ಸ್, ಏಂಗೆಲ್ಸ್, ಲೆನಿನ್‌ರ ಸಿದ್ಧಾಂತಗಳ ಕುರಿತಾದ ಹಲವಾರು ಪುಸ್ತಕಗಳನ್ನು ಓದಿದ್ದರು. ಚೆ ಮಾರ್ಕ್ಸ್‌ವಾದಿಯಾಗಿದ್ದರು. ಟ್ರಾಟ್‌ಸ್ಕಿಯ ಬಗ್ಗೆ ಮಾತನಾಡಿದ್ದನ್ನು ನಾನೆಂದೂ ಕೇಳಿಲ್ಲ. ಮಾರ್ಕ್ಸ್‌ನನ್ನು ಮತ್ತು ಲೆನಿನ್‌ರನ್ನು ಸಮರ್ಥಿಸುತ್ತಿದ್ದರು. ಸ್ಟಾಲಿನ್‌ರನ್ನು ದೂಷಿಸುತ್ತಿದ್ದರು ಅಥವಾ ವ್ಯಕ್ತಿ ಪೂಜೆಯನ್ನು ಅಥವಾ ಸ್ಟಾಲಿನ್‌ರ ತಪ್ಪುಗಳನ್ನು ಟೀಕಿಸುತ್ತಿದ್ದರು. ಸ್ಟಾಲಿನ್‌ರ ಕೈಗಾರಿಕೀಕರಣ ಮತ್ತು ಅಂತಹ ಅಂಶಗಳನ್ನು ಸಕಾರಾತ್ಮಕವಾಗಿ ಗುರುತಿಸುತ್ತಿದ್ದರು. ಆದರೆ ಎಂದಿಗೂ ಟ್ರಾಟ್‌ಸ್ಕಿಯ ಬಗ್ಗೆ ಮಾತನಾಡಿದ್ದನ್ನು ನಾನು ಕೇಳಿಲ್ಲ".

ಹಾಗೆ ನೋಡಿದರೆ ಫಿಡೆಲ್ ಸಹ ಚೆ'ಗಿಂತಲೂ ಸ್ಟಾಲಿನ್ ಕುರಿತು ವಿಮರ್ಶಾತ್ಮಕವಾಗಿದ್ದರು. 1941 ರಲ್ಲಿ ಹಿಟ್ಲರ್‌ನ ಶಕ್ತಿಯುತ ಯುದ್ಧಯಂತ್ರದಿಂದ ಯುಎಸ್‌ಎಸ್‌ಆರ್ ಆಕ್ರಮಣಕ್ಕೆ ಒಳಗಾಗಲು ಸ್ಟಾಲಿನ್‌ರ ವೈಫಲ್ಯಗಳನ್ನೇ ಫಿಡೆಲ್ ಗುರುತಿಸುತ್ತಾರೆ. ಜರ್ಮನಿ ಮತ್ತು ಸೋವಿಯತ್ ನಡುವಿನ ಮೊಲೊಟೊವ್-ರಿಬ್ಬನ್‌ಟ್ರಾಪ್ ಒಪ್ಪಂದ ಆಗುವುದಕ್ಕೆ ಮುಖ್ಯವಾಗಿ ಸೋವಿಯತ್‌ನ್ನು ಸ್ಟಾಲಿನ್ ಸ್ವಯಂ ನಿಶ್ಯಸ್ತ್ರೀಕರಿಸಿಕೊಂಡ ನಡೆಯೇ ಕಾರಣವೆಂದು ಫಿಡೆಲ್ ಭಾವಿಸುತ್ತಾರೆ. ಅಧಿಕಾರದ ದುರ್ಬಳಕೆ, ದಮನ, ವೈಯಕ್ತಿಕ ಗುಣಗಳು, ವ್ಯಕ್ತಿಪೂಜೆ ಇಂತಹ ತಪ್ಪುಗಳನ್ನು ಸ್ಟಾಲಿನ್ ಮಾಡಿದರೆಂದು ಫಿಡೆಲ್ ಭಾವಿಸುತ್ತಾರೆ. ಅದೇ ಸಂದರ್ಭದಲ್ಲಿ ಅವರ ಸಕಾರಾತ್ಮಕ ಗುಣಗಳನ್ನು ಮುಖ್ಯವಾಗಿ, ದೇಶವನ್ನು ಕೈಗಾರಿಕೀಕರಿಸಿದ್ದನ್ನು, ಮಿಲಿಟರಿ ಕೈಗಾರಿಕೆಯನ್ನು ಸೈಬೀರಿಯಾಕ್ಕೆ ಸ್ಥಳಾಂತರಿಸಿದ್ದನ್ನು ಫಿಡೆಲ್ ಪ್ರಶಂಸಿಸುತ್ತಾರೆ.

ಸಿಯೆರ್ರಾ ಮೇಸ್ತ್ರಾ'ಕ್ಕೆ ಪಯಣ

"ನಾವು ನಮ್ಮ ಜನರಿಗೆ ಯಾವಾಗ ಹಸಿವಿನ ಸಮಸ್ಯೆಯಿಲ್ಲದ ಮತ್ತು ನಿರಂಕುಶತ್ವವಿಲ್ಲದ ಸ್ವಾತಂತ್ರ್ಯವನ್ನು ಮತ್ತು ಸೌಜನ್ಯಯುತ ಜೀವನವನ್ನು ತಂದುಕೊಡಲು ಸಾಧ್ಯವಾಗುತ್ತದೋ ಆಗ ಹಿಂದಿರುಗುತ್ತೇವೆ" ಎಂದು ಹೇಳಿ ಫಲ್ಗೆನ್ಸಿಯೊ ಬಟಿಸ್ಟಾನ ವಿರುದ್ಧ ಸಮರ ಸಾರಿ ಮೆಕ್ಸಿಕೋಗೆ ಹೊರಟಿದ್ದ ಫಿಡೆಲ್ ಮತ್ತು ಸಂಗಾತಿಗಳು ಹದಿನೇಳು ತಿಂಗಳ ನಂತರ ಹಿಂದಿರುಗಲು ತೀರ್ಮಾನಿಸಿದ್ದರು. ಈ ಕಾಲಾವಧಿ ಫಿಡೆಲ್ ಮತ್ತು ಸಂಗಾತಿಗಳ ಜೀವನದಲ್ಲಿ ಪ್ರಯಾಸದ, ಕಿರುಕುಳದ, ಅತ್ಯಂತ ದುಃಸ್ಥರದ ಅವಧಿಯದಾಗಿತ್ತು. ಇವರು ಎದುರಿಸಿದ ಎರಡು ಅತಿ ದೊಡ್ಡ ಸಮಸ್ಯೆಗಳೆಂದರೆ, ಯುದ್ಧಯಾನಕ್ಕೆ ತರಬೇತಿಯನ್ನು ನೀಡುವುದು ಮತ್ತು ಶಸ್ತ್ರಾಸ್ತ್ರಗಳು ಹಾಗೂ ದೋಣಿ ಖರೀದಸಲು ಹಣ ಹೊಂದಿಸುವುದು. ಇದನ್ನು ಮೆಕ್ಸಿಕನ್ ಪೊಲೀಸರ ನಿರಂತರ ಕಣ್ಗಾವಲು, ಬಟಿಸ್ಟಾನ ಏಜೆಂಟರ ಬೇಹುಗಾರಿಕೆ ಇತ್ಯಾದಿಗಳ ನಡುವೆ ಮಾಡಬೇಕಿತ್ತು.

ಅಂತೂ ಮೆಕ್ಸಿಕೋದ ಸಾಹಸ-ಸಮಸ್ಯೆಗಳು-ಗಂಡಾಂತರಗಳು ಮತ್ತು ತರಬೇತಿಯನ್ನು ಕೊನೆಗೊಳಿಸಿ ಕ್ಯೂಬಾದ ಕ್ರಾಂತಿಯ ಕನಸುಗಳನ್ನು ಹೊತ್ತು ಹೊರಡಲು ಫಿಡೆಲ್ ತಂಡ ಸಿದ್ಧವಾಯಿತು. ಐದು ದಿನಗಳ ಸಮುದ್ರ ಯಾನಕ್ಕೆ ಬೇಕಾದ ಒಂದು ದೋಣಿಯನ್ನು ಸಿದ್ಧಮಾಡಿಕೊಂಡರು. ಅದರ ಹೆಸರು ಗ್ರಾನ್ಮಾ. ಆದರೆ ಸಮುದ್ರದಲ್ಲಿ ದೋಣಿ ಹಾಯಿಸುವ ಪರಿಣಿತಿ ಯಾರಿಗೂ ಇರಲಿಲ್ಲ. ಅದಕ್ಕಾಗಿ ಹಲವು ಬಾರಿ ಖಾಲಿ ದೋಣಿಯನ್ನು ಸಮುದ್ರದಲ್ಲಿ ಹಾಯಿಸುವ ಅಭ್ಯಾಸವನ್ನು ನಡೆಸಿದರು. ಹಲವು ಬಾರಿ ಹಾಗೆ ಹಾಯಿಸಿ ಅಭ್ಯಾಸ ನಡೆಸಿದ ಆಧಾರದಲ್ಲಿ ಸಮುದ್ರವನ್ನು ಎಷ್ಟು ವೇಗದಲ್ಲಿ ದಾಟಿ ಕ್ಯೂಬಾವನ್ನು ತಲುಪಬಹುದೆಂದು ಲೆಕ್ಕಾಚಾರ ಮಾಡಿಕೊಂಡರು ಅಂತಹ ಲೆಕ್ಕಾಚಾರದ ಆಧಾರದಲ್ಲಿ ಕ್ಯೂಬಾವನ್ನು ತಲುಪಲು ಐದು ದಿನಗಳು ಬೇಕೆಂದು ಅವರು ತೀರ್ಮಾನಿಸಿಕೊಂಡರು. ಖಾಲಿ ದೋಣಿಯ ಈ ಲೆಕ್ಕಾಚಾರವೇನೋ ಸರಿಯಾಗೇ ಇತ್ತು.

1956 ನವೆಂಬರ್ 25 ರ ಮುಂಜಾನೆ ಕತ್ತಲಲ್ಲಿ 1 ಗಂಟೆಗೆ ಟಕ್ಸ್‌ಪಾನ್ ನದಿಯ ದಡದಿಂದ ಗ್ರಾನ್ಮಾ ಹೊರಟು ಸಮುದ್ರ ಪಥ ಹಿಡಿದಾಗ ಅದರಲ್ಲಿ ಇದ್ದದ್ದು 82 ಜನ ಕ್ರಾಂತಿಕಾರಿಗಳು. ಗ್ರಾನ್ಮಾದಲ್ಲಿ ಪ್ರಯಾಣಿಸಲು ಸಾಧ್ಯವಿದ್ದದ್ದು ಕೇವಲ 12 ಜನರಿಗೆ ಮಾತ್ರ! ಜೊತೆಗೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ತೈಲ ಮತ್ತು 82 ಜನರಿಗೆ ಆಹಾರ ಸಾಮಗ್ರಿಗಳನ್ನೂ ಇದರಲ್ಲಿ ತುಂಬಲಾಗಿತ್ತು. ದೋಣಿಯಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡುವಂತೆ ಅದರ ಮೇಲೆಲ್ಲಾ ಡೀಸೆಲ್ ಕ್ಯಾನ್‌ಗಳನ್ನು ತುಂಬಿಸಿಡಲಾಗಿತ್ತು. ಗ್ರಾನ್ಮಾದ ಡೀಸೆಲ್ ಟ್ಯಾಂಕ್‌ನ ಸಾಮರ್ಥ್ಯ 1200 ಗ್ಯಾಲನ್ ಆಗಿ-ತ್ತು. ಆದರೆ ಇವರಿಗೆ ಕ್ಯೂಬಾ ತಲುಪಲು 2000 ಗ್ಯಾಲನ್ ಬೇಕಾಗಿತ್ತು. ಇಂತಹ ವ್ಯವಸ್ಥೆಯಲ್ಲಿ ಒಂದು ಇಂಜಿನ್‌ನ ಸಹಾಯದಿಂದ ಎಷ್ಟು ಸಾಧ್ಯವೋ ಅಷ್ಟು ನಿಧಾನವಾಗಿ ದೋಣಿ ಪಯಣ ಆರಂಭಿಸಿತು. ಒಬ್ಬರಿಗೊಬ್ಬರು ಅಂಟಿಕೊಂಡಂತೆ, ಬಹುಶಃ ಒಬ್ಬರ ಮೇಲೊಬ್ಬರು ಕುಳಿತಂತೆ ಭಾಸವಾಗುವ ರೀತಿಯಲ್ಲಿ ಅವರ ಪ್ರಯಾಣ ಪ್ರಾರಂಭವಾಯಿತು. ಟಕ್ಸ್‌ಪಾನ್ ನದಿ ದಾಟಲು ಸುಮಾರು ಅರ್ಧ ತಾಸು ಹಿಡಿಯಿತು. ಮತ್ತೊಂದು ಅರ್ಧ ತಾಸು ಬಂದರನ್ನು ದಾಟಲು ಹಿಡಿಯಿತು. ಯಾರ ಕಣ್ಣಿಗೂ ಕಾಣದ ಹಾಗೆ ಬಂದದ್ದೇ ಇವರ ಅದೃಷ್ಟ. ದೋಣಿ ನಿಧಾನಕ್ಕೆ ಮೆಕ್ಸಿಕನ್ ಗಲ್ಫ್ ಪ್ರವೇಶಿಸಿತು.

ಇವರ ಅಂದಾಜಿನ ಪ್ರಕಾರ ದೋಣಿ ನವೆಂಬರ್ 30 ಕ್ಕೆ ಸ್ಯಾಂಟಿಯಾಗೊ ಡಿ ಕ್ಯೂಬಾವನ್ನು ತಲುಬೇಕಿತ್ತು. ಆಗ ಅಲ್ಲಿ ಜುಲೈ 26ರ ಚಳುವಳಿಯ ಅನುಯಾಯಿಗಳು ದಂಗೆ ಏಳುವಂತೆ ಯೋಜಿಸಲಾಗಿತ್ತು. ಇವರು ಯೋಜಿಸಿದಂತೆ ಅಂ-ದು ಅಲ್ಲಿ ದಂಗೆ ಎದ್ದಿತು. ಆದರೆ ಅದು ವಿಫಲ ದಂಗೆಯಾಯಿತು. ಏಕೆಂದರೆ ಫಿಡೆಲ್ ಮತ್ತು ಗೆಳೆಯರನ್ನು ಹೊತ್ತು ಬರುತ್ತಿದ್ದ ಗ್ರಾನ್ಮಾ ಇನ್ನೂ ಸಮುದ್ರದಲ್ಲೇ ಇತ್ತು. ಕ್ಯೂಬಾದ ಭೂಮಿಯನ್ನು ಇನ್ನೂ ತಲುಪಿರಲಿಲ್ಲ.

ಇವರ ಯೋಜಿತ ದಂಡಯಾತ್ರೆಯ ಕೊನೆಯ ದಿನ ಸಮುದ್ರದಲ್ಲಿ ಒಂದು ಅವಘಢ ಸಂಭವಿಸಿತು. ದೋಣಿಯ ನಾವಿಕ ಪಿಚಿರಿಲೊ ಮೆಜ್ಯಾಸ್ ಆಯತಪ್ಪಿ ಸಮುದ್ರಕ್ಕೆ ಬಿದ್ದುಬಿಟ್ಟ. ಇವನು ಡೊಮಿನಿಕನ್ ರಾಜ್ಯದವನು. ಅತ್ಯಂತ ಧೈರ್ಯಶಾಲಿ ಮತ್ತು ಕೌಶಲ್ಯಭರಿತನಾಗಿದ್ದ. ಕತ್ತಲಲ್ಲಿ ಹುಡುಕುವ ಗಂಭೀರ ಸಾಹಸಕ್ಕೆ ಇವರು ಇಳಿಯಬೇಕಾಯಿತು. ಆತನನ್ನು ಹುಡುಕಲು ಮೊದಲ ಬಾರಿಗೆ ದೋಣಿಯ ಸರ್ಚ್‌ಲೈಟ್‌ಗಳನ್ನು ಬಳಸಲಾಯಿತು. ಎಷ್ಟು ಹುಡುಕಿದರೂ ಆತ ಸಿಗುತ್ತಿಲ್ಲವೆನ್ನಿಸುವಷ್ಟರಲ್ಲಿ ಒಂದು ಕೀರಲು ಧ್ವನಿ ಕೇಳಿಸಿತು. ಇದರ ಜಾಡನ್ನು ಹಿಡಿದು ಕೊನೆಗೂ ಅತ್ಯಂತ ಶ್ರಮದಿಂದ ಅತನನ್ನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾದರು. ದೋಣಿ ಎಲ್ಲಿಗೆ ತಲುಪಬೇಕೆಂಬ ವಿಚಾರದಲ್ಲಿ ತುಂಬಾ ಸೂಕ್ಷ್ಮ ಯೋಜನೆಗಳನ್ನು ರೂಪಿಸಿದ್ದರು. 1895 ರಲ್ಲಿ ಜೋಸೆ ಮಾರ್ತಿ ಕ್ಯೂಬಾ ಸ್ವಾತಂತ್ರ್ಯ ಹೋರಾಟದಲ್ಲಿ ಬಳಸಿದ್ದ ಮಾರ್ಗವನ್ನೇ ಪುನರ್‌ಸಾಧಿಸಲು ಯೋಜಿಸಿದ್ದರು. ಆ ಪ್ರಕಾರವಾಗಿ ಇವರು ಓರಿಯಂಟೆ ಪ್ರಾಂತ್ಯದ ನೀಕ್ವೆರೋ ಎಂಬ ಪ್ರದೇಶದ ಸಮುದ್ರ ತಟದಲ್ಲಿ ಇಳಿಯಬೇಕಿತ್ತು. ಇವರನ್ನು ಬರಮಾಡಿಕೊಳ್ಳಲು ಜುಲೈ 26ರ ಚಳುವಳಿಯ ಸ್ಥಾಪಕರಲ್ಲೊಬ್ಬರಾಗಿದ್ದ ಸೆಲಿಯಾ ಸ್ಯಾಂಚೆಝ್ ಅವರು ಟ್ರಕ್‌ಗಳು, ಜೀಪುಗಳು, ಆಯುಧಗಳು, ಆಹಾರ ಮತ್ತು 50 ಜನರೊಂದಿಗೆ ಡಿಸೆಂಬರ್ 2 ರವರೆಗೆ ಕಾಯತ್ತಿದ್ದರು.

1. ಇದು ನಡೆದದ್ದು 1956 ಜುಲೈ. ಇದಕ್ಕೆ ಸ್ವಲ್ಪ ಮುಂಚಿತವಾಗಿ ಅಂದರೆ 1956 ಫೆಬ್ರವರಿ 14 ರಿಂದ 25 ರವರೆಗೆ ಮಾಸ್ಕೋದಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ 20 ನೇ ಮಹಾಧಿವೇಶನದಲ್ಲಿ ನಿಕಿಟಾ ಕ್ರುಶ್ಚೇವ್ ಅವರು ಸ್ಟಾಲಿನ್‌ನ ಅಪರಾಧಗಳು ಮತ್ತು ಕೃಷಿಯಲ್ಲಿ ಮಾಡಿದ ತಪ್ಪುಗಳ ಕುರಿತು ಗುಪ್ತ ವರದಿಯನ್ನು ಮಂಡಿಸಿದ್ದರು.

2. ಲಾಝೆರೊ ಕಾರ್ಡೆನಾಝ್ (1895–1970) ಮೆಕ್ಸಿಕನ್ ಕ್ರಾಂತಿಯಲ್ಲಿ ಹೋರಾಡಿದ ಜನರಲ್ ಆಗಿದ್ದರು. 1934–40 ರವರೆಗೆ ಮೆಕ್ಸಿಕೋದ ಅಧ್ಯಕ್ಷರಾಗಿದ್ದರು. ಆ ದೇಶದಲ್ಲಿ ಬಹಳ ಮುಖ್ಯವಾದ ಕೃಷಿ ಸುಧಾರಣೆಗಳನ್ನು ತರುವಲ್ಲಿ ಪ್ರಮುಖ ಶಕ್ತಿಯಾಗಿದ್ದರು. 1938 ರಲ್ಲಿ ಇವರು ಅಲ್ಲಿನ ತೈಲ ಕೈಗಾರಿಕೆಯನ್ನು ರಾಷ್ಟ್ರೀಕರಿಸಿದ್ದರು.



ಮೆಕ್ಸಿಕೋದ ಸಾಹಸ-ಸಮಸ್ಯೆಗಳು-ಗಂಡಾಂತರಗಳು ಮತ್ತು ತರಬೇತಿಯನ್ನು ಕೊನೆಗೊಳಿಸಿ ಕ್ಯೂಬಾದ ಕ್ರಾಂತಿಯ ಕನಸುಗಳನ್ನು ಹೊತ್ತು ಹೊರಡಲು ಫಿಡೆಲ್ ತಂಡ ಸಿದ್ಧವಾಯಿತು. ಐದು ದಿನಗಳ ಸಮುದ್ರ ಯಾನಕ್ಕೆ ಬೇಕಾದ ಒಂದು ದೋಣಿಯನ್ನು ಸಿದ್ಧಮಾಡಿಕೊಂಡರು. ಅದರ ಹೆಸರು ಗ್ರಾನ್ಮಾ.
1956 ನವೆಂಬರ್ 25 ರ ಮುಂಜಾನೆ ಕತ್ತಲಲ್ಲಿ 1 ಗಂಟೆಗೆ ಟಕ್ಸ್‌ಪಾನ್ ನದಿಯ ದಡದಿಂದ ಗ್ರಾನ್ಮಾ ಹೊರಟು ಸಮುದ್ರ ಪಥ ಹಿಡಿದಾಗ ಅದರಲ್ಲಿ ಇದ್ದದ್ದು 82 ಜನ ಕ್ರಾಂತಿಕಾರಿಗಳು. ಗ್ರಾನ್ಮಾದಲ್ಲಿ ಪ್ರಯಾಣಿಸಲು ಸಾಧ್ಯವಿದ್ದದ್ದು ಕೇವಲ 12 ಜನರಿಗೆ ಮಾತ್ರ !ಜೊತೆಗೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ತೈಲ ಮತ್ತು 82 ಜನರಿಗೆ ಆಹಾರ ಸಾಮಗ್ರಿಗಳನ್ನೂ ಇದರಲ್ಲಿ ತುಂಬಲಾಗಿತ್ತು.

“ಸಾರ್ವಜನಿಕ ವಲಯದ ಆಸ್ತಿವಂತ ಉದ್ದಿಮೆಗಳನ್ನು ಸಿಂಗರಿಸಿ, ಮಾರಾಟ ಮಾಡಿ”

ಇದು ರಾಷ್ಟ್ರೀಯ ಯೋಜನಾ ಆಯೋಗದ ಜಾಗದಲ್ಲಿ ‘ಅಚ್ಛೇದಿನ್’ಗಳಲ್ಲಿ ನೆಲೆಗೊಂಡಿರುವ ‘ನೀತಿ’ ಅಯೋಗದ ಶೀಪಾರಸು. ಈ ಆಯೋಗ ಈ ರೀತಿ ದೇಶದ ಖಜಾನೆಯಿಂದ ಖರ್ಚು ಮಾಡಿ ಅವನ್ನು ಶೀಘ್ರವಾಗಿ ‘ಮಾರಾಟಯೋಗ್ಯ’ ಮಾಡಬಹುದಾದ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳ ಒಂದು ಪಟ್ಟಿಯನ್ನು ಪ್ರಧಾನ ಮಂತ್ರಿಗಳ ಕಚೇರಿಗೆ ಸಲ್ಲಿಸಿದೆಯಂತೆ. ಶಿಫಾರಸನ್ನು ಅದು ಕೊಟ್ಟಿಲ್ಲ, ಸರಕಾರ ತೆಗೆದುಕೊಂಡಿದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಹೇಳಿದೆ.

ಏರ್ ಇಂಡಿಯಾ, ಫ್ಯಾಕ್ಟ್, ಚೆನ್ನೈ ಪೆಟ್ರೋಲಿಯಂ, ಮದ್ರಾಸ್ ಫರ್ಟಿಲೈಸರ್ಸ್ ಮುಂತಾದವುಗಳು ಈ ಪಟ್ಟಿಯಲ್ಲಿವೆಯಂತೆ. ಭಾರೀ ಆಸ್ತಿಗಳಿರುವ, ಆದರೆ ಈಗ ಅಷ್ಟೇನೂ ಉತ್ತಮ ಸ್ಥಿತಿಯಲ್ಲಿರದ ಇಂತಹ ಉದ್ದಿಮೆಗಳಲ್ಲಿ ಸರಕಾರೀ ಖಜಾನೆಯಿಂದ ಬಂಡವಾಳ ತೊಡಗಿಸಬೇಕು. ಆದರೆ ಈ ರೀತಿ ಹಣ ತೊಡಗಿಸುವುದು ಅವುಗಳ ಕಾರ್ಯಾಚರಣೆಯನ್ನು ಉತ್ತಮ ಪಡಿಸಲು ಅಲ್ಲ, ಅವನ್ನು ಬೇಗನೇ ವಿವಿಧ ನೆಪಗಳ ಮೇಲೆ ಖಾಸಗಿಯವರಿಗೆ ಹಸ್ತಾಂತರಕ್ಕೆ ‘ಅರ್ಹ’ಗೊಳಿಸಲಿಕ್ಕಾಗಿ ಎಂದು ಸಿಐಟಿಯು ಟೀಕಿಸಿದೆ.

ಹಿಂದಿನ ಎನ್‌ಡಿಎ(ವಾಜಪೇಯಿ ನೇತೃತ್ವದ) ಸರಕಾರದ ಅವಧಿಯಲ್ಲಿ ಇಂತಹ ‘ಆಯಕಟ್ಟಿನ ಮಾರಾಟ’ ನಡೆದಿದೆ. ಐಪಿಸಿಎಲ್, ಬಾಲ್ಕೊ ಮುಂತಾದ ಅಪಾರ ಆಸ್ತಿಗಳಿದ್ದ ಉದ್ದಿಮೆಗಳನ್ನು ಅವುಗಳ ಆಸ್ತಿಗಳ ಮಾರುಕಟ್ಟೆ ಮೌಲ್ಯದ ಕಾಲಂಶಕ್ಕಿಂತಲೂ ಕಮ್ಮಿ ಬೆಲೆಗೆ ಮಾರಲಾಗಿತ್ತ, ಇದನ್ನು ಖರೀದಿಸಲು ಸುಮಾರಾಗಿ ಸ್ಪರ್ಧೆಯೇ ಇರದಂತೆಯೂ ನೋಡಿಕೊಳ್ಳಲಾಗಿತ್ತು ಎಂದು ಸಿಐಟಿಯು ನೆನಪಿಸುತ್ತದೆ.

ಈಗ ನರೇಂದ್ರ ಮೋದಿ ಸರಕಾರ ಕೂಡ ತನ್ನ ಖಾಸಗಿ ಕಾರ್ಪೊರೇಟ್ ಬೆಂಬಲಿಗರಿಗೆ ಇಂತಹ ಅಪಾರ ರಾಷ್ಟ್ರೀಯ ಆಸ್ತಿಗಳನ್ನು ಅಗ್ಗದಲ್ಲಿ ಮಾರುವ ಆತುರದಲ್ಲಿದೆ ಎಂದಿರುವ ಸಿಐಟಿಯು, ಕಳೆದೆರಡು ವರ್ಷಗಳಲ್ಲಿ ಉದ್ಯೋಗಾವಕಾಶ ನಿರ್ಮಾಣದ ಕುರಿತು ಅಬ್ಬರದ ಮಾತುಗಳನ್ನು ಬಿಟ್ಟು ಬೇರೇನನ್ನೂ ಮಾಡದ ಸರಕಾರ ಈಗ ಈ ಕೇಂದ್ರೀಯ ಉದ್ದಿಮೆಗಳ ಖಾಸಗೀಕರಣದ ಮೂಲಕ ಅಪಾರ ರಾಷ್ಟ್ರೀಯ ಆಸ್ತಿಗಳ ಮೆಗಾಸೇಲ್‌ನತ್ತ ಧಾವಿಸುತ್ತಿದೆ ಎಂದು ಕಟುವಾಗಿ ಟೀಕಿಸಿದೆ.

ಹೀಗೆ ಮಾರಾಟ ಮಾಡಲು ಬಳಸುತ್ತಿರುವ ಒಂದು ತಂತ್ರವೆಂದರೆ ಈ ಉದ್ದಿಮೆಗಳು ‘ಆದ್ಯತೆಯಲ್ಲದ’ ವಲಯದವುಗಳು ಎನ್ನುವುದು. ಏರ್‌ಲೈನ್ಸ್, ಪೆಟ್ರೋಲಿಯಂ ಕಂಪನಿಗಳು, ರಸಗೊಬ್ಬರ ಉತ್ಪಾದಿಸುವ ಕಂಪನಿಗಳು ಇತ್ಯಾದಿಗಳು ‘ಆದ್ಯತೆಯ ವಲಯ’ಕ್ಕೆ ಸೇರಿಲ್ಲ ಎಂದು ಯಾವ ರೀತಿಯಲ್ಲಾದರೂ ಹೇಳಲು ಸಾಧ್ಯವೇ ಎಂದು ಪ್ರಶ್ನಿಸಿರುವ ಸಿಐಟಿಯು ತನ್ನ ಕಾರ್ಪೊರೇಟ್ ವಿಧೇಯತೆಯನ್ನು, ತನ್ನದು ಭಾರೀ ‘ಸುಧಾರಣೆ’ಯ ನಿಲುವು ಎಂದು ಸಾಬೀತು ಪಡಿಸುವ ಆತುರದಲ್ಲಿರುವ ಸರಕಾರ ಖಂಡಿತವಾಗಿ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದ ಇಂತಹ ನಿಲುವು ತಳೆಯಬಲ್ಲದು, ಆದರೆ ಇಂತಹ ಪ್ರಯತ್ನಗಳನ್ನು ಕಾರ್ಮಿಕ ವರ್ಗ ಬಲವಾಗಿ ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ.

“ಇಂತಹ ಆಳ್ವಿಕೆಯಲ್ಲಿ ನ್ಯಾಯ ಪಡೆಯಲು ಸಾಧ್ಯವೇ ಎಂಬ ಗಂಭೀರ ಅನುಮಾನಗಳು..”

ಇಷ್ರತ್ ಜಹಾಂ ಹುಸಿ ‘ಎನ್‌ಕೌಂಟರ್’ ಕೇಸ್ ಈಗ ಮತ್ತೆ ಸುದ್ದಿಗೆ ಬಂದಿದೆ. ಇದು ಹುಸಿ ಎನ್‌ಕೌಂಟರ್ ಅಲ್ಲ ಎಂದು ಸಾಬೀತು ಮಾಡುವ ಪ್ರಯತ್ನಗಳು ನಡೆದಿರುವಂತೆ ಕಾಣುತ್ತದೆ. ಮಾಲೇಗಾಂವ್ ತನಿಖೆಯಲ್ಲಿ ತಿಪ್ಪರಲಾಗ, ಗುಲ್ಬರ್ಗ್ ಹತ್ಯಾಕಾಂಡದ ತೀರ್ಪಿನಲ್ಲಿ ಬಿಜೆಪಿ ಕಾರ್ಪೊರೇಟರ್ ಮತ್ತೊಬ್ಬ ಪೋಲಿಸ್ ಅಧಿಕಾರಿಯ ಬಿಡುಗಡೆಯ ನಂತರ ಈ ಗುಮಾನಿಗಳು ಬಲವಾಗುತ್ತಿವೆ. ಈ ನಡುವೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಜೂನ್ 17ರಂದು ಪ್ರಕಟವಾದ ಸುದ್ದಿ ಇದನ್ನು ಮತ್ತಷ್ಟು ಬಲಗೊಳಿಸುತ್ತದೆ. ಇದು ಈಗಿನ ಪ್ರಧಾನಿಗಳು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಈಗಿನ ಆಳುವ ಪಕ್ಷದ ಅಧ್ಯಕ್ಷ ಆಗ ಗುಜರಾತ್ ಗೃಹಮಂತ್ರಿಯಾಗಿದ್ದಾಗ ನಡೆದ ಘಟನೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಕೇಸಿಗೆ ಸಂಬಂಧಪಟ್ಟ ಕೆಲವು ಪ್ರಮುಖ ದಾಖಲೆಗಳು ಕೇಂದ್ರ ಗೃಹ ಮಂತ್ರಾಲಯದಲ್ಲಿ ‘ಕಾಣೆ’ಯಾಗಿವೆಯಂತೆ. ಆ ಬಗ್ಗೆ ತನಿಖೆ ನಡೆಸಲು ಕೇಂದ್ರ ಗೃಹ ಇಲಾಖೆಯ ಅಡಿಶನಲ್ ಸೆಕ್ರೆಟರಿ ಒಬ್ಬರನ್ನು ನೇಮಿಸಲಾಗಿದೆ.

ಇಂಡಿಯನ್ ಎಕ್ಸ್‌ಪ್ರೆಸ್‌ನ ಪತ್ರಕರ್ತ ಬೇರೊಂದು ವಿಷಯದಲ್ಲಿ ಆತನೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದಾಗ, ಈ ಅಧಿಕಾರಿ ಇನ್ನೊಬ್ಬ ಐಎಎಸ್ ಅಧಿಕಾರಿಗೆ ಈ ತನಿಖೆಯ ಬಗ್ಗೆ ಹೇಳುತ್ತಿದ್ದುದು ಈಗ ದೊಡ್ಡ ಸುದ್ದಿಯಾಗಿದೆ.

“ಈ ಪೇಪರನ್ನು ನೀವು ನೋಡಿರುವಿರಾ ಎಂದು ನಾನು ಕೇಳಬೇಕಾಗಿದೆ, ಅದಕ್ಕೆ ‘ನಾನು ನೋಡಿಲ್ಲ’ ಎಂದು ನೀವು ಉತ್ತರಿಸಬೇಕು, ಅಷ್ಟೇ” ಎಂದು ಈ ತನಿಖಾ ಅಧಿಕಾರಿ ಹೇಳಿರುವುದಾಗಿ ಆ ಪತ್ರಕರ್ತ ಬರೆದಿದ್ದಾರೆ.

ಅಂದರೆ ಈ ತನಿಖೆ ಕೇವಲ ಕಣ್ಣೊರೆಸಲಿಕ್ಕಾಗಿ ಇರಬಹುದೇ ಎಂಬ ಪ್ರಶ್ನೆ ಎದ್ದಿದೆ, ಯಾರನ್ನು ಉಳಿಸಲಿಕ್ಕಾಗಿ ಈ ತಂತ್ರ ಎಂಬ ಪ್ರಶ್ನೆಯೂ ಅದರ ಜೊತೆಗೇ ಏಳುತ್ತದೆ. ಸಾಕ್ಷಿಗಳಿಗೆ ಮೊದಲೇ ‘ಪಾಟ’, ಸತ್ಯದತ್ತ ಸಾಗದ ತನಿಖೆಗಳು ಮತ್ತು ‘ಕ್ಲೀನ್ ಚಿಟ್’ಗಳು ಈ ಸರಕಾರದ ಪ್ರಮುಖ ಲಕ್ಷಣವಾಗಿ ಬಿಟ್ಟಿದೆ, ಇಂತಹ ಆಳ್ವಿಕೆಯಲ್ಲಿ ನ್ಯಾಯ ಪಡೆಯಲು ಸಾಧ್ಯವೇ ಎಂಬ ಗಂಭೀರ ಅನುಮಾನಗಳು ಉಂಟಾಗುತ್ತಿವೆ ಎಂದು ಸೀತಾರಾಮ್ ಯೆಚೂರಿ ಈ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದ್ದಾರೆ.

ಕೈರಾನ: ಊರು ಬಿಟ್ಟೋಡಿರುವುದು ಮಾತ್ರ ಸುಳ್ಳಲ್ಲ ಮನೆ ಮಾರಾಟಕ್ಕಿದೆ ಎಂಬ ಫೋಟೋಗಳೂ ಸುಳ್ಳು!



‘ಯೇ ಘರ್ ಬಿಕಾವೂ ಹೈ’ ಅಂದರೆ ‘ಈ ಮನೆ ಮಾರಾಟಕ್ಕಿದೆ’ ಎಂಬುದು ಉತ್ತರ ಪ್ರದೇಶದಲ್ಲಿ ಈಗ ಬಿಜೆಪಿ ಎಂಪಿ ಯೊಬ್ಬರು ಎಬ್ಬಿಸಿರುವ ಹೊಸ ಗುಲ್ಲನ್ನು, ಅಂದರೆ ಕೈರಾನಾದಲ್ಲಿ ಸುಮಾರು 400 ‘ಹಿಂದೂ’ ಕುಟುಂಬ’ಗಳು ‘ಇನ್ನೊಂದು ಕೋಮಿನವರ’ ಕಿರುಕುಳ ತಾಳಲಾರದೆ ಊರು ಬಿಟ್ಟು ಹೋಗಿದ್ದಾರೆ ಎಂಬ ಆರೋಪವನ್ನು ಸಾಬೀತು ಮಾಡಲು ಬಳಸಿದ ಫೋಟೋಗಳಲ್ಲಿ ಮನೆಗಳ ಮೇಲೆ ಕಾಣುವ ಬರಹ ಇದು.


ಈ 400 ಕುಟುಂಬಗಳಲ್ಲಿ ಬಹಳಷ್ಟು ಜನ ಬಹಳ ಹಿಂದೆಯೇ ಉತ್ತಮ ಜೀವನಾಧಾರ ಹುಡುಕಿಕೊಂಡು ಹೋಗಿದ್ದವರು, ಕೆಲವರು ಬದುಕಿಯೇ ಇಲ್ಲ, ಇನ್ನು ಕೆಲವರು ಇನ್ನೂ ಅಲ್ಲಿದ್ದಾರೆ ಎಂದು ಬಯಲಾದ ಮೇಲೂ ಈ ಪ್ರಚಾರವನ್ನು ಸಂಘ ಪರಿವಾರದ ಮಂದಿ ಬಿಟ್ಟಿಲ್ಲ.

ಈಗ ಆ ಬಿಜೆಪಿ ಎಂಪಿಯ ಪಟ್ಟಿ ಮಾತ್ರ ಸುಳ್ಳಲ್ಲ, ‘ಮನೆ ಮಾರಾಟಕ್ಕಿದೆ’ ಎಂಬ ಫೋಟೋಗಳು ಕೂಡ ಸುಳ್ಳಿರಬಹುದು ಎಂಬ ಸಂದೇಹ ಉಂಟಾಗಿದೆ.

ಈಗ ಫರ್ಖಿಯಾ ಬಾದ್‌ನಲ್ಲಿರುವ ಗೌರವ್ ಜೈನ್ ಈ ಬಿಜೆಪಿ ಎಂಪಿ ಪ್ರಕಟಿಸಿದ ಕೈರಾನಾದ ಪಕ್ಕದಲ್ಲಿರುವ ಖಂಡ್ಲಾದಿಂದ ಊರು ಬಿಟ್ಟು ಹೋದರೆನ್ನಲಾದ 63 ಕುಟುಂಬಗಳ ಎರಡನೇ ಪಟ್ಟಿಯಲ್ಲಿ ರುವ ಪಾರಸ್ ಚಂದ್ ಎಂಬವರ ಮಗ. ಪತ್ರಿಕೆಗಳಲ್ಲಿ ತನ್ನ ಊರಿನಲ್ಲಿರುವ ಮನೆ ಮಾರಾಟಕ್ಕಿದೆ ಎಂಬ ಫೋಟೋ ನೋಡಿ ಆತನಿಗೆ ಆಶ್ಚರ್ಯವಾಯಿತಂತೆ. ಏಕೆಂದರೆ ಮನೆ ಮಾರಾಟ ಮಾಡುವ ಯೋಚನೆ ಅವರಿಗಿರಲಿಲ್ಲ. ಈ ಕುಟುಂಬ ಊರು ಬಿಟ್ಟದ್ದು 2010ರಲ್ಲಿ, ಬೇರೆ ಕೋಮಿನವರ ಬೆದರಿಕೆಯಿಂದಾಗಿ ಅಲ್ಲ, ಫರ್ಖಿಯಾಬಾದ್‌ನಲ್ಲಿ ತನಗೆ ಒಳ್ಳೆಯ ವ್ಯಾಪಾರ ಅವಕಾಶ ಸಿಕ್ಕಿತು, ಆಮೇಲೆ ತಂದೆ–ತಾಯಿ ಕುಟುಂಬವನ್ನೂ ಕರೆಸಿಕೊಂಡೆ ಎನ್ನುತ್ತಾರೆ ಗೌರವ್ ಜೈನ್.

ಈಗ ಅವರು ಶ್ಯಾಮಲೀ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ದೂರು ಸಲ್ಲಿಸಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಸಂಘ ಪರಿವಾರದ ಮಂದಿ ತಾವೇ ಮುಚ್ಚಿರುವ ಮನೆಗಳ ಮೇಲೆ ಮಾರಾಟಕ್ಕಿದೆ ಎಂದು ಬರೆದು ಪೋಟೋಗಳನ್ನು ತೆಗೆದಿದ್ದಾರೆ ಎಂಬದು ಈಗ ಉಂಟಾಗಿರುವ ಹೊಸ ಅನುಮಾನ.




ಸರಕಾರದ ಹೊಸ ವಿಮಾನಯಾನ ಧೋರಣೆಯಿಂದಾಗಿ ನಾವೀಗ ಬೇಳೆ, ಟೊಮಾಟೊ, ಎಣ್ಣೆ, ಅಕ್ಕಿಗೆ ಹತ್ತಿರ ಬಂದಿದ್ದೇವೆ....

ವ್ಯಂಗ್ಯ ಚಿತ್ರ: ಶುಭನೀಲ್,
ಡೆಕ್ಕನ್ ಕ್ರಾನಿಕಲ್

ಪಕ್ಕದ ಅಲಹಾಬಾದಿನಲ್ಲಿ ಮಾತಾಡುತ್ತ ಜೂನ್ 14ರಂದು ಪ್ರಧಾನ ಮಂತ್ರಿಗಳು, ಇನ್ನು ಬರಿಯ ಘೋಷಣೆಗಳು ಸಾಕು, ಪಕ್ಷದ ಕಾರ್ಯಕರ್ತರು ಏಳು ‘ಸ’ ಗಳನ್ನು ತಮ್ಮ ವರ್ತನೆಗಳಲ್ಲಿ ಅಳವಡಿಕೊಳ್ಳಬೇಕು ಎಂದು ಸಲಹೆ ಮಾಡಿದರಂತೆ–ಸೇವಾಭಾವ, ಸಮತೋಲನ, ಸಂಯಮ, ಸಮನ್ವಯ, ಸಕಾರಾತ್ಮಕ, ಸಮವೇದನಾ ಮತ್ತು ಸಂವಾದ.

ಈ ಸುಳ್ಳುಗಳಿಗೆ ಆ ‘ಸ’ಗಳು ಅನ್ವಯವಾಗುವಂತೆ ಕಾಣುತ್ತಿಲ್ಲ.



ಸ್ವಚ್ಛ ಭಾರತ್, ಕೃಷಿ ವಿಕಾಸ್ ನಂತರ ಇನ್ನು ಹಸಿರು ಪರಿಸರ ಸೆಸ್?

ಹೌದು, ‘ದಿ ಹಿಂದು’ ದೈನಿಕದ ಒಂದು ವರದಿಯನ್ನು ನೋಡಿದ–ರೆ, ಭಾರತದ ಜನತೆ ಇನ್ನೊಂದು ಉಪತೆರಿಗೆಗೆ ಸಿದ್ಧರಾಗಬೇಕಿದೆ ಎಂದನಿಸುತ್ತಿದೆ. ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಮಂತ್ರಾಲಯ ‘ಪರಿಸರಾತ್ಮಕ ಹೊಣೆಗಾರಿಕೆ’ಗೆ ‘ಉತ್ತೇಜನೆ’ ನೀಡು ಒಮದು ಹಸಿರು ಉಪತೆರಿಗೆಯನ್ನು ವಿಧಿಸಬೇಕು ಎಂದು ಪ್ರಸ್ತಾವವನ್ನು ತಯಾರಿಸಿದೆಯಂತೆ.

“ಪರಿಸರಾತ್ಮಕ ಹೊಣೆಯ ವರ್ತನೆಗೆ, ನಾಗರಿಕರ ವಂತಿಗೆಯನ್ನು ಸಂಗ್ರಹಿಸಲು ಮತ್ತು ಪೂರಕ ಹಣಕಾಸು ಸಂಪನ್ಮೂಲಗಳಿಗೆ ಅನುಕೂಲವಾಗುವಂತೆ ಪರಿಸರ ಸೆಸ್, ಹಸಿರು ತೆರಿಗೆ, ಇಂಗಾಲ ತೆ–ರಿಗೆ ಇತ್ಯಾದಿಗಳನ್ನು ಕೆಲವು ಉತ್ಪನ್ನಗಳು ಮತ್ತು ಸವಿವೆಗಳ ಮೇಲೆ ವಿಧಿಸಬಹುದು” ಎಂದು ರಾಷ್ಟ್ರೀಯ ಅರಣ್ಯ ಧೋರಣೆ, 2016ರಲ್ಲಿ ಹೇಳಲಾಗಿದೆಯಂತೆ.

ಬರ ಪರಿಸ್ಥಿತಿ ದೇಶವನ್ನು ಆವರಿಸಿರುವಾಗ ಶೇರು ಮಾರುಕಟ್ಟೆಯ ಬಗ್ಗೆಯೇ ಕಾಳಜಿಯ ದಿನಗಳು!

ಈ ವಾರ ಶೇರು ಮಾರುಕಟ್ಟೆಂಯಲ್ಲಿ ಭಾರೀ ಇಳಿಕೆಯಾಗದಂತೆ ತಡೆಯಲು ಸರಕಾರೀ ಒಡೆತನದ ಹಣಕಾಸು ಸಂಸ್ಥೆಗಳನ್ನು ಬಳಸಲಾಗಿದೆ ಎಂದು ವರದಿಯಾಗಿದೆ. ವಿದೇಶಿ ಹೂಡಿಕೆದಾರರು ಒಮ್ಮೆಲೇ 537 ಕೋಟಿ ರೂ.ಗಳನ್ನು ಹಿಂತೆಗೆದುಕೊಂಡುದರಿಂದ ಶೇರು ಸೂಚ್ಯಂಕದಲ್ಲಿ ಭಾರೀ ಇಳಿಕೆಯಾಗುವ ಸಂಭವವಿತ್ತು. ಆಗ ಸರಕಾರೀ ಒಡೆತನದ ಹಣಕಾಸು ಸಂಸ್ಥೆಗಳು 724 ಕೋಟಿ ರೂ.ಗಳನ್ನು ಶೇರು ಖರೀದಿಗೆ ತೆತ್ತು ಸೂಚ್ಯಂಕ ಪ್ರಪಾತಕ್ಕೆ ಬೀಳದಂತೆ ತಡೆದವು ಎಂದು ವರದಿಯಾಗಿದೆ.

ಮುಖ್ಯವಾಗಿ ಎಲ್‌ಐಸಿ ಮತ್ತು ನಾಲ್ಕು ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳು ಈ ಶೇರುಗಳನ್ನು ಖರೀದಿಸುವಂತೆ ಮಾಡಲಾಗಿದೆಯಂತೆ.


ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಶೇರು ಸೂಚ್ಯಂಕವನ್ನು ಮೇಲಿಡಲು ಸರಕಾರ ಜನಸಾಮಾನ್ಯರು ಎಲ್‌ಐಸಿಗೆ ಕೊಟ್ಟ ಹಣವನ್ನು ಬಳಸುತ್ತಿರುವುದು ದುರದೃಷ್ಟಕರ ಎಂದಿದ್ದಾರೆ. ಈ ಹಿಂದೆ ಎನ್‌ಡಿಎ–1 ಸರಕಾರ ಕೂಡ ಯುಟಿಐಯನ್ನು ಇದೇ ರೀತಿ ಬಳಸಿಕೊಂಡಿತ್ತು ಎಂಬುದನ್ನೂ ಅವರು ನೆನಪಿಸಿದ್ದಾರೆ. ಎಳ್‌ಐಸಿಗೂ ಯುಟಿಐಗಾದ ಹತಿಯೇ ಬರಬಹುದೇ ಎಂದು ಅವರು ಪ್ರಶ್ನಿಸಿದ್ದಾರೆ.

ಬಿಜೆಪಿ ಸರಕಾರದ ಆದ್ಯತೆಗಳೇನು? ಬರ ದೇಶವನ್ನು ಆವರಿಸಿರುವ ವರ್ಷದಲ್ಲಿ ಸರಕಾರ ಶೇರು ಮಾರುಕಟ್ಟೆಯ ನಿರ್ವಹಣೆಯ ಬಗ್ಗೆಯೇ ಹೆಚ್ಚಿನ ಕಾಳಜಿ ತೋರಬೇಕೇ ಎಂದೂ ಅವರು ಪ್ರಶ್ನಿಸಿದ್ದಾರೆ.

ತಮಾಷೆಯೆಂದರೆ, ಇದೇ ಸರಕಾರ ಎಲ್‌ಐಸಿಯನ್ನು ಖಾಸಗೀಕರಿಸುವ ಹುನ್ನಾರ ಹೊಂದಿದೆ, ನಾಲ್ಕು ಸಾರ್ವಜನಿಕ ವಲಯದ ವಿಮಾ ಕಂಪನಿಗಳ ಖಾಸಗೀಕರಣದ ಪ್ರಕ್ರಿಯೆಯನ್ನಂತೂ ಸದ್ಯದಲ್ಲೇ ಆರಂಭಿಸುವ ಯೋಚನೆಯನ್ನೂ ಅದು ಈಗಾಗಲೇ ಇಟ್ಟುಕೊಂಡಿದೆ.!

ರಿಝರ್ವ್ ಬ್ಯಾಂಕ್ ಗವರ್ನರ್‌ರವರ ಕಾರ್ಯಾವಧಿ ಸಪ್ಟಂಬರ್‌ನಲ್ಲಿ ಮುಗಿಯಲಿದ್ದು ಅದನ್ನು ಎರಡನೇ ಅವಧಿಗೆ ಮುಂದುವರೆಸಬೇಕು ಎಂದು ಒಂದೆಡೆಯಲ್ಲಿ,, ಅವರು ದೇಶಪ್ರೇಮಿಯಲ್ಲ, ಅವರನ್ನು ವಾಪಾಸ್ ಅಮೆರಿಕಾಕ್ಕೆ ಕಳಿಸಿ ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಸುಬ್ರಮಣ್ಯ ಸ್ವಾಮಿಯ ಗುಡುಗು ಇನ್ನೊಂದೆಡೆ– ಈ ನಡುವೆ ತನಗೆ ಎರಡನೇ ಕಾರ್ಯಾವಧಿ ಬೇಡ ಎಂದು ಗವರ್ನರ್ ಅವರೇ ಹೇಳಿದ್ದಾರೆ. ಇದು ಅವರಾಗಿ ಬಯಸಿದ್ದೋ, ಅಥವ ಅವರು ಹೇಳುವಂತೆ ಸರಕಾರ ಮಾಡಿದ್ದೋ ಎಂಬ ಊಹಾಪೋಹಗಳು ನಡೆದಿವೆ. ಈ ನಡುವೆ ರಾಷ್ಟ್ರೀಯ ಫ್ಯಾಷನ್ ಟೆಕ್ನಾಲಜಿ ಸಂಸ್ಥೆ(ಎನ್‌ಐಎಫ್‌ಟಿ)ಗೆ ಮಾಜೀ ಕ್ರಿಕೆಟಿಗ ಮತ್ತು ಮಾಜಿ ಬಿಜೆಪಿ ಎಂಪಿ ಚೇತನ್ ಚೌಹಾಣ್ ಅವರನ್ನು ಅಧ್ಯಕ್ಷರಾಗಿ ಮಾಡಿ ‘ಜೀ ಹುಜೂರು’ಗಳನ್ನು ನೇಮಿಸುವ ಪರಂಪರೆ ಮುಂದುವರೆದಿದೆ. –ಸುದ್ದಿ

ಒಳಬರುತ್ತಿರುವ ಫ್ಯಾಷನ್ ಗುರುವಿನಿಂದ ಹೊರ ಹೋಗುತ್ತಿರುವ ಹಣಕಾಸು ಗುರುಗೆ ಉಡುಗೆಯ ಸಲಹೆ



ಜಿಎಸ್‌ಟಿ ಬಗ್ಗೆ ಅನುಮಾನ: ರಾಜ್ಯಗಳ ಅಧಿಕಾರಗಳ ಅತಿಕ್ರಮಣದ ವಿರುದ್ಧದ ದನಿ



ಕೆ.ಎಂ. ನಾಗರಾಜು

ಒಂದು ಅರ್ಥವ್ಯವಸ್ಥೆಯ ಆರೋಗ್ಯವು ಯೂರೋಪ್‌ನ ರೀತಿಯಲ್ಲಿ ವ್ಯಾಟ್ ಅಳವಡಿಸಿಕೊಂಡಿದೆಯೋ ಅಥವಾ ಅಮೆರಿಕದ ರೀತಿಯಲ್ಲಿ ಬೇರೆ ಪದ್ಧತಿ ಅಳವಡಿಸಿಕೊಂಡಿದೆಯೋ ಎಂಬುದರ ಮೇಲೆ ನಿಂತಿಲ್ಲ.

ಆದರೆ, ಅರ್ಥವ್ಯವಸ್ಥೆಯ ಆರೋಗ್ಯವು ಮತ್ತೊಂದು ಕಾರಣದ ಮೇಲೆ ಅವಲಂಬಿಸಿದೆ ಎಂಬುದು ಮಹತ್ವಪೂರ್ಣವಾಗಿದೆ. ಇದು ಒಂದು ಒಕ್ಕೂಟ ವ್ಯವಸ್ಥೆಯ ಜೀವಂತಿಕೆಗೆ ಸಂಬಂಧಪಟ್ಟ ಸಂಗತಿ.

ಜಿಎಸ್‌ಟಿ ಕೌನ್ಸಿಲ್ ರಾಜ್ಯಗಳ ಹಕ್ಕುಗಳ ಮೇಲೆ ಅತಿಕ್ರಮಣ ಮಾಡುವುದರ ವಿರುದ್ಧವಾಗಿ ಅನೇಕ ರಾಜ್ಯ ಸರ್ಕಾರಗಳು ತಮ್ಮ ದನಿ ಎತ್ತಿರುವುದು, ಅದೇ ಕಾರಣದಿಂದ ಏಕ ದರದ ರಾಜ್ಯ ಜಿಎಸ್‌ಟಿಯ ವಿರುದ್ಧ ಎತ್ತಿದ ದನಿಯೂ ಆಗಿದೆ. ಆದ್ದರಿಂದ, ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ ಎನ್ನುತ್ತಾರೆ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್

ಉದ್ದೇಶಿತ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಪ್ರಸ್ತಾಪವು ಫಲಕಾರಿಯಾಗುವಂತೆ ಮಾಡಲು ಎನ್‌ಡಿಎ ಸರ್ಕಾರವು ಅನೇಕ ಅಸತ್ಯಗಳ ಮೊರೆ ಹೋಗಿದೆ. ಇವುಗಳಲ್ಲಿ ಅತಿದೊಡ್ಡ ಸುಳ್ಳು ಎಂದರೆ, ಜಿಎಸ್‌ಟಿ ಜಾರಿಯಾದರೆ ಜಿಡಿಪಿಯಲ್ಲಿ ಶೇ.2ರಷ್ಟು ಹೆಚ್ಚಳವಾಗುತ್ತದೆ ಎಂಬುದು. ಒಂದು ವೇಳೆ ಜಿಎಸ್‌ಟಿಗೆ ಅಂತಹ ಪವಾಡಶಾಲಿ ಶಕ್ತಿ ಇದ್ದಿದ್ದರೆ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಬಹಳ ಹಿಂದೆಯೇ ಮಾಯವಾಗುತ್ತಿತ್ತು. ಜಿಎಸ್‌ಟಿ ಇಲ್ಲದ ಅಮೆರಿಕಾ ಜಿಎಸ್‌ಟಿ ಅಳವಡಿಕೆಯತ್ತ ಹೊರಳುತ್ತಿತ್ತು ಮತ್ತು ಅಮೆರಿಕದ ಜಿಡಿಪಿ ಹೆಚ್ಚುತ್ತಿತ್ತು. ಅಷ್ಟೇ ಅಲ್ಲ, ಎಲ್ಲ ದೇಶಗಳಲ್ಲೂ ಜಿಡಿಪಿ ಹೆಚ್ಚುತ್ತಿತ್ತು. ಆದರೆ ಪರಿಸ್ಥಿತಿ ಬೇರೆಯೇ ಇದೆ. ಹಾಗಾಗಿ, ಇದೊಂದು ಭ್ರಮೆಗಳಿಂದ ಕೂಡಿದ ಪ್ರಚಾರ. ಎಲ್ಲವೂ ಹುಚ್ಚಾಪಟ್ಟೆ ಮಾರಾಟದ ವಸ್ತುಗಳಾಗುತ್ತಿರುವ ಈ ಜಗತ್ತಿನಲ್ಲಿ ಮಾರುಕಟ್ಟೆ ಸಂಶೋಧನೆಯೂ ಅದಕ್ಕೆ ಹೊರತಾಗಿಲ್ಲ. ಯಾವುದೇ ಸರಕನ್ನು ಕೊಳ್ಳುವ ರೀತಿಯಲ್ಲಿಯೇ, ಜಿಎಸ್‌ಟಿ ಜಾರಿಯಾದರೆ ಜಿಡಿಪಿಯಲ್ಲಿ ಶೇ.2ರಷ್ಟು ಹೆಚ್ಚಳವಾಗುತ್ತದೆ ಎಂಬ ಕೆಟ್ಟ ಸಂಶೋಧನೆಯನ್ನು ಅರುಣ್ ಜೇಟ್ಲಿಯವರಂತೆ ಯಾರಾದರೂ ಖರೀದಿಸಬಹುದು.

ಇತ್ತೀಚೆಗೆ ನಡೆದ ರಾಜ್ಯ ಹಣಕಾಸು ಮಂತ್ರಿಗಳನ್ನೊಳಗೊಂಡ ವಿಶೇಷಾಧಿಕಾರವುಳ್ಳ ಸಮಿತಿಯ ಸಭೆಯ ನಂತರ ವರದಿಗಾರರನ್ನುದ್ದೇಶಿಸಿ ಮಾತನಾಡಿದ ಜೇಟ್ಲಿಯವರು "ತಮಿಳುನಾಡು ಬಿಟ್ಟರೆ ಉಳಿದ ರಾಜ್ಯಗಳು ಜಿಎಸ್‌ಟಿಯನ್ನು ಬೆಂಬಲಿಸುತ್ತವೆ" ಎಂದು ಹೇಳಿದ್ದಾರೆ. ಅವರ ಈ ಹೇಳಿಕೆಯ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ. ಏಕೆಂದರೆ, ಅದೇ ವರದಿ "ತಮಿಳುನಾಡು ಸೇರಿದಂತೆ ಅನೇಕ ರಾಜ್ಯಗಳು ಜಿಎಸ್‌ಟಿ ಕೌನ್ಸಿಲ್ ಬಗ್ಗೆ ತಮ್ಮ ಅನುಮಾನಗಳನ್ನು ವ್ಯಕ್ತಪಡಿಸಿವೆ" ಎಂದು ತಿಳಿಸುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ದೇಶೀಯ ಕಾರ್ಪೊರೇಟ್ ಬಂಡವಾಳಶಾಹಿ ಹಿತಾಸಕ್ತಿಗಳನ್ನು ಕಾಪಾಡಲು ಜಿಎಸ್‌ಟಿ ಕಾನೂನು ಮಾಡುತ್ತಿರುವುದು ಭಾರತದ ಒಕ್ಕೂಟ ವ್ಯವಸ್ಥೆಯ ಸ್ವರೂಪಕ್ಕೆ ಧಕ್ಕೆ ಒಡ್ಡುತ್ತದೆ ಎಂಬುದೇ ರಾಜ್ಯಗಳಿಗಿರುವ ಅನುಮಾನ.

ಹುರುಳಿರುವ ಮೂರು ವಾದಗಳು

ಜಿಎಸ್‌ಟಿ ಪರವಾಗಿ ಹುರುಳಿರುವ ಮೂರು ವಾದಗಳಿವೆ. ಮೊದಲನೆಯದು, ಏಕ ರೂಪದ ಜಿಎಸ್‌ಟಿ ದರ ರಾಷ್ಟ್ರೀಯ ಮಾರುಕಟ್ಟೆಯನ್ನು ಒಗ್ಗೂಡಿಸುತ್ತದೆ. ಏಕ ರೂಪದ ಜಿಎಸ್‌ಟಿ ದರ ಎಂದು ಹೇಳುವಾಗ ಅದುಒಂದೇ ಒಂದು ದರವಲ್ಲ. ಅದರಲ್ಲಿ ಮೂರು ದರಗಳಿವೆ: ರಾಜ್ಯಗಳ ಜಿಎಸ್‌ಟಿ, ಕೇಂದ್ರದ ಜಿಎಸ್‌ಟಿ ಮತ್ತು ಅಂತಾರಾಜ್ಯ ಜಿಎಸ್‌ಟಿ. ಏಕ ರೂಪದ ಜಿಎಸ್‌ಟಿದರ ಜಾರಿಗೆ ತಂದಾಗ, ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಸರಕುಗಳ ಮೇಲೆ ಬೇರೆ ಬೇರೆ ತೆರಿಗೆ ದರಗಳಿರುವುದರಿಂದ ಸರಕುಗಳನ್ನು ದೇಶದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಕೊಂಡೊಯ್ಯಲು ಈಗಿರುವ ಅಡೆ ತಡೆಗಳು ಇಲ್ಲವಾಗುತ್ತವೆ.

ಎರಡನೆಯದು ವಿಶಿಷ್ಟವಾಗಿದೆ. ಏಕೆಂದರೆ, ಒಂದು ವಸ್ತುವಿನ ಉತ್ಪಾದನೆಯ ಅಥವಾ ಅದರ ಮಾರಾಟದ ಬೆಲೆಯ ಮೇಲೆ ವಿಧಿಸುವ ತೆರಿಗೆಗೆ ಬದಲಾಗಿ, ಆ ವಸ್ತುವಿಗೆ ಸೇರಿಸುವ ಮೌಲ್ಯದ ಮೇಲೆ ತೆರಿಗೆ ವಿಧಿಸುವುದರಿಂದ ಪರೋಕ್ಷ ತೆರಿಗೆ ಪದ್ಧತಿಯನ್ನು ಸರಳಗೊಳಿಸುವುದರ ಜೊತೆಗೆ ಅದನ್ನು ಸಮಂಜಸಗೊಳಿಸುತ್ತದೆ. ಬೇರೇನನ್ನೂ ಸಾಧಿಸದಿದ್ದರೂ ಈ ಬದಲಾವಣೆಯೇ ಒಳ್ಳೆಯದಾಗಿ ಕಾಣುತ್ತದೆ. ಏಕೆಂದರೆ, ಒಂದು ವಸ್ತುವಿಗೆ ಸೇರಿಸುವ ಮೌಲ್ಯದ ಮೇಲೆ ತೆರಿಗೆ ವಿಧಿಸುವುದು ಆ ವಸ್ತುವಿನ ಒಟ್ಟು ಮೌಲ್ಯದ ಮೇಲೆ ತೆರಿಗೆ ವಿಧಿಸುವುದಕ್ಕಿಂತಲೂ ಒಳ್ಳೆಯದು. ಈ ಕ್ರಮದಿಂದಾಗಿ ಸುರಿ ಮಳೆಯಂತೆ ಒಂದು ಹಂತದಲ್ಲಿ ಈಗಾಗಲೇ ತೆರಿಗೆಗೆ ಒಳಗಾಗಿರುವ ಒಂದು ವಸ್ತುವಿನ/ಸರಕಿನ ಮೇಲೆ ಮತ್ತೊಂದು ಹಂತದಲ್ಲಿ ಅದೇ ವಸ್ತುವಿನ ಮೇಲೆ ಮತ್ತೊಮ್ಮೆ ತೆರಿಗೆ ಹೇರುವುದು ತಪ್ಪುತ್ತದೆ.

ಮೂರನೆಯದು, ತಮ್ಮ ರಾಜ್ಯಗಳಲ್ಲೇ ಬಂಡವಾಳ ಹೂಡಿಕೆಯಾಗುವಂತೆ ನೋಡಿಕೊಳ್ಳುವ ಸಲುವಾಗಿ ರಾಜ್ಯಗಳು ಪೈಪೋಟಿಯ ಮೇಲೆ ತೆರಿಗೆಗಳನ್ನು ಇಳಿಸುವುದು ತಪ್ಪುತ್ತದೆ. ಅಂದರೆ, ಬಂಡವಾಳ ಹೂಡಿಕೆಯನ್ನುಆಕರ್ಷಿಸಲು ರಾಜ್ಯಗಳು ತೆರಿಗೆಗಳನ್ನು ಇಳಿಸುವ ಪೈಪೋಟಿ ನಡೆಸುವುದು ತಪ್ಪುತ್ತದೆ. ಇದೊಂದು ಕಾಲ್ಪನಿಕ ಭಯವಲ್ಲ. ರಾಜ್ಯಗಳು ಹೀಗೆ ನಡೆದುಕೊಂಡಿರುವ ಉದಾಹರಣೆಗಳಿವೆ.

ಅರ್ಥವ್ಯವಸ್ಥೆಯ ಆರೋಗ್ಯ....

ಅಮೆರಿಕದ ತೆರಿಗೆ ವ್ಯವಸ್ಥೆಯನ್ನು ಗಮನಿಸಿದರೆ ಮೊದಲಿನ ಎರಡು ವಾದಗಳು ತೂಕ ಕಳೆದುಕೊಳ್ಳುತ್ತವೆ. ಒಂದು ವಸ್ತುವಿಗೆ ಸೇರಿಸುವ ಮೌಲ್ಯದ ಮೇಲಷ್ಟೇ ತೆರಿಗೆ ವಿಧಿಸುವ ವೈಶಿಷ್ಟ್ಯತೆಯುಳ್ಳ ಜಿಎಸ್‌ಟಿ ಪದ್ಧತಿ ಅಮೆರಿಕದಲ್ಲಿ ಇಲ್ಲ. ಅಂದರೆ, ಅಲ್ಲಿ ತೆರಿಗೆಯ ಮೇಲೆ ತೆರಿಗೆ ಹೇರುವ ಪದ್ಧತಿ ಜಾರಿಯಲ್ಲಿದೆ. ಅಲ್ಲಿ ಏಕ ರೂಪದ ತೆರಿಗೆಯಾಗಲಿ ಅಥವಾ ಏಕ ರೂಪದ ವಿನಾಯ್ತಿ ಪದ್ಧತಿಯಾಗಲಿ ಇಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ತೆರಿಗೆ ದರಗಳಿವೆ ಮತ್ತು ವಿನಾಯ್ತಿಗಳಿವೆ. ಒಂದೆರಡಲ್ಲ, ಅತಿ ಎನಿಸುಷ್ಟು ಸಂಖ್ಯೆಯ ತೆರಿಗೆಗಳು ಅಲ್ಲಿವೆ. ಅಮೆರಿಕದಲ್ಲಿ ಏಕೀಕೃತಗೊಂಡ ರಾಷ್ಟ್ರೀಯ ಮಾರುಕಟ್ಟೆ ಇಲ್ಲ ಎಂದು ಯಾರೂ ಹೇಳುವಂತಿಲ್ಲ. ಒಂದು ವೇಳೆ ಯಾರಾದರೂ ಹಾಗೆ ಹೇಳಿದರೆ? ವಿಶ್ವದ ಅತಿ ದೊಡ್ಡ ಬಂಡವಾಳಶಾಹಿ ದೇಶವು ಏಕೀಕೃತಗೊಂಡಿರದ ರಾಷ್ಟ್ರೀಯ ಮಾರುಕಟ್ಟೆ ಹೊಂದಿರದ್ದರೆ, ಏಕೀಕೃತಗೊಳ್ಳದಿರುವುದು ಯಾವ ಮಹಾ ಕೊರತೆ ಎಂದು ಅವರನ್ನು ಕೇಳಬಹುದು.

ಮೌಲ್ಯ ವರ್ಧಿತ ತೆರಿಗೆ ಪದ್ಧತಿ ಅಳವಡಿಸಿಕೊಳ್ಳುವುದರಲ್ಲಿ ಮೊದಲಿಗರಾಗಿರುವ ಯೂರೋಪ್ ಒಕ್ಕೂಟದಲ್ಲಿ ಅರ್ಥಿಕ ಪರಿಸ್ಥಿತಿ ಈಗ ಎಷ್ಟರ ಮಟ್ಟಿಗೆ ಹದಗೆಟ್ಟಿದೆ ಎಂದರೆ ಅದರ ಅರ್ಥವ್ಯವಸ್ಥೆಯ ಅಸ್ತಿತ್ವವೇ ಅಲುಗಾಡುತ್ತಿದೆ.ಮೌಲ್ಯ ವರ್ಧಿತ ತೆರಿಗೆ ಪದ್ಧತಿ ಅಳವಡಿಸಿಕೊಂಡಿರುವುದಕ್ಕೂ ಮತ್ತು ಯೂರೋಪ್ ಈಗ ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ. ಅಂದರೆ, ಒಂದು ಅರ್ಥವ್ಯವಸ್ಥೆಯ ಆರೋಗ್ಯವು ಯೂರೋಪ್‌ನ ರೀತಿಯಲ್ಲಿ ವ್ಯಾಟ್ ಅಳವಡಿಸಿಕೊಂಡಿದೆಯೋ ಅಥವಾ ಅಮೆರಿಕದ ರೀತಿಯಲ್ಲಿ ಬೇರೆ ಪದ್ಧತಿ ಅಳವಡಿಸಿಕೊಂಡಿದೆಯೋ ಎಂಬುದರ ಮೇಲೆ ನಿಂತಿಲ್ಲ.

ಆದರೆ, ಅರ್ಥವ್ಯವಸ್ಥೆಯ ಆರೋಗ್ಯವು ಮತ್ತೊಂದು ಕಾರಣದ ಮೇಲೆ ಅವಲಂಬಿಸಿದೆ ಎಂಬುದು ಮಹತ್ವಪೂರ್ಣವಾಗಿದೆ. ಅದೇ ಕಾರಣದಿಂದಾಗಿಯೇ ಅಮೆರಿಕದಲ್ಲಿ ಏಕ ರೂಪದ ವ್ಯಾಟ್‌ಇಲ್ಲ. ಕಾರಣವು ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ಜೀವಂತಿಕೆಗೆ ಸಂಬಂಧಿಸಿದೆ. ಇಡೀ ದೇಶದಲ್ಲಿ ಏಕ ರೂಪದ ತೆರಿಗೆ ಇರಬೇಕೆಂಬ ನಿಲುವು ರಾಜ್ಯಗಳು ತಮಗೆ ಅನುಕೂಲವಾಗುವ ರೀತಿಯಲ್ಲಿ ತೆರಿಗೆ ವಿಧಿಸುವ ಸ್ವಾತಂತ್ರ್ಯವನ್ನು ಕಸಿಯುತ್ತದೆ. ಏಕ ರೂಪದ ತೆರಿಗೆ ವ್ಯವಸ್ಥೆಯು ರಾಜ್ಯಗಳಿಗಿರುವ ಅಧಿಕಾರವನ್ನು ಗಂಭೀರವಾಗಿ ಅತಿಕ್ರಮಿಸುತ್ತದೆ ಮತ್ತು ದೇಶದ ಒಕ್ಕೂಟ ಸ್ವರೂಪಕ್ಕೆ ಧಕ್ಕೆಯೊಡ್ಡುತ್ತದೆ.

ಒಕ್ಕೂಟ ವ್ಯವಸ್ಥೆಯ ಒತ್ತುವರಿ

ಏಕ ರೂಪದ ತೆರಿಗೆ ವ್ಯವಸ್ಥೆಯು ಒಡ್ಡುವ ಸಮಸ್ಯೆಯ ಬಗ್ಗೆ ತಜ್ಞರು ಗಮನ ಹರಿಸಿರುವುದು ಅತಿಕಡಿಮೆ. ಈ ವರೆಗೆ ನಡೆದಿರುವ ಇಡೀ ಚರ್ಚೆಯು ಜಿಎಸ್‌ಟಿಯಿಂದ ರಾಜ್ಯಗಳಿಗೆ ಆದಾಯದ ದೃಷ್ಟಿಯಿಂದ ಲಾಭವಾಗುತ್ತದೆಯೋ ಅಥವಾ ನಷ್ಟವೋ ಎಂಬುದಕ್ಕೆ ಸೀಮಿತವಾಗಿದೆ.

ಈಗಿರುವ ತೆರಿಗೆ ಪದ್ಧತಿಗೆ ಹೋಲಿಸಿದರೆ, ಜಿಎಸ್‌ಟಿಯಿಂದ ಲಾಭವೋ ಅಥವಾ ನಷ್ಟವೋ ಎಂಬುದು ಮುಖ್ಯವಾದ ಅಂಶವಲ್ಲ. ಜಿಎಸ್‌ಟಿ ಪದ್ಧತಿಗೆ ಬದಲಾವಣೆ ಹೊಂದುವುದರಿಂದ ರಾಜ್ಯ ಸರ್ಕಾರಗಳು ಭವಿಷ್ಯದಲ್ಲಿ ತಮ್ಮ ಆದ್ಯತೆಗಳಿಗನುಗುಣವಾಗಿ ತೆರಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಆಯ್ಕೆಯ ಸ್ವಾತಂತ್ರ್ಯ ಕಳೆದುಕೊಳ್ಳುವುದು ಬಹಳ ಮುಖ್ಯವಾದ ಅಂಶ.

ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆ ವಿಧಿಸುವ ಅಧಿಕಾರ ಹೊಂದಿವೆ. ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳಿವೆ. ಅವು ವಿಭಿನ್ನ ಆರ್ಥಿಕ ನೀತಿ/ನಿಲುವುಗಳನ್ನು ಹೊಂದಿವೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಅಧಿಕಾರ ಪಡೆಯಲು ಅವು ತಮ್ಮ ಪ್ರಣಾಳಿಕೆಯನ್ನು ಜನರ ಮುಂದಿಟ್ಟು ಚುನಾವಣೆಗಳಲ್ಲಿ ಸೆಣಸುತ್ತವೆ. ಜನರು ತಮಗೆ ಬೇಕೆನಿಸಿದ ಪಕ್ಷವನ್ನು ಆರಿಸುತ್ತಾರೆ. ಸರ್ಕಾರ ನಡೆಸುವ ಪಕ್ಷಗಳಿಗೆ ತಮ್ಮ ಆರ್ಥಿಕ ನೀತಿ/ನಿಲುವುಗಳನ್ನು ಜಾರಿ ಮಾಡುವ ಸ್ವಾತಂತ್ರ್ಯವಿರಬೇಕು. ಅಭಿವೃದ್ಧಿಯ ಸಲುವಾಗಿ ಬಂಡವಾಳ ಹೂಡಿಕೆಯಾಗುವಂತೆ ಪ್ರೋತ್ಸಾಹಿಸಲು ಕೆಲವು ಸರ್ಕಾರಗಳು ತೆರಿಗೆ ರಿಯಾಯ್ತಿ ಒದಗಿಸುತ್ತವೆ. ಸರ್ಕಾರಗಳಿಗೆ ಈ ವಿತ್ತೀಯ ಸ್ವಾತಂತ್ರ್ಯವಿರಬೇಕು. ಆದರೆ, ಅದು ತೆರಿಗೆಗಳನ್ನು ಇಳಿಸುತ್ತಲೇ ಹೋಗುವ ಪೈಪೋಟಿಯ ಮೇಲೆ ಓಡುವಂತಿರಬಾರದು. ಇನ್ನೂ ಕೆಲವು ಸರ್ಕಾರಗಳು ಆರೋಗ್ಯ ಮತ್ತು ಶಿಕ್ಷಣದಂತಹ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಖರ್ಚುಮಾಡುವ ಸಲುವಾಗಿ ಕೆಲವು ತೆರಿಗೆಗಳನ್ನು ಹೆಚ್ಚಿಸಬಹುದು. ಅವುಗಳಿಗೆ ಅಂತಹ ಸ್ವಾತಂತ್ರ್ಯವಿರಬೇಕು. ಈಗ ಪ್ರಸ್ತಾಪಿಸಿರುವ ಜಿಎಸ್‌ಟಿಯು ಈ ಸ್ವಾತಂತ್ರ್ಯವನ್ನು ಕಸಿಯುತ್ತದೆ. ರಾಜ್ಯ ಸರ್ಕಾರಗಳು ತೆರಿಗೆದರದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅವು ಜಿಎಸ್‌ಟಿ ಕೌನ್ಸಿಲ್‌ನ ಒಪ್ಪಿಗೆ ಪಡೆಯಬೇಕಾಗುತ್ತದೆ. ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಮತ್ತು ಪ್ರತಿ ರಾಜ್ಯದಿಂದ ಒಬ್ಬ ಪ್ರತಿನಿಧಿ ಇರುವುದರಿಂದ ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ್ದೇ ಆಗಿರುತ್ತದೆ.

ಜಿಎಸ್‌ಟಿ ಕೌನ್ಸಿಲ್ ರಚನೆಯು ನಮ್ಮ ಒಕ್ಕೂಟ ವ್ಯವಸ್ಥೆಗೆ ಉಂಟು ಮಾಡಿದ ಮಹತ್ತರ ಬದಲಾವಣೆಯಾಗುತ್ತದೆ. ಸಂವಿಧಾನದ ವಿಧಿವತ್ತಾಗಿಲ್ಲದೆ ಸ್ಥಾಪಿಸುವ ಸಂಸ್ಥೆಯೊಂದು– ಜಿಎಸ್‌ಟಿಕೌನ್ಸಿಲ್– ಸಂವಿಧಾನದನ್ವಯ ಘಟಿಸಿದ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಸಿಯುತ್ತದೆ. ಇದು ಅಧಿಕಾರದ ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ. ಈ ಬದಲಾವಣೆಯನ್ನು ಒಂದು ವೇಳೆ ಎಲ್ಲ ರಾಜ್ಯ ಸರ್ಕಾರಗಳು ಒಪ್ಪಿದರೂ ಅದು ಸಂವಿಧಾನದ ಮೂಲ ತತ್ವಗಳ ಉಲ್ಲಂಘನೆಯಾಗುವ ವಿಷಯ ಚರ್ಚಾಸ್ಪದವಾಗಿಯೇ ಉಳಿಯುತ್ತದೆ.

ರಾಜ್ಯ ಸರ್ಕಾರಗಳು ತಮ್ಮ ಇಚ್ಛಾನುಸಾರವಾಗಿ ತೆರಿಗೆ ವಿಧಿಸುವ ಸ್ವಾತಂತ್ರ್ಯದ ಪ್ರಶ್ನೆ ಮಾರಾಟ ತೆರಿಗೆಯ ಬದಲಿಗೆ ವ್ಯಾಟ್ ವ್ಯವಸ್ಥೆ ಅಳವಡಿಸಿಕೊಂಡ ಸಂದರ್ಭದಲ್ಲಿ ಎದ್ದಿತ್ತು. ವ್ಯಾಟ್‌ನಲ್ಲಿ ನಾಲ್ಕು ಬೇರೆ ಬೇರೆ ದರಗಳಿದ್ದವು. ಪ್ರಸ್ತಾಪಿತ ಜಿಎಸ್‌ಟಿಯಲ್ಲಿ ರಾಜ್ಯಗಳು ಏಕ ದರದ ತೆರಿಗೆ ವಿಧಿಸಬೇಕಾಗುತ್ತದೆ.

ಏಕ ದರದ ತೆರಿಗೆಯ ಬದಲಿಗೆ ಒಂದು ಕನಿಷ್ಠ ದರದ ರಾಜ್ಯ ಜಿಎಸ್‌ಟಿ ದರ ನಿಗದಿಪಡಿಸಿ ಅದರ ಜೊತೆಗೆ ರಾಜ್ಯಗಳು ತಮಗೆ ಒಪ್ಪಿತವಾಗುವ ಅಧಿಕದರವನ್ನು ಸೇರಿಸಲು ಅವಕಾಶವಿದ್ದಿದ್ದರೆ ರಾಜ್ಯಗಳ ಹಕ್ಕುಗಳ ಮೇಲಿನ ಒತ್ತುವರಿ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿತ್ತು ಮತ್ತು ರಾಜ್ಯಗಳು ಬಂಡವಾಳ ಹೂಡಿಕೆ ಆಕರ್ಷಿಸಲು ತೆರಿಗೆಗಳನ್ನು ಕೆಳಗಿಳಿಸುವ ಪೈಪೋಟಿಯ ಸಮಸ್ಯೆಯನ್ನು ತಿಳಿಗೊಳಿಸಿದಂತಾಗುತ್ತಿತ್ತು. ಆದರೆ, ಎನ್‌ಡಿಎ ಸರ್ಕಾರದ ಪ್ರಸ್ತಾಪ ಆ ರೀತಿಯಲ್ಲಿಲ್ಲ.

ಜಿಎಸ್‌ಟಿ ಕೌನ್ಸಿಲ್ ನಿಗದಿಪಡಿಸುವ ಏಕ ದರದ ರಾಜ್ಯ ಜಿಎಸ್‌ಟಿಯು ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ಮೇಲಿನ ಗಂಭೀರ ಒತ್ತುವರಿಯಾಗುತ್ತದೆ. ಜಿಎಸ್‌ಟಿ ಕೌನ್ಸಿಲ್ ರಾಜ್ಯಗಳ ಹಕ್ಕುಗಳ ಮೇಲೆ ಅತಿಕ್ರಮಣ ಮಾಡುವುದರ ವಿರುದ್ಧವಾಗಿ ಅನೇಕ ರಾಜ್ಯ ಸರ್ಕಾರಗಳು ತಮ್ಮ ದನಿ ಎತ್ತಿರುವುದು ಅದೇ ಕಾರಣದಿಂದ ಏಕ ದರದ ರಾಜ್ಯ ಜಿಎಸ್‌ಟಿಯ ವಿರುದ್ಧ ಎತ್ತಿದ ದನಿಯೂ ಆಗಿದೆ. ಆದ್ದರಿಂದ, ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ.

(ಇದು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ.ಪ್ರಭಾತ್ ಪಟ್ನಾಯಕ್ ಅವರ Goods and Services Tax ಲೇಖನದ ಭಾವಾನುವಾದ.)

PEÁ½ZÀÄÝ

ಯೋಗ ಖಂಡಿತವಾಗಿಯೂ ಮನಶ್ಶಕ್ತಿಯನ್ನು ಉತ್ತಮ ಪಡಿಸುತ್ತದೆ ಎಂಬುದಕ್ಕೆ ಇಲ್ಲಿದೆ ಸಾಕ್ಷಿ!

ಯೋಗದ ಮೊದಲು	ಯೋಗದ ನಂತರ
1. ಎಫ್‌ಡಿಐ ಕೆಟ್ಟದು	ಎಫ್‌ಡಿಐ ಒಳ್ಳೆಯದು
2. ಮನರೇಗ ಕೆಟ್ಟದು	ಮನರೇಗ ಒಳ್ಳೆಯದು
3. ಆಧಾರ್ ಕೆಟ್ಟದು	ಆಧಾರ್ ಒಳ್ಳೆಯದು
4. ಜಿಎಸ್‌ಟಿ ಕೆಟ್ಟದು	ಜಿಎಸ್‌ಟಿ ಒಳ್ಳೆಯದು



ವ್ಯಂಗ್ಯಚಿತ್ರ ಕೃಪೆ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್



ಸರ್ಕಾರಿ ಶಾಲೆಗಳ ವಿಲೀನ ವಿರೋಧಿಸಿ ಎಸ್‌ಎಫ್‌ಐನಿಂದ ರಾಜ್ಯಾದ್ಯಂತ ಪ್ರತಿಭಟನೆ

ರಾಜ್ಯ ಸರ್ಕಾರ ರಾಜ್ಯದಲ್ಲಿ 11 ಸಾವಿರ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲು ಹೊರಟಿರುವ ನಿಧಾರ ಖಂಡಿಸಿ ಹಾಗೂ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ವತಿಯಿಂದ ರಾಜ್ಯದ ಎಲ್ಲಾ ಶಾಸಕರ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಲು ಕರೆ ನೀಡಲಾಗಿತ್ತು.

ಕಡಿಮೆ ಹಾಜರಾತಿ ಇರುವ ಸರಕಾರಿ ಶಾಲೆಗಳನ್ನು ವಿಲೀನ ಮಾಡಬೇಕೆಂಬ ಸರಕಾರದ ಕ್ರಮವನ್ನು ಎಸ್.ಎಫ್.ಐ ವಿರೋಧಿಸಿದೆ. 10ಕ್ಕಿಂತ ಕಡಿಮೆ ಮಕ್ಕಳಿರುವ 2,168, 30ಕ್ಕಿಂತ ಕಡಿಮೆ ಮಕ್ಕಳಿರುವ 9,358 ಒಟ್ಟು 11,526 ಸರ್ಕಾರಿ ಶಾಲೆಗಳ ವಿಲೀನಕ್ಕೆ ಮುಂದಾಗಿರುವ ಸರ್ಕಾರದ ನೀತಿಯನ್ನು ವಿರೋಧಿಸಿ ಜೂನ್ 15 ರಂದು ಎಸ್. ಎಫ್.ಐ ರಾಜ್ಯಾವ್ಯಾಪಿ ಶಾಸಕರ ಕಾರ್ಯಾಲಯಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ, ಮಕ್ಕಳ ಹಾಜರಾತಿ ಕುಸಿತವಾಗಿದೆ ಎಂದು ಶಾಲೆಗಳನ್ನು ಮುಚ್ಚುವುದು ಸರಿಯಾದ ಕ್ರಮವಲ್ಲ, ಬದಲಾಗಿ ಶಿಕ್ಷಕರ ನೇಮಕ, ಕೊಠಡಿ ಸೌಲಭ್ಯ, ಇತ್ಯಾದಿ ಮೂಲ ಸೌಲಭ್ಯಗಳ ಮೂಲಕ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಮುಂದಾಗಬೇಕು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಈ ಹಿಂದೆ ಅಧಿಕಾರ ನಡೆಸಿದ್ದ ಬಿಜೆಪಿ ಸರಕಾರದ ಹಾದಿಯನ್ನೆ ರಾಜ್ಯ ಕಾಂಗ್ರೆಸ್ ಸರಕಾರವು ತುಳಿಯುತ್ತಿದೆ. ಸದಾನಂದಗೌಡರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ 3,174 ಸರಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದ್ದರು. ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ 12,740 ಸರಕಾರಿ ಶಾಲೆಗಳನ್ನು ಮುಚ್ಚುವಂತೆ ಶಿಫಾರಸ್ಸು ನೀಡಿದ್ದ ಪ್ರೊ.ಗೋವಿಂದರವರ ವರದಿಯನ್ನು ಜಾರಿ ಮಾಡಲು ಮುಂದಾಗಿದ್ದರು. ಇದನ್ನು ವಿರೋಧಿಸಿ ಎಸ್.ಎಫ್.ಐ ಸಂಘಟನೆ ರಾಜ್ಯಾದ್ಯಂತ ಸಂಘರ್ಷಾತ್ಮಕ ಪ್ರತಿಭಟನೆ ನಡೆಸಿದಾಗ ಮುಚ್ಚುವ ಪ್ರಕ್ರಿಯೆಯನ್ನು ಕೈ ಬಿಡಲಾಯಿತು. ಗಂಗಾವತಿಯಲ್ಲಿ 2011ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಾಲೆಗಳನ್ನು ಮುಚ್ಚುವುದಿಲ್ಲ ಮತ್ತು ವಿಲೀನಗೊಳಿಸುವುದಿಲ್ಲ ಎಂದು ನಿರ್ಣಯವನ್ನು ಮಾಡಲಾಗಿತ್ತು. ಆದರೆ ಈಗ ಬೂದಿ ಮುಚ್ಚಿದ ಕೆಂಡದಂತೆ ಅದು ಮತ್ತೆ ಕಾಣಿಸಿಕೊಂಡಿದೆ. ಸರಕಾರಿ ಕನ್ನಡ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚುವ ಮೂಲಕ ಬಡ ಮತ್ತು ದುರ್ಬಲ ವರ್ಗದ ಮಕ್ಕಳ ಶಿಕ್ಷಣಕ್ಕೆ ಕೊಡಲಿ ಪೆಟ್ಟು ಹಾಕಲಾಗುತ್ತಿದೆ. ಸರಕಾರಿ ಶಾಲೆಗಳನ್ನು ಮುಚ್ಚುವುದು ಅಥವಾ ವಿಲೀನಗೊಳಿಸುವ ಕಾರ್ಯ ನಾಡ ದ್ರೋಹದ ಕಾರ್ಯವಾಗಿದೆ ಎಂದು ಎಸ್‌ಎಫ್‌ಐ ಹೇಳಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ರಾಜ್ಯದ ಹಲವೆಡೆಗಳಿಂದ ಬಂದ ಪ್ರತಿಭಟನೆಯ ವರದಿಗಳು ಇಲ್ಲಿವೆ.

ಹಾವೇರಿ : ನಗರದ ಮೈಲಾರ ಮಹದೇವಪ್ಪ ವೃತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯಲ್ಲಿ ಬಂದ ವಿದ್ಯಾರ್ಥಿಗಳು ಹೊಸಮನಿ ಸಿದ್ದಪ್ಪ ವೃತ್ತದ ಮೂಲಕ ತಾಲೂಕು ಪಂಚಾಯತ ಆವರಣದಲ್ಲಿರುವ ಶಾಸಕರ ಕಛೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಿದರು. ನಂತರ ಶಾಸಕರ ಆಪ್ತ ಕಾರ್ಯದರ್ಶಿ ರಾಘವೇಂದ್ರರವರ ಮೂಲಕ ಮನವಿ ಪತ್ರ ಸಲ್ಲಿಸಿದರು.

ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಪೂಜಾರ ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರು, ಕೊಠಡಿ, ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಪೀಠೋಪಕರಣ, ಕ್ರೀಡಾ ಸಾಮಗ್ರಿಗಳು ಹಾಗೂ ಇನ್ನಿತರ ಅಗತ್ಯ ಮೂಲ ಸೌಲಭ್ಯ ಮತ್ತು ಬದಲಾಗುತ್ತಿರುವ ಇಂದಿನ ಸನ್ನಿವೇಶಕ್ಕೆ ತಕ್ಕ ಹಾಗೆ ಸೃಜನಾತ್ಮಕ ಬೋಧನಾ ಕ್ರಮವನ್ನು ಅಳವಡಿಸಿಕೊಳ್ಳಲು ಅಗತ್ಯವಿರುವ ಕ್ರಮಕೈಗೊಳ್ಳಲು ಸರ್ಕಾರ ಮುಂದಾಗದಿರುವ ಕಾರಣ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಅಲ್ಲದೆ ಖಾಸಗೀ ಶಾಲೆಗಳ ಅಬ್ಬರದ ಪ್ರಚಾರ, ಆಂಗ್ಲ ಭಾಷಾ ವ್ಯಾಮೋಹ ಮತ್ತು ಶಿಕ್ಷಣಕ್ಕೆ ಕಡಿಮೆ ಹಣಕಾಸು ನೀಡುತ್ತಿರುವ ಸರ್ಕಾರದ ನಿರ್ಲಕ್ಷದಿಂದಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಪ್ರಮುಖ ಕಾರಣಗಳಾಗಿವೆ ಎಂದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ ಮಾತನಾಡಿ ಮೂಲಸೌಲಭ್ಯಗಳ ಕೊರತೆ ಮತ್ತು ಶಿಕ್ಷಕರು ಇಲ್ಲದಿರುವುದರಿಂದ ಮಕ್ಕಳು ಸರಕಾರಿ ಶಾಲೆಗಳಿಗೆ ಆಕರ್ಷಿತರಾಗುತ್ತಿಲ್ಲ. ಮಕ್ಕಳನ್ನು ಕರೆ ತರುವ ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದರೂ ಸರಿಯಾದ ಪ್ರಚಾರ ಮತ್ತು ಅಗತ್ಯ ತಯಾರಿ, ಸಾರ್ವಜನಿಕರನ್ನು ಒಳಗೊಳಿಸದ ಕಾರಣ ವಿಫಲತೆಯ ಹಾದಿ ಹಿಡಿದಿವೆ ಎಂದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ, ಬಸನಗೌಡ ಭರಮಗೌಡ್ರ, ಲಕ್ಷ್ಮೀ, ಸವಿತಾ, ಸಾವಿತ್ರಿ, ಮಂಜುನಾಥ, ಶಿವು, ಶರಣ ಪಾಟೀಲ, ಮಲ್ಲಪ್ಪ, ಶಂಕರ ಕುರವತ್ತಿ, ಅಭಿಷೇಕ, ಸುಮಾಲತಾ, ಸುಜಾತ, ಮಾಲಾ ಹಾಗೂ ನೂರಾರುಉ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತುಮಕೂರು : ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ನಡೆಸಿದ ಎಸ್ ಎಫ್ ಐ ಕಾರ್ಯರ್ತರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಜಿಲ್ಲಾ ಕಾರ್ಯದರ್ಶಿ ಶಿವಣ್ಣ, ಸಮಿತಿ ಸದಸ್ಯರಾದ ರಾಧಾಮಣಿ, ನವೀನ್, ಪ್ರಕಾಶ್, ಮಂಜುನಾಥ ಈ, ಮುಖಂಡರಾದ ಈರಣ್ಣ, ಮಂಜ ಜಿ.ಹೆಚ್. ಮುಂತಾದವರು ಭಾಗವಹಿಸಿದ್ದರು.

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಶಾಸಕರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು. ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿರವರು ಮಾತನಾಡಿದರು. ಹೂವಿನ ಹಡಗಲಿ, ಶಿಗ್ಗಾವಿ ಸೇರಿದಂತೆ ಇನ್ನೂ ಹಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಿ ಶಾಸಕರುಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

ಹಮಾಲಿ ಕಾರ್ಮಿಕರ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ – ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್(ರಿ) ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ(ಎಂಜಿನರಿಂಗ್/ಡಿಪ್ಲಮೋ/ಇತರೆ ವೃತ್ತಿಪರ ಕೋರ್ಸ) ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾಬ್ಯಾಸ ಮಾಡುತ್ತಿರುವ ಹಮಾಲಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಸಿಂಗ್ವೀ ಟ್ರಸ್ಟ್ ಬೆಂಗಳೂರು ಇವರ ಸಹಯೋಗದೊಂದಿಗೆ ಕಳೆದ ಐದು ವರ್ಷಗಳಿಂದ ನೀಡುತ್ತಾ ಬಂದಿದೆ.

2016–17 ನೇ ವರ್ಷದಲ್ಲೂ ರಾಜ್ಯದ ಎಪಿಎಂಸಿ/ಗೋಡಾನ್/ಏರ್‌ಹೌಸ್/ ನಗರ ಮತ್ತು ಗ್ರಾಮೀಣ ಪ್ರದೇಶದ ಮಾರುಕಟ್ಟೆಗಳಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರ ಮಕ್ಕಳ ವಿದ್ಯಾಬ್ಯಾಸಕ್ಕೆ ಪ್ರೋತ್ಸಾಹಿಸುವ ಭಾಗವಾಗಿ ವಿದ್ಯಾರ್ಥಿ ವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನಿಯಮಗಳು :

1. ಎಸ್‌ಎಸ್‌ಎಲ್‌ಸಿ ಅಥವಾ ನಂತರದ ಯಾವುದೇ ತರಗತಿಯಲ್ಲಿ ಕನಿಷ್ಟ ಪ್ರಥಮ ದರ್ಜೆ(ಶೇ 60) ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.
2. ವಿದ್ಯಾರ್ಥಿಯ ತಂದೆ ಅಥವಾ ತಾಯಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್(ರಿ)ಸದಸ್ಯ/ಳಾಗಿರುವ ದಾಖಲೆ ಹಾಜರುಪಡಿಸಬೇಕು.
3. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಅರ್ಜಿಯೊಂದಿಗೆ ಪ್ರಸ್ತುತ ವರ್ಷದಲ್ಲಿ ಉತ್ತೀರ್ಣನಾಗಿರುವ ಅಂಕಪಟ್ಟಿ ಮತ್ತು 2016–17 ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಕಾಲೇಜಿಗೆ ತುಂಬಿರುವ ಫೀ ರಸೀದಿ, ಪ್ರವೇಶ ಪಡೆದಿರುವ ಕಾಲೇಜಿನ ಹೆಸರು ವಿಳಾಸದ ಝೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ನೀಡಬೇಕು.
4. ವಿದ್ಯಾರ್ಥಿ ವೇತನವನ್ನು ಚೆಕ್ ಮೂಲಕ ನೀಡಲಾಗುವುದು ಹಾಗಾಗಿ ವಿದ್ಯಾರ್ಥಿಯೂ ಕಡ್ಡಾಯವಾಗಿ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.
5. ವಿದ್ಯಾರ್ಥಿ ವಾಸ ಕುರಿತು ವಿಳಾಸ ಮತ್ತು ಅದನ್ನು ಧೃಡೀಕರಿಸುವ ಯಾವುದಾದರೂ ದಾಖಲೆಯನ್ನು ಕಡ್ಡಾಯವಾಗಿ ನೀಡಬೇಕು.
6. ಇದೊಂದು ನಿರಂತರ ವಿದ್ಯಾಬ್ಯಾಸಕ್ಕೆ ಪ್ರೊತ್ಸಾಹ ನೀಡುವ ಯೋಜನೆಯಾಗಿದ್ದು ಒಂದು ಬಾರಿ ವಿದ್ಯಾರ್ಥಿ ವೇತನ ಪಡೆದವರು ಪುನಃ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪಡೆಯಬೇಕಾದರೆ ಕನಿಷ್ಟ 60 ಶೇ ಹೆಚ್ಚಿನ ಅಂಕಗಳನ್ನು ಪಡೆಯಬೇಕು.
7. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15–07–2016

ಅರ್ಜಿಯನ್ನು ಕಳಿಸಬೇಕಾದ ವಿಳಾಸ :

ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್(ರಿ) ನಂ 40/5 ಸೂರಿಭವನ, 2ನೇ ಮೇನ್, 16 ನೇ ಕ್ರಾಸ್ ಸಂಪಂಗಿರಾಮನಗರ, ಬೆಂಗಳೂರು–27 ಮೊಬೈಲ್: 9845342467/ 9448415167

26 ಜಿಲ್ಲೆಗಳಿಗೆ ಇಎಸ್‌ಐ ವಿಸ್ತರಣೆ

ಕೇಂದ್ರ ಸರಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯು ಏಪ್ರಿಲ್–22, 2016 ರಂದು ಅಧಿಸೂಚನೆ ಮೂಲಕ ಕರ್ನಾಟಕದ ಈ ಕೆಳಗಿನ 26 ಜಿಲ್ಲೆಗಳಿಗೆ ಇಎಸ್‌ಐ(ಎಂಪ್ಲಾಮೆಂಟ್ ಸ್ಟೇಟ್ ಇನ್ಸೂರೆನ್ಸ್) ಸೌಲಭ್ಯವನ್ನು ವಿಸ್ತರಿಸಿರುವುದಾಗಿ ಪ್ರಕಟಿಸಿದೆ. ಇದೆ ಸೌಲಭ್ಯಗಳು ಎಲ್ಲಾ ಕಾರ್ಮಿಕರಿಗೂ ಸಿಗುವಂತೆ ಸಿಐಟಿಯು ಎಲ್ಲಾ ಸಂಘಗಳು ಕ್ರಮವಹಿಸಬೇಕು.

ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು ಗ್ರಾಮೀಣ ಮತ್ತು ನಗರ, ಚಾಮರಾಜನಗರ, ಚಿತ್ರದುರ್ಗ, ದಕ್ಷಿಣಕನ್ನಡ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಹಾಸನ, ಕಲಬುರಗಿ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರಕನ್ನಡ, ವಿಜಯಪುರ, ಯಾದಗಿರಿ ಜಿಲ್ಲೆಗಳು.



ಅಧಿಕಾರಕ್ಕೆ ಬಂದ ಕೇವಲ 20 ದಿವಸಗಳಲ್ಲಿ ಕೇರಳದ LDF ಸರಕಾರದ ಜನಪರ ಕಾರ್ಯಕ್ರಮಗಳು ಜಾರಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸ್ಪಂದಿಸುವ ಮನೋಭಾವ ಕೇರಳದ ಜನತೆಯ ಸೌಭಾಗ್ಯ

* ಅಂಗಡಿಗಳಲ್ಲಿ 181 ರೂಪಾಯಿ ಬೆಲೆಯ ಉದ್ದಿನ ಬೇಳೆ ಸರಕಾರೀ ನಿಯಂತ್ರಣದ ಮಾವೇಲಿ ಸ್ಟೋರ್ ಗಳಲ್ಲಿ 66 ರೂಪಾಯಿ,
* ಮೆಣಸು ಅಂಗಡಿಗಳಲ್ಲಿ 162 ರೂಪಾಯಿ ಮಾವೇಲಿ ಸ್ಟೋರ್' 75 ರೂ,,
* ಕೊತ್ತಂಬರಿ ಅಂಗಡಿಗಳಲ್ಲಿ 115 ರೂಪಾಯಿ ಮಾವೇಲಿ ಸ್ಟೋರ್ 92 ರೂ,
* ಸಕ್ಕರೆ ಅಂಗಡಿಯಲ್ಲಿ 40 ರೂಪಾಯಿ ಮಾವೇಲಿ ಸ್ಟೋರ್ 23 ರೂಪಾಯಿ
* ಜಯ ಅಕ್ಕಿ ಅಂಗಡಿಯಲ್ಲಿ 30 ರೂಪಾಯಿ ಮಾವೇಲಿ ಸ್ಟೋರ್ 23 ರೂಪಾಯಿ
* ಪಚ್ಚೆ ಹೆಸರು ಅಂಗಡಿಯಲ್ಲಿ 107 ರೂಪಾಯಿ ಮಾವೇಲಿ ಸ್ಟೋರ್ 74 ರೂಪಾಯಿ
* ತೊಗರಿ ಬೇಳೆ ಅಂಗಡಿಯಲ್ಲಿ 159 ರೂಪಾಯಿ ಮಾವೇಲಿ ಸ್ಟೋರ್ 65 ರೂಪಾಯಿ
* ಕಡಲೆ ಅಂಗಡಿಯಲ್ಲಿ 84 ರೂಪಾಯಿ ಮಾವೇಲಿ ಸ್ಟೋರ್ 43 ರೂಪಾಯಿ
* ಮಟ್ಟ ಅಕ್ಕಿ ಅಂಗಡಿಯಲ್ಲಿ 34 ರೂಪಾಯಿ ಮಾವೇಲಿ ಸ್ಟೋರ್24 ರೂಪಾಯಿ
* ಕುರುವ ಅಕ್ಕಿ ಅಂಗಡಿಯಲ್ಲಿ 29 ರೂಪಾಯಿ ಮಾವೇಲಿ ಸ್ಟೋರ್ 25 ರೂಪಾಯಿ

ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಪುಟ 3 ರಿಂದ

ರಾಜ್ಯದ ಹಲವು ಸ್ಥಳಗಳಲ್ಲಿ ಭಜರಂಗ ದಳ ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ ಎಂದು ವರದಿಯಾಗಿದೆ. ಇದು ಕೋಮು ತಿಕ್ಕಾಟಗಳು ಮತ್ತು ಉದ್ವೇಗಗಳನ್ನು ಉದ್ರೇಕಿಸಿ, ಇಂತಹ ಧ್ರುವೀಕರಣದ ಚುನಾವಣಾ ಲಾಭಗಳನ್ನು ಗಿಟ್ಟಿಸಿಕೊಳ್ಳುವ ಒಂದು ಕಸರತ್ತು ಎಂಬುದು ಸ್ಪಷ್ಟ ಇದು ಭಾರತದ ಸಾಮಾಜಿಕ ಹಂದರದ ಐಕ್ಯತೆಯನ್ನು ಬಲಿಗೊಟ್ಟು ಹಿಂದುತ್ವ ಕೋಮು ವೋಟ್ ಬ್ಯಾಂಕನ್ನು ಕ್ರೋಡೀಕರಿಸುವ ಅತ್ಯಂತ ಹೊಲಸು 'ವೋಟ್ ಬ್ಯಾಂಕ್ ರಾಜಕೀಯ' ಎಂದು ಕೇಂದ್ರ ಸಮಿತಿ ವರ್ಣಿಸಿದೆ.

ಹೆಚ್ಚುತ್ತಿರುವ ಸರ್ವಾಧಿಕಾರಶಾಹಿತ್ವ

ಮೋದಿ ಸರಕಾರದ ಸರ್ವಾಧಿಕಾರಶಾಹಿತ್ವ ಅದು ಪ್ರತಿಪಕ್ಷಗಳ ಕಾನೂನುಬದ್ಧವಾಗಿ ಚುನಾಯಿತವಾದ ಸರಕಾರಗಳನ್ನು ವಜಾ ಮಾಡಲು 356ನೇ ಕಲಮನ್ನು ಸಾರಾಸಗಟು ದುರುಪಯೋಗ ಪಡಿಸಿಕೊಳ್ಳುತ್ತಿರುವ ರೀತಿಯಲ್ಲಿ ಅತ್ಯಂತ ನಗ್ನ ರೀತಿಯಲ್ಲಿ ಬಯಲಿಗೆ ಬಂದಿದೆ. ಉತ್ತರಾಖಂಡದಲ್ಲಿ ಅದರ ಪ್ರಯತ್ನ ಸುಪ್ರಿಂ ಕೋರ್ಟಿನ ಮಧ್ಯಪ್ರವೇಶದಿಂದಾಗಿ ತಲೆಕೆಳಗಾಗಿದೆ. ಕಲಮು 356ನ್ನು ಎಷ್ಟೊಂದು ಭಂಡತನದಿಂದ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಒಂದು ಕಟುವಾದ ಟೀಕೆಯನ್ನು ಮಾಡಿದೆ. ಇದಕ್ಕೆ ಮೊದಲು ಮೋದಿ ಸರಕಾರ ಅರುಣಾಚಲ ಪ್ರದೇಶದ ಸರಕಾರವನ್ನು ಉರುಳಿಸಿತ್ತು.

ಜಿಎಸ್‌ಟಿ–
ಸರಕುಗಳು ಮತ್ತು ಸೇವೆಗಳ ತೆರಿಗೆ

ಈ ಮೋದಿ ಸರಕಾರ ಕಳೆದ ಎರಡು ವರ್ಷಗಳಲ್ಲಿ ಜಿಎಸ್‌ಟಿ ಕುರಿತಂತೆ ಒಮ್ಮತವನ್ನು ರೂಪಿಸಲಿಕ್ಕಾಗಿ ಒಂದು ಸರ್ವ ಪಕ್ಷ ಸಭೆಯನ್ನು ಕರೆಯಲು ನಿರಾಕರಿಸಿ ಹಠಮಾರಿತನವನ್ನು ತೋರಿದೆ ಎಂದು ಗಮನಿಸಿದ ಕೇಂದ್ರ ಸಮಿತಿ ಇಂದು ಮುಂದಿಟ್ಟಿರುವ ಜಿಎಸ್‌ಟಿಯಲ್ಲಿ ಕೆಲವು ದೌರ್ಬಲ್ಯಗಳಿವೆ, ಅವುಗಳನ್ನು ಪರಿಶೀಲಿಸಿ ಅವಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ ಎಂದಿದೆ.

ಜಿಎಸ್‌ಟಿಯನ್ನು ತರುವುದರೊಂದಿಗೆ ರಾಜ್ಯ ಸರಕಾರಗಳು ಸಂಪನ್ಮೂಲಗಳನ್ನು ಸಂಗ್ರಹಿಸಲು ಉಳಿದಿದ್ದ ಅಲ್ಪ–ಸ್ವಲ್ಪ ಅಧಿಕಾರವನ್ನೂ ಕಳೆದುಕೊಳ್ಳುತ್ತವೆ. ರಾಷ್ಟ್ರೀಯ ಅನಾಹುತಗಳು ಸಂಭವಿಸಿದಾಗ, ಅಥವ ಜನಗಳ ಬದುಕನ್ನು ಉತ್ತಮ ಪಡಿಸುವ ಕಲ್ಯಾಣ ಯೋಜನೆಗಳಿಗೆ ಹಣಕ್ಕಾಗಿ ರಾಜ್ಯ ಸರಕಾರಗಳು ಈಗ ಕೇಂದ್ರ ಸರಕಾರದ ಮರ್ಜಿಗೆ ಒಳಗಾಗುತ್ತವೆ. ಅಲ್ಲದೆ ಜಿಎಸ್‌ಟಿಯನ್ನು ಆರಂಭಿಸು ವುದರಿಂದಾಗಿ ರಾಜ್ಯಗಳು ಕಳಕೊಳ್ಳುವ ಆದಾಯಕ್ಕೆ ಪರಿಹಾರ ಕೊಡುವ ವ್ಯವಸ್ಥೆಯನ್ನು ಸರಿಯಾಗಿ ಪರಿಶೀಲಿಸಬೇಕಾಗಿದೆ. ಪ್ರಧಾನ ಮಂತ್ರಿಗಳು ಇವನ್ನು ಚರ್ಚಿಸಲು ಎಲ್ಲ ರಾಜ್ಯಗಳ ಹಣಕಾಸು ಮಂತ್ರಿಗಳ ಒಂದು ಸಭೆಯನ್ನು ಕರೆದು ಈ ಬಗ್ಗೆ ಆಮೂಲಾಗ್ರವಾಗಿ ಚರ್ಚಿಸಿ ಒಂದು ಒಮ್ಮತಕ್ಕೆ ಬರಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹ ಪಡಿಸಿದೆ.

ಚುನಾವಣಾ ಸುಧಾರಣೆಗಳು

ಇತ್ತೀಚಿನ ರಾಜ್ಯಸಭಾ ಚುನಾವಣೆಗಳು ಮತ್ತೊಮ್ಮೆ ಹಣಶಕ್ತಿಯ ಆತಂಕಕಾರಿ ಬಳಕೆಯನ್ನು ದೃಢಪಡಿಸಿವೆ. ಇದು ಪ್ರಜಾಪ್ರಭುತ್ವವನ್ನು ವಿಕೃತಗೊಳಿಸುತ್ತದೆ, ಮತದಾರರ ಮೇಲೆ ದುಷ್ಪ್ರಭಾವ ಬೀರಿ ಸಂಬಂಧಪಟ್ಟ ಅಭ್ಯರ್ಥಿಗಳ ಮತ್ತು ಪಕ್ಷಗಳ ರಾಜಕೀಯ ಮತ್ತು ಧೋರಣೆಗಳನ್ನು ಚರ್ಚಿಸುವ ಹಕ್ಕನ್ನು ಅವರಿಗೆ ನಿರಾಕರಿಸುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಚುನಾವಣೆಗಳಲ್ಲಿ ಹಣದ ಪ್ರಭಾವವನ್ನು ತಡೆಹಿಡಿಯಲು ಚುನಾವಣಾ ಆಯೋಗ ಎಲ್ಲ ರಾಜಕೀಯ ಪಕ್ಷಗಳೊಂದಿಗೆ ತುರ್ತು ಸಮಾಲೋಚನೆಗಳನ್ನು ನಡೆಸಬೇಕು ಎಂದು ಕೇಂದ್ರ ಸಮಿತಿ ಕರೆ ನೀಡಿದೆ.

ಎನ್‌ಜಿಓಗಳು

ಸರ್ಕಾರೇತರ ಸಂಘಟನೆ(ಎನ್‌ಜಿಓ)ಗಳಿಗೆ ವಿದೇಶಿ ನಿಧಿಗಳ ಹರಿವು ಭಾರತೀಯ ಕಾನೂನು ಮತ್ತು ವಿದೇಶಿ ವಂತಿಗೆಗಳ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ)ಗೆ ಅನುಗುಣವಾಗಿರುವಂತೆ ಕಟ್ಟುನಿಟ್ಟಾದ ಉಸ್ತುವಾರಿ ಇರಬೇಕು ಎಂಬ ಸಿಪಿಐ(ಎಂ)ನ ಅಭಿಪ್ರಾಯವನ್ನು ಪುನರುಚ್ಚರಿಸಿದ ಕೇಂದ್ರ ಸಮಿತಿ, ಈ ಹೆಸರಲ್ಲಿ ಮೋದಿ ಸರಕಾರ ಗುಜರಾತ್ ಹತ್ಯಾಕಾಂಡಕ್ಕೆ ಬಲಿಯಾದವರಿಗೆ ನ್ಯಾಯ ಕೊಡಿಸಲು ಹೋರಾಡುತ್ತಿರುವವವರ ವಿರುದ್ಧ ನಿರಂತರವಾಗಿ ರಾಜಕೀಯ ಹಗೆ ತೀರಿಸಿಕೊಳ್ಳಲು ವಹಿಸುತ್ತಿರುವ ಕ್ರಮಗಳನ್ನು ಖಂಡಿಸಿದೆ. ಸಬ್‌ರಂಗ್ ಟ್ರಸ್ಟಿನ ವಿರುದ್ಧ ಕ್ರಮಗಳು ಇಂತಹ ದುಷ್ಟ ಪ್ರಚಾರದ ಭಾಗ, ಅವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಅಮೆರಿಕಾ–ಜಪಾನ್–ಭಾರತ
ಜಂಟಿ ನೌಕಾ ಕವಾಯತುಗಳು

ಇತ್ತೀಚೆಗೆ ಭಾರತ ಹಲವಾರು ಒಪ್ಪಂದಗಳನ್ನು ಮಾಡಿಕೊಂಡು ಅಮೆರಿಕಾದ ಕಿರಿಯ ಸಾಮರಿಕ ಭಾಗೀದಾರನಾಗಲು ಒಪ್ಪಿಕೊಂಡ ಮೇಲೆ ಈಗ ದಕ್ಷಿಣ ಚೀನಾ ಸಮುದ್ರದಲ್ಲಿ ಅಮೆರಿಕಾ ಮತ್ತು ಜಪಾನ್‌ನ ನೌಕಾ ಕವಾಯತುಗಳಲ್ಲಿ ಭಾಗಿಯಾಗಿದೆ. 'ಮಲಬಾರ್ ನೌಕಾ ಕವಾಯತುಗಳು' ಎಂಬ ಸಂಕೇತನಾಮದ ಈ ಕವಾಯತು ಈ ಹಿಂದೆ ಅರಬ್ಬೀ ಸಮುದ್ರದ ಭಾರತದ ಕರಾವಳಿಗುಂಟ ನಡೆದಿತ್ತು. ಈಗ ಇದನ್ನು ದಕ್ಷಿಣ ಚೀನಾ ಸಮುದ್ರಕ್ಕೆ ಒಯ್ದಿರುವುದು ನಮ್ಮ ಸ್ವತಂತ್ರ ವಿದೇಶಾಂಗ ಧೋರಣೆ ಮತ್ತು ಭದ್ರತಾ ಕಾಳಜಿಗಳ ಮೇಲೆ ಹಲವು ಗಂಭೀರ ಪರಿಣಾಮಗಳನ್ನು ಬೀರಲಿದೆ ಎಂದು ಕೇಂದ್ರ ಸಮಿತಿ ಎಚ್ಚರಿಸಿದೆ.

ದಕ್ಷಿಣ ಚೀನಾದಲ್ಲಿನ ವಿವಾದಗಳನ್ನು ಅಂತರ್ರಾಷ್ಟ್ರೀಯ ಕಾನೂನುಗಳು, ಮತ್ತು ಈಗಾಗಲೇ ಸ್ಥಾಪಿತವಾಗಿರುವ ಅಂತರ್ರಾಷ್ಟ್ರೀಯ ವಿಧಾನಗಳ ಪ್ರಕಾರ ಇತ್ಯರ್ಥ ಮಾಡಿಕೊಳ್ಳಬೇಕು ಎಂಬ ಸಿಪಿಐ(ಎಂ) ನಿಲುವನ್ನು ಪುನರುಚ್ಚರಿಸಿರುವ ಕೇಂದ್ರ ಸಮಿತಿ ಭಾರತ ಸದಾ ತಳೆದು ಕೊಂಡು ಬಂದಿರುವ ಈ ಧೋರಣೆಯ ನಿಲುವಿಗೆ ಭಾರತ ಸರಕಾರ ಬದ್ಧವಾಗಿರಬೇಕು ಎಂದು ಅದು ಹೇಳಿದೆ.

ಈ ರಕ್ಷಣಾ ಒಪ್ಪಂದಗಳ ಪರಿಣಾಮವಾಗಿ ಸರಕಾರ ಜೂನ್ 20ರಂದು ರಕ್ಷಣೆ, ವಿಮಾನಯಾನ ಮತ್ತು ಔಷಧಿ ತಯಾರಿಕಾ ವಲಯದಲ್ಲಿ 100ಶೇ. ಎಫ್‌ಡಿಐಗೆ



ಅವಕಾಶ ನೀಡಲು ನಿರ್ಧರಿಸಿದೆ. ಇದು ಭಾರತದ ಹಿತದಲ್ಲಿ ಇಲ್ಲ, ದೇಶದ ಆಂತರಿಕ ಭದ್ರತೆ ಹಾಗೂ ಸಾರ್ವಭೌಮತೆ ಕುರಿತಂತೆ ಹಲವಾರು ಪ್ರಶ್ನೆಗಳನ್ನು ಇದು ಎತ್ತಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಮೋದಿ ಸರಕಾರ ಏರ್ಪಡಿಸಿಕೊಂಡಿರುವ ಭಾರತ–ಅಮೆರಿಕಾ ಸಾಮರಿಕ ಭಾಗೀದಾರಿಕೆಯಿಂದಾಗಿ ಈಗ ಸಾರಾಸಗಟು ಎಫ್‌ಡಿಐ ಅವಕಾಶವನ್ನು ಪ್ರಕಟಿಸಿದೆ ಎಂದು ಅಭಿಪ್ರಾಯ ಪಟ್ಟಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಿರುವ ವಿದೇಶಿ ಬಂಡವಾಳಕ್ಕೆ, ನಮ್ಮ ಆಂತರಿಕ ಆರ್ಥಿಕ ವ್ಯವಸ್ಥೆಯ ಹಿತಗಳನ್ನು ಬಲಿಗೊಟ್ಟು ಸೂಪರ್ ಲಾಭಗಳನ್ನು ಗಿಟ್ಟಿಸಲು ಭಾರತ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಅದು ಹೇಳಿದೆ.

ವಿಧಾನ ಸಭಾ ಚುನಾವಣೆಗಳ ವಿಮರ್ಶೆ

ಇತ್ತೀಚಿನ ವಿಧಾನ ಸಭಾ ಚುನಾವಣೆಗಳ ವಿಮರ್ಶೆ ನಡೆಸಿದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ರಾಜ್ಯ ವಿಧಾನಸಭಾ ಚುನಾವಣೆಗಳ ಈ ಸುತ್ತಿನಲ್ಲಿ ಬಿಜೆಪಿಗೆ ಗಮನಾರ್ಹ ಗಳಿಕೆ ಆಗಿದೆ ಎಂದು ಗಮನಿಸಿತು. ಅದು ಅಸ್ಸಾಂನಲ್ಲಿ ಮೊದಲ ಬಾರಿಗೆ ಸರಕಾರ ರಚಿಸಿದೆ. ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಸ್ಥಾನ ಗಳಿಸಕೊಂಡಿದೆ. ಕೇರಳದಲ್ಲಿ ಅದು ಒಂದು ಆಕ್ರಾಮಕ ಪ್ರಚಾರ ನಡೆಸಿತು, ಚುನಾವಣೆಗಳ ನಂತರ ಸಿಪಿಐ(ಎಂ) ವಿರುದ್ಧ ಗಂಭೀರ ಹಿಂಸಾಚಾರವನ್ನು ನಡೆಸುತ್ತಿದೆ. ಕಾಂಗ್ರೆಸ್ ಒಟ್ಟಾರೆಯಾಗಿ ಈ ಚುನಾವಣಾ ಸಉತ್ತಿನಲ್ಲಿ ಹಿನ್ನಡೆ ಅನುಭವಿಸಿದೆ. ಬಿಜೆಪಿ ತನ್ನ ಗಳಿಕೆಯಿಂದಾಗಿ ಚುನಾವಣೆಗಳ ನಂತರ ದೇಶದ ರಾಜಕೀಯದಲ್ಲಿ ಹೆಚ್ಚು ಆಕ್ರಮಣಕಾರೀ ನಿಲುವು ಪ್ರದರ್ಶಿಸುವ ಧೈರ್ಯ ಮಾಡುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಕೇರಳ

ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಒಂದು ಬಹಳ ಮಹತ್ವದ ವಿಜಯ ಗಳಿಸಿದೆ. ಯುಡಿಎಫ್‌ನ್ನು ಅಧಿಕಾರದಿಂದ ಇಳಿಸುವ ಮತ್ತು ಬಿಜೆಪಿಯನ್ನು ತಡೆದು ನಿಲ್ಲಿಸುವ ಘೋಷಣೆಗಳೊಂದಿಗೆ ಎಲ್‌ಡಿಎಫ್ ತನ್ನ ಪ್ರಚಾರವನ್ನು ನಡೆಸಿತು. ಕಂಪನೀಕರಣ, ಭ್ರಷ್ಟಾಚಾರ ಮತ್ತು ಕೋಮುವಾದದ ವಿರುದ್ಧ ಪಕ್ಷ ಒಂದು ಬಲವಾದ ನಿಲುವು ತಳೆಯಿತು. ವಿಧಾನಸಭಾ ಚುನಾವಣೆಗಳಲ್ಲಿ ಎಲ್‌ಡಿಎಫ್ ವಿಜಯ ಬಿಜೆಪಿ ಮತ್ತು ಕಾಂಗ್ರೆಸಿಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಕಟ್ಟುವ ಧೋರಣೆಗೆ ಸಿಕ್ಕಿರುವ ಮಾನ್ಯತೆ ಎಂದು ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ತಮಿಳುನಾಡು

ಇಲ್ಲಿನ ವಿಧಾನಸಭಾ ಫಲಿತಾಂಶಗಳು ಸಿಪಿಐ(ಎಂ)ಗೆ ನಿರಾಶಾದಾಯಕ. ಆರು ಪಕ್ಷಗಳ ಮೈತ್ರಿಕೂಟಕ್ಕೆ ಒಂದೂ ಸ್ಥಾನವನ್ನು ಗೆಲ್ಲಲಾಗಲಿಲ್ಲ. ತಮಿಳುನಾಡು ಚುನಾವಣೆಗಳ ಒಂದು ಪ್ರಧಾನ ಲಕ್ಷಣವೆಂದರೆ ಹಣಬಲದ ಬಳಕೆ ಎಂದು ಕೇಂದ್ರ ಸಮಿತಿ ಗಮನಿಸಿತು. ಎಐಎಡಿಎಂಕೆ ಮತ್ತು ಡಿಎಂಕೆ ಎರಡೂ ಹೆಚ್ಚಿನ ಕ್ಷೇತ್ರಗಳಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ನಗದು ಹಣವನ್ನು ಮತದಾರರಿಗೆ ಹಂಚಿದೆ.

ಅಸ್ಸಾಂ

ಸಿಪಿಐ(ಎಂ) ಆರು ಎಡಪಕ್ಷಗಳ ಮೈತ್ರಿಕೂಟದ ಭಾಗವಾಗಿ ಸ್ಪರ್ಧಿಸಿತು. ಫಲಿತಾಂಶಗಳು ಪಕ್ಷಕ್ಕೆ ನಿರಾಶಾದಾಯಕ, ಒಂದು ಸೀಟನ್ನೂ ಗೆಲ್ಲಲಾಗಲಿಲ್ಲ.

ಕಾಂಗ್ರೆಸನ್ನು ಅಧಿಕಾರದಿಂದ ಹೊರ ಹಾಕಬೇಕು, ಬಿಜೆಪಿಯನ್ನು ಸೋಲಿಸಬೇಕು ಮತ್ತು ಎಡ ಅಭ್ಯರ್ಥಿಗಳನ್ನು ಚುನಾಯಿಸಿ ಜನತೆಯ ಐಕ್ಯತೆಯನ್ನು ಬಲಗೊಳಿಸಬೇಕು, ಹಾಗೂ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧ್ಯಗೊಳಿಸಬೇಕು ಎಂದು ಎಡಪಕ್ಷಗಳು ಮತದಾರರಿಗೆ ಮನವಿ ಮಾಡಿದ್ದವು.

ಅಸ್ಸಾಂನಲ್ಲೂ, ತಮಿಳುನಾಡಿನಲ್ಲೂ ವರ್ಗ ಮತ್ತು ಸಾಮೂಹಿಕ ಹೋರಾಟಗಳ ಮೂಲಕ ಪಕ್ಷದ ಸ್ವತಂತ್ರ ಶಕ್ತಿಯನ್ನು ಕಟ್ಟಿ ಬೆಳೆಸುವುದಕ್ಕೆ ಮತ್ತು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಲು ಒತ್ತು ನೀಡಬೇಕಾಗಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಪಶ್ಚಿಮ ಬಂಗಾಲ

ತೃಣಮೂಲ ಕಾಂಗ್ರೆಸ್ 294ರಲ್ಲಿ 211 ಸ್ಥಾನಗಳನ್ನು ಗೆದ್ದುಕೊಂಡು ಅಧಿಕಾರಕ್ಕೆ ಮರಳಿದೆ. ಅದು ಮೂರನೇ ಎರಡು ಬಹುಮತವನ್ನು ಗಳಿಸಿದೆ. ನಮ್ಮ ಪಕ್ಷ ಮತ್ತು ಎಡರಂಗ ಬಹಳ ಕಷ್ಟ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಈ ಚುನಾವಣೆಗಳು ನಡೆದವು. ಕಳೆದ ಐದು ವರ್ಷಗಳಲ್ಲಿ ತೃಣಮೂಲ ಕಾಂಗ್ರೆಸ್ ಹರಿಯ ಬಿಟ್ಟಿರುವ ಭಯೋತ್ಪಾದನೆ ಚುನಾವಣಾ ಪ್ರಚಾರ ಆರಂಭವಾಗುವ ಮೊದಲೇ ನಮ್ಮ 176 ಸಂಗಾತಿಗಳನ್ನು ಆಪೋಶನ ಪಡೆದಿದೆ. ಅಲ್ಲದೆ ಪಕ್ಷದ ಸದಸ್ಯರುಗಳ ಮತ್ತು ಹಿತೈಷಿಗಳ ಸುಮಾರು 60ಸಾವಿರ ಕುಟುಂಬಗಳು ಆಂತರಿಕವಾಗಿ ಸ್ಥಾನಾಂತರಗೊಂಡಿವೆ. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳಲ್ಲಿ ದಾಂಧಲೆ ಎಬ್ಬಿಸಿ ಲೂಟಿ ಮಾಡಲಾಗಿದೆ, ನಿರ್ದಿಷ್ಟವಾಗಿ ಮಹಿಳಾ ಸಂಗಾತಿಗಳು ಮುಂತಾದವರ ಮೇಲೆ ಗುರಿಯಿಡಲಾಗಿದೆ.

ಎರಡು ಕೋಟಿ 15ಲಕ್ಷ ಜನ ಈ ಭಯೋತ್ಪಾದನೆ ಮತ್ತು ಹಿಂಸಾಚಾರದ ರಾಜಕೀಯವನ್ನು ಧೈರ್ಯದಿಂದ ಎದುರಿಸಿ ತೃಣಮೂಲ ಕಾಂಗ್ರೆಸನ್ನು ಅಧಿಕಾರದಿಂದ ಹೊರಹಾಕಬೇಕು ಮತ್ತು ಬಿಜೆಪಿಯನ್ನು ಮೂಲೆಗೊತ್ತಬೇಕು ಎಂಬ ಘೋಷಣೆಯ ಪರವಾಗಿ ಮತ ಚಲಾಯಿಸಿದ್ದಾರೆ. ಅವರಿಗೆ ಕೇಂದ್ರ ಸಮಿತಿ ಹಾರ್ದಿಕ ನಮನಗಳನ್ನು ಸಲ್ಲಿಸಿತು.

ತೃಣಮೂಲ ಕಾಂಗ್ರೆಸ್ ಪ್ರತಿಪಕ್ಷಗಳ ಕಾರ್ಯಕರ್ತರ ಮೇಲೆ ವ್ಯಾಪಕ ಹಿಂಸಾಚಾರವನ್ನು ಹರಿಯಬಿಟ್ಟಿದೆ. ಹಲವು ಸಿಪಿಐ(ಎಂ) ಕಾರ್ಯಕರ್ತರ ಹತ್ಯೆಯಾಗಿದೆ, 600ಕ್ಕೂ ಹೆಚ್ಚು ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳಲ್ಲಿ ದಾಂಧಲೆ ಎಬ್ಬಿಸಲಾಗಿದೆ, ಕೆಲವನ್ನು ಸುಟ್ಟು ಹಾಕಲಾಗಿದೆ. ಎಲ್ಲ ಪ್ರತಿಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ಗುರಿಯಿಟ್ಟಿದ್ದರೂ ಈ ದಾಳಿಗಳಿಗೆ ನಿರ್ದಿಷ್ಟವಾಗಿ ತೃಣಮೂಲ ಕಾಂಗ್ರೆಸ್ ಸೋತಿರುವ ಕ್ಷೇತ್ರಗಳಲ್ಲಿ ಗುರಿಮಾಡಿವೆ. ವ್ಯಾಪಕ ಬಾಂಬ್ ದಾಳಿಗಳು, ಬೆಂಕಿ ಹಚ್ಚುವುದು ಮತ್ತು ದೊಡ್ಡ ಪ್ರಮಾಣದಲ್ಲಿ ಹಣ ಕೀಳುತ್ತಿರುವ ವರದಿಗಳು ಬರುತ್ತಿವೆ.

ಇಂತಹ ಸನ್ನಿವೇಶದಲ್ಲಿ ಪಶ್ಚಿಮ ಬಂಗಾಲದ ಜನತೆ ರಾಜ್ಯದಲ್ಲಿ ಐಕ್ಯತೆಯಿಂದ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಕೊಲೆಯನ್ನು ಪ್ರತಿರೋಧಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಈ ಅಭೂತಪೂರ್ವ ಹಿಂಸಾಚಾರಕ್ಕೆ ಜನತೆಯ ಅತ್ಯಂತ ವಿಶಾಲ ಪ್ರತಿರೋಧದ ಬಲವೇ ಉತ್ತರ ಎಂದು ಅದು ಹೇಳಿದೆ.

ಪಶ್ಚಿಮ ಬಂಗಾಲದಲ್ಲಿ ಅನುಸರಿಸಿದ ಚುನಾವಣಾ ತಂತ್ರಗಳು ಕಾಂಗ್ರೆಸಿನೊಂದಿಗೆ ಮೈತ್ರಿ ಅಥವ ಹೊಂದಾಣಿಕೆ ಬೇಡ ಎಂಬ ಕೇಂದ್ರ ಸಮಿತಿಯ ನಿರ್ಣಯಕ್ಕೆ ಅನುಗುಣವಾಗಿ ಇಲ್ಲ ಎಂಬ ತೀರ್ಮಾನಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಬಂದಿದೆ. ಇದನ್ನು ಸರಿಪಡಿಸಬೇಕು ಎಂದಿರುವ ಕೇಂದ್ರ ಸಮಿತಿ ಪಕ್ಷದ 21ನೇ ಮಹಾಧಿವೇಶನ ಅಂಗೀಕರಿಸಿರುವ ರಾಜಕೀಯ–ಕಾರ್ಯತಂತ್ರಾತ್ಮಕ ದಾರಿಗೆ ಬದ್ಧವಾಗಿರಬೇಕಾದುದರ ಮಹತ್ವವನ್ನು ಒತ್ತಿ ಹೇಳಿತು.

ಪಕ್ಷದ ರಾಜ್ಯ ಮುಖಂಡತ್ವದೊಂದಿಗೆ ಸಮಾಲೋಚಿಸಿಕೊಂಡು ಇದರ ಜಾರಿಯಾಗುವಂತೆ ನೋಡಿಕೊಳ್ಳಲು ಕೇಂದ್ರ ಸಮಿತಿ ಪೊಲಿಟ್‌ಬ್ಯುರೊಗೆ ಅಧಿಕಾರ ನೀಡಿತು.

ಪಕ್ಷದಿಂದ ಉಚ್ಚಾಟನೆ

ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಸದಸ್ಯರಲ್ಲೊಬ್ಬರಾದ ಜಗ್ಮತಿ ಸಂಗ್ವಾನ್ ಅವರನ್ನು ಒಟ್ಟು ಅಶಿಸ್ತಿಗಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲು ನಿರ್ಧರಿಸಿದೆ.

JANASHAKTHI KANNADA VARA PATRIKE JULY 3, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026

RNI No. KARKAN /2006/17926 Posted on every Satuarday
Licensed to Post without prepayment License No. WPP-283

ರೈತರು ಸಹಕಾರ ಸಂಘಗಳ ಸ್ಥಾಪನೆ ಮೂಲಕ ಉತ್ತಮ ಬೆಲೆ ಪಡೆಯಲು ಸಾಧ್ಯ

ವರದಿ: ಎಂ.ವಿಜಯಕೃಷ್ಣ



ಜಾಗತೀಕರಣದಿಂದಾಗಿ ರೈತರು ಬೆಳೆಯುವ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರು ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಉತ್ತಮ ಬೆಲೆ ಪಡೆಯಲು ಅವಕಾಶಗಳು ಇವೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಸಹ ಕಾರ್ಯದರ್ಶಿ ಹಾಗೂ ಕೇರಳದ ಮಾಜಿ ಶಾಸಕ ಕೃಷ್ಣಪ್ರಸಾದ್ ಅಭಿಪ್ರಾಯಪಟ್ಟರು.

ಎಐಕೆಎಸ್‌ನ ಅಖಿಲ ಭಾರತ ಮಂಡಳಿ(ಎಐಕೆಎಸ್) ಸಭೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಹಾಗೂ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಕುರಿ ಮತ್ತು ಕೋಳಿ ಸಾಕಾಣಿಕೆದಾರರ ಸಹಕಾರ ಸಂಘಗಳ ಸ್ಥಾಪನೆ ರೈತರ ಆದಾಯ ಹೆಚ್ಚಿಸುವಲ್ಲಿ ಇವುಗಳ ಪಾತ್ರ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಹಕಾರಿ ಕ್ಷೇತ್ರವು ದೇಶದ ಕೆಲವು ರಾಜ್ಯಗಳನ್ನು ಹೊರತುಪಡಿಸಿ, ಬಹುತೇಕ ಕಡೆ ಅಭಿವೃದ್ಧಿಯಾಗಿಲ್ಲ. ಸಹಕಾರಿ ರಂಗವು ರಾಜಕೀಯ ನಿಯಂತ್ರಣದಲ್ಲಿ ಸಿಲುಕಿದೆ. ಸರ್ಕಾರಗಳ ನೀತಿಗಳಿಂದಾಗಿ ರೈತರು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಕೃಷಿ ದುಬಾರಿಯಾಗಿದ್ದು, ಕೃಷಿಗೆ ಮಾಡಿದ ಸಾಲದ ಬಾಧೆ ತಾಳಲಾರದೇ ರೈತರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಹಲವಾರು ಸಂಕಷ್ಟದ ಮಧ್ಯೆ ಬೆಳೆದ ಬೆಳೆಗಳಿಗೆ ಇಂದಿನ ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ನ್ಯಾಯಯುತ ಬೆಲೆ ಸಿಗದೇ ರೈತರು ಶೋಷಣೆಗೆ ಗುರಿಯಾಗುತ್ತಿದ್ದಾರೆ. ರೈತರು ಬೆಳೆದ ಬೆಳೆಗಳನ್ನು ಉದ್ದಿಮೆಗಳು ಮತ್ತೊಂದು ಸರಕಾಗಿ ಪರಿವರ್ತನೆ ಮಾಡಿದ ನಂತರ ಅವುಗಳ ಬೆಲೆಗಳಲ್ಲಿ ಭಾರೀ ವ್ಯತ್ಯಾಸ ಕಂಡು ಬರುತ್ತಿದೆ. ಅಂದರೆ ರೈತರು ಬೆಳೆದ ಬೆಳೆಗೆ ಕೇವಲ 10 ರಷ್ಟು ಬೆಲೆ ಸಿಕ್ಕರೆ, ಇದೇ ಬೆಳೆಯಿಂದ ಸಂಸ್ಕರಣಗೊಂಡ ವಸ್ತುವಿಗೆ ಶೇ.90 ರಷ್ಟು ಬೆಲೆ ದೊರೆಯುತ್ತಿದೆ ಎಂದು ವಿವರಿಸಿದರು.

ಜಾಗತೀಕರಣಕ್ಕೂ ಮುನ್ನಾ ರೈತರು ಬೆಳೆಯುವ ಬೆಳೆಗಳು, ಕುರಿ ಮತ್ತು ಕೋಳಿ ಸಾಕಾಣಿಕೆ ಮತ್ತಿತರರ ಕುಸುಬುಗಳಿಗೆ ಸರ್ಕಾರ ಸಬ್ಸಿಡಿ, ಪ್ರೋತ್ಸಾಹಧನ ನೀಡುತ್ತಿದ್ದವು. 1992 ರಲ್ಲಿ ಜಾಗತೀಕರಣ ನೀತಿಗಳು ನಮ್ಮ ದೇಶದಲ್ಲಿ ಜಾರಿಗೊಂಡ ನಂತರ ಆಡಳಿತ ನಡೆಸುತ್ತಿರುವ ಎಲ್ಲಾ ರಾಜಕೀಯ ಪಕ್ಷಗಳು ರೈತರಿಗೆ ನೀಡುವ ಪ್ರೋತ್ಸಾಹಧನ, ಸಬ್ಸಿಡಿಯನ್ನು ಹಂತ ಹಂತವಾಗಿ ಕಡಿತ ಮಾಡುತ್ತಿವೆ. ದೇಶ ವಿದೇಶದ ಬಹುರಾಷ್ಟ್ರೀಯ ಕಂಪನಿಗಳು ಉನ್ನತ ತಾಂತ್ರಜ್ಞಾನ ಬಳಸಿ ಕೃಷಿ ಕ್ಷೇತ್ರದಲ್ಲಿ ಸಕ್ರಿಯವಾಗಿರುವುದರಿಂದ ಇವರ ಜೊತೆ ಪೈಪೋಟಿ ನಡೆಸಲು ಸಾಧ್ಯವಾಗದೆ ಗ್ರಾಮೀಣ ಪ್ರದೇಶದ ರೈತರಿಗೆ ಅಪಾರ ನಷ್ಟವಾಗುತ್ತಿದ್ದು, ಈ ಬಹುರಾಷ್ಟ್ರೀಯ ಕಂಪನಿಗಳು ದೊಡ್ಡ ಮಟ್ಟದಲ್ಲಿ ಲಾಭಗಳಿಸುತ್ತಿವೆ. ಸರ್ಕಾರದ ನೀತಿಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲಕರವಾಗಿದ್ದು, ರೈತರು ನಷ್ಟದಿಂಧಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

ಇಂತಹ ಪರಿಸ್ಥಿತಿಯಲ್ಲಿ ರೈತರು ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಸಂಘಗಳ ಮೂಲಕ ಆಹಾರ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಂಡರೆ ರೈತರಿಗೆ ಹೆಚ್ಚಿನ ಲಾಭ ದೊರೆ–ಯುತ್ತದೆ. ಕೇರಳದಲ್ಲಿ ಕುರಿ, ಕೋಳಿ, ಎಮ್ಮೆ ಮಾಂಸದ ಸಹಕಾರಿ ಸ'ಂಘ'ಗ'ಳ'ನ'್ನ ಸ್ಥಾಪಿಸಿದ್ದು, ಅವು ತಮ್ಮದೇ ಆದಂತಹ ಸಂಸ್ಕರಣ ಘಟಕಗಳು ಮಾರುಕಟ್ಟೆಯನ್ನು ಹೊಂದಿದೆ, ಈ ಸಹಕಾರ ಸಂಘಗಳನ್ನು ಸ್ಥಾಪಿಸಿದ ನಂತರ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕವಾಗಿ ಅನಕೂಲವಾಗಿದೆ ಎಂದು ತಿಳಿಸಿದರು.


ಕುರಿ ಮತ್ತು ಕೋಳಿ ಸಾಕಾಣಿಕೆ ಕುರಿತು ರಾಜ್ಯ ಸರ್ಕಾರದ ನಿಲುವುಗಳ ಬಗ್ಗೆ ಕುರಿ ಮಂಡಳಿಯ ತಾಂತ್ರಿಕ ಸಹಾಯಕ ಅಧಿಕಾರಿ ಡಾ.ಸೀತಾರಾಮ್ ಕೋಲಾರ ಜಿಲ್ಲೆ ಯಾವುದೇ ನದಿ ನಾಲೆಗಳು ಇಲ್ಲದ ಬರಡು ಪ್ರದೇಶವಾಗಿದ್ದು, ಇಲ್ಲಿನ ವಾತಾವರಣವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡರೆ ರೈತರು ಆರ್ಥಿಕವಾಗಿ ಚೈತನ್ಯವಂತರಾಗಲು ಸಾಧ್ಯವಿದೆ, ಕುರಿ ಸಾಕಾಣಿಕೆಗೆ ಸರ್ಕಾರದಿಂದ ಹಲವು ರೀತಿಯ ಪ್ರೋತ್ಸಾಹ ಸಿಗುತ್ತಿದ್ದು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭ ಗಳಿಸಲು ಸಾಧ್ಯವಿದೆ ಎಂದು ಅಭಿಪ್ರಾಯ ಪಟ್ಟರು. ಕೋಲಾರ ಜಿಲ್ಲೆಯ ವಾತಾವರಣದಲ್ಲಿ ಬನ್ನೂರು ಮತ್ತು ನಲ್ಲೂರು ಕುರಿ ತಳಿ ಹೆಚ್ಚು ಸೂಕ್ತವಾಗಿವೆ. ಈ ತಳಿಗಳ ಬಿತ್ತನೆ ಟಗರನ್ನು ಶೇ.50 ರಷ್ಟು ರಿಯಾಯಿತಿಯಲ್ಲಿ ನೀಡಲಾಗುತ್ತಿದೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ರಿಯಾಯಿತಿಯೊಂದಿಗೆ ಹತ್ತು ಕುರಿಗಳು, ನಿರ್ಗತಿಕ ವಿಧವೆಯರಿಗೆ ಶೇ.75 ರಷ್ಟು ಸಬ್ಸಿಡಿಯೊಂದಿಗೆ 5 ಕುರಿಗಳನ್ನು ಕುಕ್ಕುಟ ಸಹಕಾರ ಮಂಡಳಿಯಿಂದ ನೀಡಲಾಗುತ್ತಿದೆ. ಕುರಿ ಸಾಕಾಣಿಕೆ ಕುರಿತು ಮಳವಳ್ಳಿಯಲ್ಲಿರುವ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

ಕುರಿ ಸಾಕಾಣಿಕೆದಾರರ ಸಹಕಾರಿ ಸಂಘಗಳನ್ನು ಇಡೀ ರಾಜ್ಯಾದ್ಯಂತ ಪ್ರಾರಂಭಿಸಲು ಚರ್ಚೆ ನಡೆ–ಯುತ್ತಿದೆ. ಪ್ರಾಯೋಗಿಕವಾಗಿ ಬಂಗಾರಪೇಟೆ, ರೋಜರನಹಳ್ಳಿ, ಬಾಗೇಪಲ್ಲಿ ತಾಲೂಕಿನ ಚೇಳೂರು ಸಂತೆಯಲ್ಲಿ ಕುರಿ ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಶೀಘ್ರದಲ್ಲಿಯೇ ಆರಂಭವಾಗಲಿದೆ. ಇದು ಪ್ರಾರಂಭವಾದ ಮೇಲೆ ಕುರಿಗಳಿಗೆ ದರ ಪಟ್ಟಿಯನ್ನು ಅಂಟಿಸಲಾಗುವುದು. ಪ್ರಾಮಾಣಿಕ ಸಹಕಾರಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಿದರೆ ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ವಿವರಿಸಿದರು.

ಕೋಳಿ ಸಾಕಾಣಿಕಾ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಜಯರಾಂ ಮಾತನಾಡಿ ಕೋಲಾರ ಜಿಲ್ಲೆಯಲ್ಲಿ 16 ಕೋಳಿ ಸಹಕಾರ ಸಂಘಗಳ ನೊಂದಣಿಯಾಗಿದ್ದು, 2–3 ಸಂಘಗಳನ್ನು ಹೊರತುಪಡಿಸಿ ಉಳಿದ ಸಂಘಗಳು ನಿಷ್ಕ್ರೀಯವಾಗಿದೆ. ಜಿಲ್ಲೆಯಲ್ಲಿರುವ ಬಹುತೇಕ ಕೋಳಿ ಸಾಕಾಣಿಕೆದಾರರು ಖಾಸಗಿ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು ಕೋಳಿ ಸಾಕಾಣಿ–ಕೆ ಮಾಡುತ್ತಿದ್ದಾರೆ. ಕೋಳಿ ಸಾಕಾಣಿಕೆ ಕೃಷಿಯೋ ಅಥವಾ ಕೈಗಾರಿಕೆಯೋ ಎಂಬ ಬಗ್ಗೆ ಸರ್ಕಾರದ ಹಂತದಲ್ಲಿ ಚರ್ಚೆ ನಡೆಯುತ್ತಿದ್ದು, ಈ ಬಗ್ಗೆ ಶೀಘ್ರದಲ್ಲಿ ಅಂತಿಮ ತೀರ್ಮಾನ ಬರಲಿದೆ. ಸಹಕಾರಿ ಕೋಳಿ ಹ್ಯಾಚರಿ ಘಟಕ ವೆಚ್ಚ 16 ಲಕ್ಷ ಶೇ.50 ರಷ್ಟು ಸಬ್ಸಿಡಿ, ಕೋಳಿ ಆಹಾರ ಘಟಕ ವೆಚ್ಚ 10 ಲಕ್ಷ ಶೇ. 50 ರಷ್ಟು ಸಬ್ಸಿಡಿ, ಮಾಂಸ ಮಾರಾಟ ಮಳಿಗೆ ಘಟಕ ವೆಚ್ಚ 7 ಲಕ್ಷ ಶೇ.50 ರಷ್ಟು ಸಬ್ಸಿಡಿ ದೊರೆಯಲಿದೆ ಎಂದು ವಿವರಿಸಿದರು.

ಕೆ.ಪಿ.ಆರ್.ಎಸ್ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿರವರು ಮಾತನಾಡಿ ಬೆಂಗಳೂರು ಮಹಾ ನಗರದ ಇಂದಿನ ಜನಸಂಖ್ಯೆ 1 ಕೋಟಿ ದಾಟಿದೆ. ಇವರಿಗೆ ಅಗತ್ಯವಿರುವ ಮಾಂಸ, ತರಕಾರಿ ಇನ್ನಿತರೇ ಸಾಮಗ್ರಿಗಳನ್ನು ಪೂರೈಕೆ ಮಾಡುವುದು ದೊಡ್ಡ ಸವಾಲಾಗಿದೆ. ಬೆಂಗಳೂರಿಗೆ ಸಮೀಪ ಇರುವ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ ಎಂದರು.

ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಪಿ.ಆರ್. ಸೂರ್ಯನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕ್ಷೇಮಾಭಿವೃದ್ಧಿ ಸಂಘ ರಾಜ್ಯ ಮುಖಂಡರುಗಳಾದ ಜೆ.ಸಿ.ಮಂಜುನಾಥ್, ಮುನಿವೆಂಕಟೇಗೌಡ, ಕೆ.ಪಿ.ಆರ್.ಎಸ್ ರಾಜ್ಯ ಮುಖಂಡರಾದ ಸಿ.ಗೋಪಿನಾಥ್, ಆರ್. ಚಂದ್ರತೇಜಸ್ವಿ, ಜಿಲ್ಲಾ ಮುಖಂಡರಾದ ಪಿ.ಶ್ರೀನಿವಾಸ್, ಗಂಗಮ್ಮ, ಭಾಗವಹಿಸಿದರು, ಟಿ.ಎಂ.ವೆಂಕಟೇಶ್ ಸ್ವಾಗತಿಸಿದರು.





JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086 Editor : G.V.SRIRAMA REDDY